
ಗೌರಿ ಲಂಕೇಶರ

ಲಂಕೇಶ್

ಜನವರಿ 31, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಕಾಕತ್ಕರ್ ಪತ್ನಿ ಆತ್ಮ'ಹತ್ಯೆ'



ಸಂಕೇಶ್ವರ ಎಲ್ಲಿ?



ದರ್ಶನಾಪುರನ ದಶಾವತಾರ

ವಿಜಯ್ ಟೈಮ್ಸ್ ಫಿನಿಷ್!

ದಾವಣಗೆರೆ ಕಮ್ಯೂನಿಸ್ಟ್ ಪಕ್ಷ ಪುಂಡುದನಗಳ ಗೋಮಾಳ




ಅನ್ನವನೆಂದೂ ಇಕ್ಕದವರು, ನನ್ನಿಯನೆಂದೂ ನುಡಿಯದವರು, ಮೊಟ್ಟೆ ಮಾತ್ರ ಬೇಡ ಎನ್ನುತ್ತಿದ್ದಾರೆ!

ಈ ನಾಡಿನ ಬಡಮಕ್ಕಳ ಮತ್ತು ದಲಿತ ಮಕ್ಕಳ ಹಸಿವು ಹಾಗೂ ಶಿಕ್ಷಣದ ಬಗ್ಗೆ ಎಂದೂ ತಲೆ ಕೆಡಿಸಿಕೊಳ್ಳದಿದ್ದ ಮಠಾಧೀಶರುಗಳು, ಚಡ್ಡಿ ಮಹಿಮರು ಈಗ ಇದ್ದಕ್ಕಿದ್ದಂತೆ ಈ ನಾಡಿನ ಮಕ್ಕಳ ಆಹಾರ ಮತ್ತು ಶಿಕ್ಷಣದ ಬಗ್ಗೆ ಶಿಕ್ಕಾಪಟ್ಟೆ ಮಾತಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಕೊಡಬೇಕು ಎನ್ನುವುದರ ಬಗ್ಗೆ ಈ ಮಹಾಶಯರು ಎಂದೂ ಒಂದು ಸಣ್ಣ ಧ್ವನಿಯನ್ನೂ ಎತ್ತಿದ ಉದಾಹರಣೆಯಿಲ್ಲ. ಬದಲಾಗಿ ಸರ್ಕಾರಿ ಶಾಲೆಗೆ ಖರ್ಚು ಮಾಡುತ್ತಿದ್ದ ಸರ್ಕಾರಿ ಹಣದಿಂದ ಶ್ರೀಮಂತರ ಕಾಲೋನಿಗಳಲ್ಲಿ ರಸ್ತೆ ಹಾಕಬೇಕೆಂಬುದು ಅಥವಾ ಸಂಪನ್ನರಿಗೆ ಮತ್ತಷ್ಟು ಸೌಲಭ್ಯಗಳನ್ನು ಒದಗಿಸಬೇಕೆಂಬುದು ಇವರ ಆಗ್ರಹವಾಗಿತ್ತು. ಈಗ ಹಲವಾರು ಒತ್ತಡಗಳ ಕಾರಣಕ್ಕೆ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮ ದೇಶಾದ್ಯಂತ ಚಲಿತದಲ್ಲಿದೆ. ಇದು ಪ್ರಚಾರಕ್ಕೆ ಬಂದಿದ್ದು ಮಕ್ಕಳಿಗೆ ಊಟ ಕೊಡುತ್ತಿದ್ದೇವೆ ಎಂಬ ರಾಜಕೀಯ ಪಕ್ಷಗಳ ಅಬ್ಬರದಿಂದ, ಮಾತ್ರವಲ್ಲ ಅವರ ಬೇಜವಾಬ್ದಾರಿಯಿಂದ ಬಿಸಿಯೂಟದಲ್ಲಿ ಅಕ್ಕಿ ಬೇಳೆಯೊಂದಿಗೆ ಹುಳ, ಹಲ್ಲಿ ಬೆರೆತು ಮಕ್ಕಳು ಆಸ್ಪತ್ರೆ ಸೇರಿದ್ದರಿಂದ ಕೂಡಾ! ಆಗ ಇದೇ ಜನಗಳು ಮಕ್ಕಳಿಗೆ ಆರೋಗ್ಯ ಪೂರಿತ ಅಡುಗೆ ಬೇಕು ಎಂದು ಎಲ್ಲೂ ಸತ್ಯಾಗ್ರಹ ಮಾಡಲಿಲ್ಲ. ಬದಲಿಗೆ ಇವರ ಅನುಯಾಯಿಗಳು ಹಲವು ಕಡೆ ಮಧ್ಯಾಹ್ನದ ಬಿಸಿಯೂಟವನ್ನೇ ರದ್ದುಪಡಿಸಿ ಎಂದು "ಆಗ್ರಹಿಸಿದ್ದರು"!

ಚಾರ್ವಾಕ

- ಶಿವಸುಂದರ್-

ಈಗ ಮಕ್ಕಳ ಮೇಲೆ ಎಲ್ಲಿಲ್ಲದ ಕಾಳಜಿ ತೋರಿಸುತ್ತಾ ಯಾವ ಕಾರಣಕ್ಕೂ ಮೊಟ್ಟೆ ಕೊಡಬಾರದು, ಕೊಟ್ಟರೆ ಹಾಲು ಮತ್ತು ಬಾಳೆಹಣ್ಣು ಮಾತ್ರ ಕೊಡಬೇಕೆಂದು ಹಠ ಹಿಡಿದಿದ್ದಾರೆ. ಇದಕ್ಕೆ ಅವರು ಕೊಡುತ್ತಿರುವ ಕಾರಣಗಳು ಸಜ್ಜನಿಕೆ ಮುಖವಾಡದ ಒಳಗಿರುವ ಅತ್ಯಂತ ಮಾನವ ದ್ವೇಷಿ ಮತ್ತು ಕ್ರೂರ ಮನಸ್ಸತ್ವವನ್ನು ಬಯಲುಗೊಳಿಸಿದೆ. ಮೊಟ್ಟೆ ಕೊಡಬೇಡಿ ಎನ್ನುವುದಕ್ಕೆ ಇವರು ಕೊಡುತ್ತಿರುವ ಕಾರಣಗಳೇನು? "ಮೊಟ್ಟೆ ತಿಂದರೆ ಮಕ್ಕಳ ಮನಸ್ಸು ವಿಕೃತಿಯಾಗುತ್ತದೆ. ಮೊಟ್ಟೆ ತಿಂದರೆ ವೀರಪ್ಪನ್ ಮತ್ತು ಸದ್ದಾಂ ಹುಸೇನ್‌ಗಳು ಸೃಷ್ಟಿ ಯಾಗುತ್ತಾರೆ.." ಇತ್ಯಾದಿ. ಅಂದರೆ ಈ ದೇಶ ದಲ್ಲಿ ಮಾಂಸಾಹಾರಿಗಳಾಗಿರುವ ಈ ದೇಶದ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು.... ಸಾರಾಂಶದಲ್ಲಿ ಬ್ರಾಹ್ಮಣ ವರ್ಗದವರನ್ನು ಬಿಟ್ಟು ಮಿಕ್ಕೆಲ್ಲರೂ ವಿಕೃತ ಮನಸ್ಸುಳ್ಳವರು ಮತ್ತು ಸಮಾಜ ಘಾತುಕರಾಗುವ ಸಾಧ್ಯತೆ ಇದೆಯೆಂದು ಇವರು ಹೇಳುತ್ತಿದ್ದಾರೆ. ಇದು ಇಡೀ ಅಬ್ರಾಹ್ಮಣರಿಗೆ ಕೆಲವು ಬೆರಳೆಣಿಕೆಯಷ್ಟು ಜನ ಮಾಡುತ್ತಿರುವ ಬಹಿರಂಗ ಅವಮಾನ ಮತ್ತು ಜಾತಿ ನಿಂದನೆಯಾಗಿದೆ.




ಆಹಾರಾಭ್ಯಾಸಗಳಿಗೂ ಮನುಷ್ಯ ಸ್ವಭಾವಗಳಿಗೂ ನಂಟು ಹಾಕುತ್ತಿರುವ ಈ ದುರ್ಜನರು ಸಾರಾಂಶದಲ್ಲಿ ಸಂಸ್ಕಾರದ ಪ್ರಶ್ನೆಯನ್ನು ಎತ್ತುತ್ತಾ ಜನಾಂಗೀಯ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ಪ್ರಯತ್ನ ನಡೆಸಿದ್ದಾರೆ. ಮತ್ತೊಂದು ಕಡೆ ಚೆಡ್ಡಿಗಳಿಗೆ ಮಾತ್ರ ನ್ಯಾಯ ಒದಗಿಸಲು ಕಾನೂನೆಲ್ಲಾ ತಿರುಚುವ ಮಾಜಿ ನ್ಯಾಯಾಧೀಶನೊಬ್ಬ 'ಸರ್ಕಾರ ಮೊಟ್ಟೆ ಕೊಟ್ಟರೆ ಮೇಲ್ಜಾತಿ ಮಕ್ಕಳ ಮಾನವ ಹಕ್ಕು ಹರಣವಾಗುತ್ತದೆ' ಎಂದು ಊಳಿಟ್ಟಿದ್ದಾನೆ. ಅಂದರೆ ಮೊಟ್ಟೆ ತಿನ್ನುವವರನ್ನು ಈ ಮಹಾಶಯ ಮಾನವರ ಪಟ್ಟಿಗೂ ಸೇರಿಸಿಲ್ಲ!!

ಈ ಹಿಂದೆಯೂ ಸಮಾಜದ ಮತ್ತು ಮಾಧ್ಯಮಗಳ ಗಮನಕ್ಕೆ ಬಾರದೆ ಮತ್ತೊಂದು ಅನ್ಯಾಯವೂ ಮಕ್ಕಳಿಗೆ ಇದೇ ಜನರಿಂದ ನಡೆಯುತ್ತಾ ಬರುತ್ತಿದೆ. ಅದು ಸರ್ಕಾರ ಮತ್ತು ಈ ಮೇಲ್ಜಾತಿ ಸಮಾಜ ದಿಂದ ಎಲ್ಲಾ ಮಕ್ಕಳಿಗಾಗುತ್ತಿರುವ ಅನ್ಯಾಯ. ನೂರಾರು ಮಕ್ಕಳಿಗೆ ಅಡುಗೆ ಮಾಡಿ ಬಡಿಸುವುದು, ಅದೂ ಪ್ರತಿದಿನ.... ಹುಡುಗಾಟದ ಮಾತಲ್ಲ, ದೈಹಿಕ ಶ್ರಮ ಮಾಡುವವರಿಗೆ ಮಾತ್ರ ದಿನನಿತ್ಯ ಈ ಜವಾಬ್ದಾರಿ ಹೊರಲು ಸಾಧ್ಯ. ಪ್ರತಿ ಹಳ್ಳಿಯಲ್ಲೂ ಈ ರೀತಿ ದೈಹಿಕ ಶ್ರಮದಿಂದಲೇ ಬದುಕುವವರು ಯಾರು? ದಲಿತರೇ ಅಲ್ಲವೇ? ಆದರೆ ಈ ನಾಗರಿಕ ಸಮಾಜ ದಲಿತರು ಅಡುಗೆ ಮಾಡಿದ್ದನ್ನು ತಿನ್ನುವಷ್ಟು ನಾಗರಿಕವಾಗಿಲ್ಲವಲ್ಲ. ಹೀಗಾಗಿ ಸುಮಾರು ಹಳ್ಳಿಗಳಲ್ಲಿ ದಲಿತರು ಅಡುಗೆ ಮಾಡಿದ್ದಕ್ಕೆ ಬಿಸಿಯೂಟವನ್ನೆ ಬಹಿಷ್ಕರಿಸಿರುವ ಹಲವಾರು ಉದಾಹರಣೆಗಳು ಕಂಡುಬರುತ್ತಿವೆ. ಆ ಮೂಲಕ ಹಸುಳೆಗಳ ಮೆದುಳಿನಲ್ಲಿ ಈಗಲಿಂದಲೇ ಜಾತಿ ಸಗಣಿಯನ್ನು ತುರುಕುವ ಕೆಲಸವನ್ನು ಸವರ್ಣೀಯ ನಾಗರಿಕ ಸಮಾಜ ಮಾಡುತ್ತಿದೆ. ಅದಕ್ಕೆ ಕುಮ್ಮಕ್ಕಾಗಿರುವ ಸರ್ಕಾರ ಅಂಥಾ ಹಳ್ಳಿಗಳಲ್ಲಿ ಬಿಸಿಯೂಟವನ್ನೇ ರದ್ದು ಪಡಿಸುವ ಮಟ್ಟಕ್ಕೆ ಹೋಗಿದೆ.

ಈಗ ಗೋಲ್ವಾಲ್ಕರ್ ಹೆಸರಲ್ಲಿ ಸಾಮಾಜಿಕ ಸಾಮರಸ್ಯದ ಮಾತಾಡುವ ಈ ಜನ ಆಗ 'ದಲಿತರು ಮಾಡಿದ ಬಿಸಿಯೂಟ ತಿನ್ನಿ, ಎಂದೇನೂ ಹೇಳಲಿಲ್ಲ.

ಇತ್ತೀಚೆಗೆ ಅದರ ಬಗ್ಗೆ ಸಂಶೋಧನೆ ನಡೆಸಿರುವ ಸ್ವಾಯತ್ತ ಸಂಸ್ಥೆಯೊಂದು ಈ ಜಾತಿ ಬೇಧ ತಮಿಳು ನಾಡಿನಲ್ಲಿ ಮತ್ತು ಕರ್ನಾಟಕದಲ್ಲಿ ಶೇ. 50ಕ್ಕಿಂತ ಜಾಸ್ತಿ ಇದೆ ಎಂದು ವರದಿ ಮಾಡಿದೆ. ಈ ಎರಡು ರಾಜ್ಯಗಳನ್ನು ಮುಂದುವರೆದ ರಾಜ್ಯಗಳೆಂದೂ, ಪ್ರಗತಿಪರ ರಾಜ್ಯಗಳೆಂದೂ ಕರೆಯಲಾಗುತ್ತದೆ!

ಜಲ ಪ್ರಳಯ.. ಅಮೆರಿಕದ ದುರಾಸೆ ಮತ್ತು ಅಧಿಕಾರ ಲಾಲಸೆಯ ಫಲ



ಕಲ್ಲು ಕೋಳಿ ಕೂಗಿದರೆ, ವಿಧವೆ ರಾಜ್ಯವಾಳಿದರೆ ಲೋಕದಲ್ಲಿ ಪ್ರಳಯ ಸಂಭವಿಸುತ್ತದೆ ಎಂಬುದೆಲ್ಲಾ ಮೌಢ್ಯ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಮೌಲ್ಯ ಎಂಬುದನ್ನೂ ಈಗ ಎಲ್ಲರೂ ಬಲ್ಲರು. ಆದರೆ ಪ್ರಳಯವೇ ಸಂಭವಿಸುವುದಿಲ್ಲ ಎಂದು ಇದೀಗ ಯಾರೂ ಎದೆತಟ್ಟಿ ಹೇಳಲಾಗದ ಪರಿಸ್ಥಿತಿ ಮಾತ್ರ ಅತ್ಯಂತ ವೈಜ್ಞಾನಿಕವಾಗಿಯೇ ಸೃಷ್ಟಿಯಾಗುತ್ತಿದೆ! ಇದಕ್ಕೆ ಕಾರಣ ಕಲ್ಲು ಕೋಳಿಯೂ ಅಲ್ಲ, ಹತಭಾಗ್ಯ ವಿಧವೆಯರೂ ಅಲ್ಲ, ಅದಕ್ಕೆ ಕಾರಣ ಜಗತ್ತನ್ನೇ ಲಾಭಕ್ಕಾಗಿ ಮುಕ್ಕುತ್ತಿರುವ, ನಿಸರ್ಗವನ್ನೆಲ್ಲಾ ತನ್ನ ಖಾಸಗಿ ಸಂಪತ್ತೆಂದೇ ಭಾವಿಸಿ ಭೋಗಿಸುತ್ತಿರುವ ಅತ್ಯಂತ ನಾಗರಿಕ ಮತ್ತು ವೈಜ್ಞಾನಿಕ ಎಂದು ಹೇಳಿಕೊಳ್ಳುವ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ. ಅಮೆರಿಕದಲ್ಲಿರುವ ಒಂದು ಜಾಗತಿಕ ಹವಾಮಾನ ಸಂಸ್ಥೆ ಇತ್ತೀಚೆಗೆ ಮಾಡಿರುವ ಅಧ್ಯಯನದ ಪ್ರಕಾರ ಜಗತ್ತಿನ ಹವಾಮಾನದ ತಾಪಮಾನ ಮುಂದಿನ ಎಪ್ಪತ್ತು ವರ್ಷಗಳಲ್ಲಿ 2.5 ಸೆಂಟಿಗ್ರೇಡ್ ನಿಂದ 4 ಸೆಂಟಿಗ್ರೇಡ್‌ನಷ್ಟು ಹೆಚ್ಚುತ್ತದೆ. ಅಷ್ಟು ಮಾತ್ರವಲ್ಲ ಕಳೆದ ಶತಮಾನದಲ್ಲಿ ಜಗತ್ತಿನ ತಾಪಮಾನ 1ಡಿಗ್ರಿ ಸೆಂಟಿಗ್ರೇಡ್‌ನಷ್ಟು ಹೆಚ್ಚಾಗಿತ್ತು ಎಂದು ವರದಿ ಮಾಡಿದೆ. ಇದರ ಪರಿಣಾಮವೇನಾಗುತ್ತದೆ?

ಜಗತ್ತಿನ ತಾಪಮಾನ ಹೆಚ್ಚಾಗುತ್ತಿದ್ದಂತೆ ಭೂಗೋಳದ ಉತ್ತರ ಮತ್ತು ದಕ್ಷಿಣ ಧೃವಗಳಲ್ಲಿ ಹೆಪ್ಪುಗಟ್ಟಿ ನಿಂತಿರುವ ಹಿಮಬಂಡೆಗಳು ಕರಗತೊಡಗುತ್ತವೆ. ಇದರಿಂದ ಸಮುದ್ರದ ನೀರಿನ ಮಟ್ಟ ಹೆಚ್ಚತೊಡಗುತ್ತದೆ. ಇದರಿಂದ ಸಮುದ್ರದ ತಡಿದೇಶಗಳಾದ ಆಸ್ಟ್ರೇಲಿಯಾ, ನೆದರ್ಲ್ಯಾಂಡ್ ಮತ್ತು ಬೇರೆ ದೇಶಗಳು ಸಮುದ್ರದಲ್ಲಿ ಮುಳುಗುತ್ತವೆ. ಜಾಗತಿಕ ತಾಪಮಾನ ಜಾಸ್ತಿಯಾಗುತ್ತಿದ್ದಂತೆ ಸಮುದ್ರದ ತಾಪಮಾನವೂ ಜಾಸ್ತಿಯಾಗಿ ಜಲಚರಗಳು ಸಾಯುತ್ತವೆ. ಇದರಿಂದ ಅದನ್ನೇ ನೆಚ್ಚಿಕೊಂಡು ಬದುಕು ಸಾಗಿಸುತ್ತಿರುವ ಕೋಟ್ಯಾಂತರ ಮೀನುಗಾರರ ಬದುಕೂ ಸಮುದ್ರ ಪಾಲಾಗುತ್ತದೆ.

ಇಷ್ಟಲ್ಲದೆ ಹವಾಮಾನದಲ್ಲೂ ಸಾಕಷ್ಟು ವೈಪರೀತ್ಯ ಸಂಭವಿಸಿ ಮರಳುಗಾಡಿನಲ್ಲಿ ಪ್ರವಾಹದಂತ ಮಳೆಯೂ, ನಿತ್ಯ ಮಳೆ ಬೀಳುವ ಪ್ರದೇಶಗಳಲ್ಲಿ ಬರಗಾಲವೂ ವ್ಯಾಪಿಸುತ್ತದೆ. ಹೀಗಾಗಿಯೇ ಈ ಬಾರಿ ರಾಜಸ್ಥಾನದಲ್ಲಿ ಪ್ರವಾಹದಂತ ಮಳೆಯೂ, ಅಸ್ಸಾಮಿನಲ್ಲಿ ಬರಗಾಲವೂ ಸಂಭವಿಸಿತು. ಇದರಿಂದ ಪರಂಪರಾನುಗತವಾಗಿ ನಿರ್ದಿಷ್ಟ ಬಗೆಯ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಬಂದಿರುವ ರೈತರ ಕೃಷಿ ಚಕ್ರ ಅಸ್ತವ್ಯಸ್ತವಾಗಿ ಅವರ ಬದುಕು ಕಂಗಾಲಾಗುತ್ತದೆ. ಇದಕ್ಕಿಂತ ಪ್ರಳಯವೆಂಬುದು ಬೇರೇನಾದರೂ ಇರಲು ಸಾಧ್ಯವೆ? ಆದರೆ ಇದಕ್ಕೆ ಕಾರಣವೇನು? ಜಗತ್ತಿನ ತಾಪಮಾನ ಏರುತ್ತಿರಲು ಕಾರಣ ನಿಸರ್ಗದ ಸಹಜ ಗತಿಚಕ್ರವನ್ನು ಕೆಡಿಸಿ, ಕಾಡನ್ನೆಲಾ ನುಣ್ಣಗೆ ಬೋಳಿಸಿ, ಖನಿಜ ಸಂಪತ್ತನ್ನೆಲ್ಲಾ ಬಗೆದು ಬಗೆದು ಲಾಭ ಮಾಡುತ್ತಿರುವ. ಆ ಲಾಭದಲ್ಲಿ ಐಷರಾಮಿ ಬದುಕನ್ನು ಸಾಗಿಸುತ್ತಾ ಮತ್ತಷ್ಟು ನಿಸರ್ಗವನ್ನು ಹದಗೆಡಿಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣ. ಆದರೆ ಅದರ ಪರಿಣಾಮ ಮಾತ್ರ ಇಡೀ ಭೂಲೋಕದ ಜನತೆ ಅನುಭವಿಸಬೇಕು. ಆದ್ದರಿಂದಲೇ ಈ ಭೂಗೋಳ ಉಳಿಯಬೇಕೆಂದರೆ ಬಂಡವಾಳಶಾಹಿ ವ್ಯವಸ್ಥೆಯನ್ನು ಭೂಮಿಯಿಂದಲೇ ಮೂಲೋತ್ಪಾಟನೆ ಮಾಡಲೇ ಬೇಕು.

ಮಹಿಳೆಯೋ? ಅಂಗಾಂಗಗಳ ಸ್ಪೇರ್ ಪಾರ್ಟ್ಸ್ ಅಂಗಡಿಯೋ!

ಮಹಿಳೆಯೆಂದರೆ ಮಾತೆ, ಮಹಿಳೆಯೆಂದರೆ ಕುಟುಂಬ ಪೊರೆಯುವವಳು. ಎಲ್ಲಿ ಹೆಂಗಸರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನರ್ತಿಸುತ್ತಾರೆ.... ಒಂದೇ, ಎರಡೇ.. ಇಷ್ಟನ್ನೇ ಓದಿದರೆ ಪ್ರಾಯಶಃ ಮಹಿಳೆಗೆ ಭಾರತದಲ್ಲಿರುವಷ್ಟು ಸ್ಥಾನಮಾನ ಯಾವ ದೇಶದಲ್ಲೂ ಇಲ್ಲ ಎಂದುಕೊಳ್ಳಬೇಕು. ಆದರೆ ವಾಸ್ತವ ಏನು? ಬದುಕಿನ ಮಾನದಂಡಗಳಿಗೆ ಬಂದರೆ ಇವ್ಯಾವುದೂ ನಿಜವಲ್ಲ, ಈ ದೇಶದಲ್ಲಿ ಎರಡು ನಿಮಿಷಗಳಿಗೊಮ್ಮೆ ಒಬ್ಬ ಹೆಂಗಸಿನ- ಅದು ಯುವತಿಯೇ ಆಗಬೇಕೆಂದೇನೂ ಇಲ್ಲ, ಮೂರು ವರ್ಷದ ಕೂಸಿನಿಂದ ಹಿಡಿದು ಐವತ್ತು ವರ್ಷದ ಮುದುಕಿಯವರೆಗೆ ಆದರೂ ಸರಿ- ಮಾನಭಂಗವಾಗುತ್ತದೆ. ಹತ್ತು ನಿಮಿಷಕ್ಕೊಬ್ಬ ಮಹಿಳೆ ಅಸಹಜವಾಗಿ ಮರಣವನ್ನಪ್ಪುತ್ತಾಳೆ. ಅಂದರೆ ವರದಕ್ಷಿಣೆ ತರಲಿಲ್ಲವೆಂಬ ನೆಪಮಾಡಿ ಕೊಲ್ಲಲಾಗುತ್ತದೆ. ಇದೆಲ್ಲ ಎಲ್ಲರಿಗೂ ಗೊತ್ತಿರುವ ಸಂಗತಿ.

ಈ ಸಾಲಿಗೆ ಇತ್ತೀಚೆಗೆ ಮತ್ತೊಂದು ಸೇರ್ಪಡೆ. ಇತ್ತೀಚೆಗೆ ಆರೋಗ್ಯ ಸಂಸ್ಥೆಯೊಂದು ನಡೆಸಿರುವ ಅಧ್ಯಯನದ ಪ್ರಕಾರ ಮನುಷ್ಯನ ಅಂಗಾಂಗಗಳಿಗೆ ಬೆಲೆ ಬಂದ ಮೇಲೆ ಗಂಡಸರಿಗಿಂತ ಮಹಿಳೆಯರ ಅಂಗಾಂಗಗಳ ಮಾರಾಟ ಎಲ್ಲಕ್ಕಿಂತ ಭರದಿಂದ ನಡೆಯುತ್ತಿದೆಯಂತೆ. ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್‌ನಿಂದ ಹಿಡಿದು ಬೆಲೆಬಾಳುವ ಮನುಷ್ಯನ ಅಂಗಾಂಗಳ ಯಾವುದೇ ಮಾರಾಟದಲ್ಲಿ ಮಹಿಳೆಯ ಅಂಗಾಂಗಳೆ ಹೆಚ್ಚು ಬಿಕರಿಯಾಗುತ್ತಿವೆ. ಕಾರಣ ಬಡತನವೇ.. ಆದರೆ ಗಂಡಸಿಗಿಂತ ಹೆಚ್ಚು ಹೆಂಗಸಿನ ಅಂಗಾಂಗಳು ಮಾತ್ರ ಬಿಕರಿಯಾಗುತ್ತಿರುವುದಕ್ಕೆ ಕಾರಣ ಕೇವಲ ಬಡತನವಲ್ಲ, ಈ ದೇಶದಲ್ಲಿ ಮಹಿಳೆಗೆ ಇರುವ ದ್ವಿತೀಯ ದರ್ಜೆ ಸ್ಥಾನವೇ ಅದಕ್ಕೆ ಕಾರಣ. ಅದು ಮಾತ್ರವಲ್ಲ, ಆ ಅಧ್ಯಯನ ಇನ್ನೂ ಒಂದು ಗಾಬರಿಗೊಳಿಸುವ ಮಾಹಿತಿಯನ್ನು ಹೊರಹಾಕಿದೆ. ಅದರ ಪ್ರಕಾರ ಗಂಡನಿಗೆ ಕಿಡ್ನಿ ಅಗತ್ಯವಾದರೆ ಸಹಜವಾಗಿ ಹೆಂಡತಿ ಕೊಡುತ್ತಾಳೆ. ಆದರೆ ಹೆಂಡತಿಗೆ ಕಿಡ್ನಿ ಅಗತ್ಯಬಿದ್ದರೆ ಗಂಡ ಕೊಡುವುದು ತೀರಾ ಅಪರೂಪ. ಏಕೆಂದರೆ ಗಂಡಸು ದುಡಿಯುವವನಾದ್ದರಿಂದ ಕಿಡ್ನಿ ಕೊಡಬಾರದೆಂಬ ಒತ್ತಾಯ ಸಮಾಜದಿಂದ ಕುಟುಂಬದಿಂದ ಹೆಚ್ಚಿರುತ್ತದಂತೆ. ಎಲ್ಲಿ ಹೆಂಗಸರು ಮಾರಲ್ಪಡುತ್ತಾರೋ ಅಲ್ಲಿ ಅನಾಗರೀಕತೆ ತಾಂಡವವಾಡುತ್ತಿರುತ್ತದೆ.!

No Comments


"ಸಾಲ ಮನ್ನಾದ ವಿಷಯದಲ್ಲಿ ನಾನು ನಾಯಕನೂ ಆಗಬಹುದು ಅಥವಾ ಖಳನಾಯಕನೂ ಆಗಬಹುದು"

-ಹೆಚ್.ಡಿ.ಕುಮಾರಸ್ವಾಮಿ



"ಬಿಜೆಪಿ ಹಿಂದೂತ್ವದ ಕಡೆಗೆ ವಾಪಸ್ ಮರಳುತ್ತದೆ"

-ಸದಾನಂದಗೌಡ



"ಸರ್ಕಾರ ನೀಡಿರುವ ಎಲ್ಲಾ ಭರವಸೆಗಳನ್ನು ಈಡೇರಿಸಬೇಕೆಂದರೆ ಹಲವಾರು ಬಜೆಟ್‌ಗಳೆ ಬೇಕಾಗಬಹುದು"

-ಸತ್ಯನಾರಾಯಣ, ಅಂಕಣಕಾರ


ನಂಬಿದ್ರೆ ನಂಬಿ ಬಿಟ್ರೆ ಬಿಡಿ



"ಬಿಗ್ ಬ್ರದರ್ ಶೋನಲ್ಲಿ ಯಾರೂ ವರ್ಣಬೇಧ ತೋರಿಸಿಲ್ಲ, ನಾನು ಸಿಟ್ಟನಲ್ಲಿ ಮಾತಾಡಿದ ಅಷ್ಟೆ"


-ಶಿಲ್ಪಾಶೆಟ್ಟಿ

"2020ರ ವೇಳೆಗೆ ಭಾರತ ಸಂಪೂರ್ಣ ಅಭಿವೃದ್ಧಿಯಾಗಿರುತ್ತ ಪ್ರತಿ ಹಳ್ಳಿಗೂ ನೀರು, ಶಿಕ್ಷಣ, ಆರೋಗ್ಯ ವಿದ್ಯುತ್ ಎಲ್ಲವೂ ಲಭ್ಯವಾಗಿರುತ್ತದೆ"



-ಅಡ್ವಾ

ವಾರದ ಸಂಶೋಧನೆ:



"ಇಂಗ್ಲಿಷ್ ಕಲಿಯದಿದ್ದರೆ ಜ ಉಗ್ರಗಾಮಿಗಳು ಮತ್ತು ನಕ್ಸಲೈಟರೂ ಆಗುತ್ತಾರೆ"

- ಡಿ.ಟಿ. ಜಯಕುಮಾರ

ವಾರದ ವಿಕೃತಿ:

"ಮೊಟ್ಟೆ ತಿಂದರೆ ಮಕ್ಕಳ ಬುದ್ಧಿ ವಿಕೃತಿ ಆಗುತ್ತದೆ"

-ತರುಣಸಾಗರ, ಜೈನ ಮು


ವಾರದ ಮೌಢ್ಯ:

"ಧರ್ಮ ವಿರೋಧ ಜಾತ್ಯತೀತತೆ ಆಗಲಾರದು"

ವಾರದ ಆಶ್ಚರ್ಯ:

"ಬಿಳಿಯರಿಂದ ನಾಯಿ ಎಂದು ಕರೆಸಿಕೊಳ್ಳಲ್ಪಟ್ಟ ಶಿಲ್ಪಾಶೆಟ್ಟಿಯ ಬೆಂಬಲಕ್ಕೆ ಇಂಗ್ಲೆಂಡಿನ ಪ್ರಾಣಿದಯಾ ಸಂಘ..!"

-ಪತ್ರಿಕಾ ವರದಿ



ವಾರದ ವಿವೇಕ





"ಪಾಶ್ಚಾತ್ಯರೆದುರು ಮಂಡಿಯೂರಿ ಅವರ ಬೂಟು ನೆಕ್ಕಲು ಯಾಕೆ ಪೆರೇಡ್ ಮಾಡಬೇಕು? ಬಿಗ್ ಬ್ರದರ್‌ನಂತ ಟಿ.ವಿ.ಶೋನಲ್ಲಿ ಅವಮಾನ ಆಗುತ್ತೆ ಅಂತ ಗೊತ್ತಿದ್ದರೂ ಮೂರು ಕೋಟಿ ರುಪಾಯಿಯ ಎಂಜಲು ಕಾಸಿಗೆ ಆಸೆಪಟ್ಟು ಯಾಕೆ ಭಾಗವಹಿಸಬೇಕು..?"

- ಮಹೇಶ್ ಭಟ್, ಶಿಲ್ಪಾ ಶೆಟ್ಟಿ ಪ್ರಕರಣದ ಬಗ್ಗೆ..

ಕಪಟ ಮಿತ್ರರ ರೈತಕಾಳಜಿ

ಈ ಕರಟಕ ದಮನಕರ ನಡುವೆ ಈಗ ಯಾರು 'ನಿಜವಾದ ರೈತರ ಹಿತೈಷಿ' ಎಂಬ ಜಗಳ ಆರಂಭವಾಗಿದೆ. ಆರ್ಥಿಕ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ತಮಗೆ ರಾಜ್ಯದ ರೈತರ ಬಗ್ಗೆ ಅಪಾರ ಕಾಳಜಿ ಇದೆ ಎಂಬಂತೆ, ಕೇವಲ ನಾಲ್ಕು ಪರ್ಸೆಂಟ್ ಬಡ್ಡಿ ಮೇಲೆ ಸಾಲ ಕೊಡುವುದಾಗಿ ಘೋಷಿಸಿದರು. ಇದನ್ನು ಕಂಡು 'ಮಣ್ಣಿನ ಮಗ' ದೇವೇಗೌಡರ ನಿಜವಾದ ಮಗನಾಗಿರುವ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಗೆ ಸುಮ್ಮನಿರುತ್ತಾರೆ. ಅದಕ್ಕೆ ಅವರು ಏಕಾಏಕಿ 'ರೈತರ ಸಾಲ ಮನ್ನಾ' ಎಂದು ಹೇಳಿಬಿಟ್ಟರು.





ಈ 'ರೈತ ನಾಯಕರು' ಇಂತಹ ಹೇಳಿಕೆಗಳನ್ನೇನೋ ನೀಡಿದ್ದಾರೆ. ಆದರೆ ವಾಸ್ತವವಾಗಿ ಅವರಿಬ್ಬರು ಅದೆಷ್ಟೇ ಲಾಗಾ ಹಾಕಿದರೂ ಇವೆರಡು 'ಆಶ್ವಾಸನೆ'ಗಳು ಕಾರ್ಯರೂಪಕ್ಕೆ ಬರುವುದು ಅಸಾಧ್ಯ. ಯಾಕೆಂದರೆ ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳು ರೈತರಿಗೆ ನೀಡುವ ಸಾಲದ ಪ್ರಮಾಣವನ್ನು ಕಡಿತಗೊಳಿಸಿವೆ. ಅಂತಹದ್ದರಲ್ಲಿ ಕೊಡುವ ಸಾಲದ ಮೇಲೆ ಶೇ. ನಾಲ್ಕು ಬಡ್ಡಿ ದರವನ್ನು ವಿಧಿಸಬೇಕೆಂದು ಯಡಿಯೂರಪ್ಪ ಹೇಳಿದರೆ, ಅದನ್ನು ಪಾಲಿಸುವುದಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳು ಉಪಮುಖ್ಯಮಂತ್ರಿಯವರ ಖಾಸಗಿ ಸಂಸ್ಥೆಗಳಲ್ಲ. ಅದಕ್ಕೂ ಮಿಗಿಲಾಗಿ, ಇವತ್ತು ಯಾವ ಬ್ಯಾಂಕ್ ಎಷ್ಟು ಸಾಲ ನೀಡಬೇಕು, ಎಷ್ಟು ಬಡ್ಡಿ ವಿಧಿಸಬೇಕು ಎಂದು ನಿರ್ಧರಿಸುತ್ತಿರುವುದು ಕೇಂದ್ರದ ಆರ್ಥಿಕ ಮಂತ್ರಿಯೂ ಅಲ್ಲ, ಆರ್‌ಬಿಐನ ಮುಖ್ಯಸ್ಥರೂ ಅಲ್ಲ, ಬದಲಾಗಿ ವರ್ಲ್ಡ್ ಬ್ಯಾಂಕಿನ ನಿರ್ದೇಶಕ! ಹೀಗಿರುವಾಗ ಯಡಿಯೂರಪ್ಪನವರ ಘೋಷಣೆಗಳಿಗೂ ವಾಸ್ತವಕ್ಕೂ ಸಂಬಂಧವಿದೆಯಾ?

ಇನ್ನು 15,000 ಕೋಟಿ ರೂಪಾಯಿಗಳ ರೈತರ ಸಾಲವನ್ನು ಕುಮಾರಸ್ವಾಮಿ ಮನ್ನಾ ಮಾಡುವುದರ ಬಗ್ಗೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರು ಪಡೆದಿರುವ ಸಾಲದ ಮಾತು ಬದಿಗಿರಲಿ, ಕೋ-ಆಪರೇಟಿವ್ ಬ್ಯಾಂಕುಗಳಿಂದ ಅವರೆಲ್ಲ ಪಡೆದಿರುವ ಸಾಲದ ಮಾತೂ ಪಕ್ಕಕ್ಕಿರಲಿಲ್ಲ, ಈಗಾಗಲೇ ಇದೇ ಕೋ-ಆಪರೇಟಿವ್ ಬ್ಯಾಂಕುಗಳಿಗೆ ಸರ್ಕಾರ ನೀಡಬೇಕಿರುವ 600 ಕೋಟಿ ರೂಪಾಯಿಗಳೇ ಸರ್ಕಾರದ ಬಳಿ ಇಲ್ಲ, ಇನ್ನು ರೈತರ ಸಾಲವನ್ನು ಹೇಗೆ ತೀರಿಸುತ್ತಾರೆ ಕುಮಾರಸ್ವಾಮಿಯವರು?

ಆದರೂ ಕೋ-ಜಾ ಸರ್ಕಾರದ ಮತ್ತು ತಮ್ಮ ವರ್ಚಸ್ಸನ್ನು ಉದ್ಧರಿಸಿಕೊಳ್ಳಲಿಕ್ಕೆ ಇವರಿಬ್ಬರೂ ರೈತರ ಮಿತ್ರರಂತೆ ಪೋಸು ಕೊಡುತ್ತಿದ್ದಾರಲ್ಲದೆ, ಈಗ ಜಗಳಕ್ಕೂ ಇಳಿದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಮೊನ್ನೆ ಒಂದು ತಮಾಷೆ ಪ್ರಸಂಗ ನಡೆಯಿತು.

ರೈತರಿಗೆ ಈ 4% ಬಡ್ಡಿ, ಸಾಲ ಮನ್ನಾ ಯೋಜನೆಗಳನ್ನು ಹೇಗೆ ಕಾರ್ಯರೂಪಕ್ಕೆ ಇಳಿಸಬಹುದೆಂದು ತಿಳಿದುಕೊಳ್ಳಲು ದೂರದ

ಕಂಡಹಾಗೆ



ಊರಿನಿಂದ ಓರ್ವ ತಜ್ಞರನ್ನು ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಕರೆಸಿದರು. ತಜ್ಞರೊಂದಿಗೆ ಭೇಟಿಯನ್ನು ಉಪಮುಖ್ಯಮಂತ್ರಿಗಳ ಮನೆಯಲ್ಲಿ ಕರೆಯಲಾಗಿತ್ತು. ಸ್ವಲ್ಪ ತಡವಾಗಿ ಬಂದ ಮುಖ್ಯಮಂತ್ರಿಗಳು ಆ ತಜ್ಞರನ್ನು ಪ್ರತ್ಯೇಕ ಕೊಠಡಿಗೆ ಕರೆದುಕೊಂಡು ಹೋಗಿ, ಬಾಗಿಲನ್ನು ಮುಚ್ಚಿಕೊಂಡು "ನೀವು ಎಲ್ಲವನ್ನೂ ಆತನ ಮುಂದೆ ಹೇಳಬೇಡಿ. ಸ್ವಲ್ಪ ವಿಷಯಗಳನ್ನು ನೀವೇ ಇಟ್ಟುಕೊಂಡಿರಿ. ಆನಂತರ ನಾವಿಬ್ಬರೂ ಚರ್ಚಿಸೋಣ" ಎಂದರಂತೆ.

ಆಮೇಲೆ ಯಡಿಯೂರಪ್ಪನವರೂ ಸೇರಿದಂತೆ ತಜ್ಞರೊಂದಿಗೆ ಚರ್ಚೆ ನಡೆದಿದೆ. ಚರ್ಚೆ ಮುಗಿಯುತ್ತಿದ್ದಂತೆ ಮತ್ತೊಂದು ಕಾರ್ಯಕ್ರಮಕ್ಕೆ ಕುಮಾರಸ್ವಾಮಿ ಹೊರಟಿದ್ದಾರೆ. ಅವರು ಹೋಗಿದ್ದೇ ತಡ ತಜ್ಞರತ್ತ ತಿರುಗಿದ ಯಡಿಯೂರಪ್ಪ "ನಾನು ನಾಲ್ಕು ಪರ್ಸೆಂಟ್ ಬಡ್ಡಿಗೆ ಸಾಲ ಕೊಡುತ್ತೇನೆ ಅಂದಿದ್ದಕ್ಕೆ ಈ ಮನುಷ್ಯ ಈಗ ರೈತರ ಸಾಲ ಮನ್ನಾ ಎಂದು ಹೇಳಿದ್ದಾರೆ. ಸಗಿಂತಲೂ ತಾನೇ ಹೀರೋ ಆಗಬೇಕೆಂಬ ಆಸೆ ಅವನಿಗೆ" ಎಂದು ಕಿಡಿಕಾರಿದ್ದಾರೆ.

ಇವರಿಬ್ಬರ ಈ ಜಗಳವನ್ನು ಕಂಡು ಪಾಪ ಆ ತಜ್ಞರು ಏನೆಂದುಕೊಂಡರೋ ಏನೋ?!

• ಹೀಗೆ ತೆರೆಮರೆಯಲ್ಲಿ ನಡೆಯುತ್ತಿದ್ದ ಇವರಿಬ್ಬರ ಜಗಳ ಈಗ ಮುಖಾಮುಖಿ ನಡೆಯುತ್ತಿದೆ. ನಿನ್ನೆ ನಡೆದಿರುವ ಸಭೆಯಲ್ಲಿ "ರಾಜ್ಯಪಾಲರ ಭಾಷಣದಲ್ಲಿ ಸಾಲ ಮನ್ನಾ ಮಾಡುವ ಬಗ್ಗೆ ಪ್ರಸ್ತಾಪಿಸಬಾರದು. ಏಕೆಂದರೆ ಅದಕ್ಕೆ ಖಜಾನೆಯಲ್ಲಿ ಹತ್ತು ಪೈಸೇನೂ ಇಲ್ಲ" ಎಂದು ಯಡ್ಡಿ ಹೇಳಿದ್ದರೆ, "ಅದನ್ನು ಸೇರಿಸಲೇ ಬೇಕು" ಎಂದು ಕುಮಾರ ಹಠ ಹಿಡಿದಿದ್ದಾರೆ.

ಇದೆಲ್ಲ ಎಷ್ಟು ಅಸಹ್ಯವಾಗಿದೆ ಎಂದರೆ, ನಮ್ಮ ರೈತರ ಅಸಹಾಯಕತೆಯನ್ನೇ ಇವರಿಬ್ಬರೂ ಲೇವಡಿ ಮಾಡುತ್ತಿದ್ದಾರೆ. ಇವರಿಬ್ಬರೂ ನಾಯಕರು, ಆರ್ಥಿಕ ತಜ್ಞರು, ರೈತರ ಹಿತೈಷಿಗಳು. ಇಂತಹ ಕಪಟ ಮಿತ್ರರ ಬದಲಾಗಿ ವೈರಿಯೊಬ್ಬ ಎಷ್ಟೋ ಮೇಲು!

-ಗೌರಿ ಲಂಕೇಶ್

ಇವರೆಲ್ಲರಿಗಿಂತ ಗುರೂಜಿ ತೂಕ ಗುಲಗಂಜಿಯಷ್ಟು ಹೆಚ್ಚಿಗೇಯಿತ್ತು!

"ಲಿಂಗಾಯತರೂ ಕೂಡ ಮಾಂಸ ತಿನ್ನುತ್ತಾರೆ. ಅವರು ಮೂಳೆ ಚೀಪುವುದನ್ನ ನಾನೇ ನನ್ನ ಕಣ್ಣಾರೆ ನೋಡಿದ್ದೇನೆ" ಎಂದು ಹೇಳಿಕೆ ಕೊಟ್ಟು, ಸದರಿ ಹೇಳಿಕೆಯನ್ನು ಹಿಂದೆಪಡೆಯಲು ಶಾನೆದಿನ ತಿಣು ಕಾಡಿದ ದೇವೇಗೌಡರು, ಮಕ್ಕಳಿಗೆ ಮೊಟ್ಟೆ ಕೊಡುವ ವಿಷಯದಲ್ಲಿ ಬಾಯಿಗೆ ಮೊಟ್ಟೆ ಹಾಕಿಕೊಂಡವರಂತೆ ಮುಗುಮ್ಮಾಗಿದ್ದಾರಲ್ಲಾ, ಇದಕ್ಕೆ ಕಾರಣವೇನೆಂದು ಪ್ರಗತಿಪರ ಚಿಂತಕರು ಚಿಂತಾಕ್ರಾಂತರಾಗಿದ್ದಾರಂತಲ್ಲಾ. ಇದೆಲ್ಲಕ್ಕಿಂತ ಮುಖ್ಯವಾಗಿ ಕೀರಲು ದನಿಯಲ್ಲಿ ಕಾಲುಗಂಟೆ ಕಿರಿಚಿ ಉಸಿರಿಳೆದುಕೊಳ್ಳುವ ತರುಣ ಸಾಗರನೆಂಬ ಜೈನಮುನಿ "ಮಕ್ಕಳು ಮೊಟ್ಟೆ ತಿಂದರೆ ಅವುಗಳಿಗೆ ರಾಕ್ಷಸಗುಣ ಬರುತ್ತದೆ. ಆಗ ಅವು ಮೊಟ್ಟೆಗೆ ಜನ್ಮ ನೀಡಿದ ಕುಕ್ಕುಟವನ್ನೆ ಕೇಳಬಹುದು. ಸಿಗದಿದ್ದರೆ ಮನುಷ್ಯರನ್ನೇ ಕೇಳಬಹುದು" ಎಂದು ತನ್ನ ಓತಪ್ರೇತ ಐಡಿಯಾಗಳನ್ನು ಹರಿಯಬಿಟ್ಟರಂತಲ್ಲಾ. ಇದನ್ನು ಕೇಳಿಸಿಕೊಂಡ ಮೊಟ್ಟೆ ಭಕ್ಷಗಳು "ನಮ್ಮ ಮಕ್ಕಳು ಮೊಟ್ಟೆ ತಿಂದು ರಕ್ಕಸರಾದರೆ ಆಗಲಿ. ಆದರೆ ಈ ತರುಣ ಸಾಗರನಂತೆ ಬೆತ್ತಲೆ ತಿರುಗದಿದ್ದರೆ ಸಾಕು" ಎಂದು ಸಮಾಧಾನದ ನಿಟ್ಟುಸಿರು ಬಿಟ್ಟವಂತಲ್ಲಾ, ಥೂತ್ತೇರಿ!!



* * * * * *


ಮೊಟ್ಟೆ ಲೋಳೆಯನ್ನು ಮೈಗೆಲ್ಲಾ ಅಂಟಿಸಿಕೊಂಡ ಕುಮಾರಸ್ವಾಮಿ ಅದರ ರಗಳೆಯೇ ಬೇಡವೆಂದು ಹೊರಟ್ಟಿ ಎಂಬ ಅಡ್ಡಗೋಡೆಗೆ ಅಂಟಿಸಿ "ಇನ್ನೇನಿದ್ದರು ಹೊರಟ್ಟಿಯುಂಟು, ನಿಮ್ಮ ಮೊಟ್ಟೆಯುಂಟು" ಎಂದು ಪಲಾಯನ ಮಾಡೇಬಿಟ್ಟರಂತಲ್ಲಾ, ಇತ್ತ ಹೊರಟ್ಟಿಯನ್ನು ಪಿಂಜರಾಪೋಲು ಪತ್ರಕರ್ತರು ಮುತ್ತಿಕೊಂಡು "ಮೊಟ್ಟೆ ಕೊಡ್ತಿರೊ ಇಲ್ಲವೊ ಹೇಳಿ" ಎಂದು ಕೇಳಲಾಗಿ "ಅದನೆ ಯೋಚನಿ ಮಾಡಕತ್ತಿನ್ರಿ ನಾನು. ಮೊಟ್ಟೆ ಕೊಡುದು ಬ್ಯಾಡಂತ ಜಗದ್ಗುರುಗಳ ಸಮೇತ ಎಲ್ಲಾ ಹೇಳಾಕತ್ತಾರೆ. ಅದಕಿಂತ ಭಾಳ ಮುಖ್ಯ ಸಾದ ಸಂಗತಿ ಏನಪಾ ಅಂದ್ರ, ಇರೊ ಮಟ್ಟನೆಲ್ಲ ಮುಕ್ಕಳ ತಿಂದ್ರ, ಬಾರು ರೆಸ್ಟೋರೆಂಟನಾಗ ಡ್ರಿಂಕ್ ಮಾಡೋರು, ನೆರೆ ಕುಡಿಯೋರು ಏನು ತಿನಬೇಕ್ರಿ?" ಎಂದು ಮರುಪ್ರಶ್ನೆ ಹಾಕಿದರಂತಲ್ಲಾ, ಆಗ ಸುರಿತ ಪತ್ರಕರ್ತರು "ಡ್ರಿಂಕ್ಸ್ ಮಾಡೋರು ಚೌಚೌ ತಿಂತರೆ, ನೆರೆ ಕುಡಿಯೋರು ಉಪ್ಪರಳ (salt) ಬಾಯಿಗಾಯ್ಕಂಡು ಹೋಯ್ತರೆ. ಮೊಟ್ಟೆಗೇನು ಬರ ಬರಲ್ಲ" ಎಂದರಂತಲ್ಲಾ, ಆಗ ಹೊರಟ್ಟಿ ಇಡಿಯಾದ ಮೊಟ್ಟೆಯನ್ನು ಬಾಯಿಗೆ ಹಾಕಿಕೊಂಡವರಂತೆ ಸುಮ್ಮನಿರಲಾಗಿ, ಪತ್ರಕರ್ತರು ಮತ್ತೂ ಪ್ರಶ್ನಿಸಲಾಗಿ, "ನೋಡ್ರಿ ಮೊಟ್ಟೆಗಿಂತ ಹಾಲು ಬೆಸ್ಟರಿ. ಯದಕಪ್ಪಾ ಅಂದ್ರ ಮೊಟ್ಟೆ ಶಾರಟೇಜ್ ಬಿತ್ತಪ ಅಂದ್ರ ಏನೂ ಮಾಡಾಕ ಬರೂದಿಲ್ರಿ. ಅದೆ ಹಾಲು ಶಾರಟೇಜ್ ಬಿತ್ತಪ್ಪ ಅಂದ್ರ ಒಂದ ಸೇರಾಲಿಗೆ ಮೂರು ಸೇರು ನೀರು ಹಾಕಿದ್ರಾತು. ಎಷ್ಟು ಮಂದಿ ಮಕ್ಕಳಿದ್ರು ನಿಭಾಯಿಸಬವುದ್ರಿ" ಎಂದರಂತಲ್ಲಾ, ಥೂತ್ತೇರಿ!!

* * * * * *

ಸರ್ಕಾರವನ್ನು ಮೊಟ್ಟೆ ಗುಂಡಿಗೆ ಕೆಡಗಿದ ಚೆಡ್ಡಿಗಳು ದಿಗ್ವಿಜಯ ಸಾಧಿಸಿದಂತೆ ಮೆರೆಯುತ್ತ ವಿರಾಟ್ ಹಿಂದೂ ಸಭೆ ಮಾಡಲು ಹೊಸ ಹುರುಪಿನಿಂದ ತಯಾರಾಗುತ್ತಿರಬೇಕಾದರೆ, ಗೌರವಾನ್ವಿತ ಸಭೆಗೆ ಕೊಳೆತ ಮೊಟ್ಟೆ ಎಸೆದಂತೆ ಒಂದಿಷ್ಟು ತಲೆಕೆಟ್ಟ ಸಾಬರು ಬೆಂಗಳೂರಲ್ಲಿ ಬಸ್ಸಿಗೆ ಬೆಂಕಿ ಹಚ್ಚಿದವಂತಲ್ಲಾ. ಚೆಡ್ಡಿಗಳು ವಿರಾಟ್ ಹಿಂದೂ ಸಭೆಗಳ ಮುಖಾಂತರ ಕರ್ನಾಟಕಕ್ಕೆ ಬೆಂಕಿ ಹಚ್ಚಲು ತಯಾರಿ ನಡೆಸುತ್ತಿರಬೇಕಾದರೆ, ಇಂತಹ ಮನೆಹಾಳರ ಕೈಗೆ ಕರ್ನಾಟಕ ಕೊಟ್ಟು ಕತ್ತಲೆಯಲ್ಲಿ ಅಂಧನಂತೆ ಕುಳಿತಿರುವ ದೇವೇಗೌಡ, ಇದಕ್ಕೆ ಪರ್ಯಾಯವಾಗಿ ಮಗನ ಕೈಗೆ ಯಾವ ಅಸ್ತ್ರಕೊಡುವುದೆಂದು ಯೋಚಿಸಿ ಕಡೆಗೆ "ರೈತರ ಸಾಲ ಮನ್ನಾ ಮಾಡುತ್ತೇನೆಂದು ಕೂಗಿಬಿಡಪ್ಪ" ಎಂದು ಹೇಳಿ ಕೊಟ್ಟರಂತಲ್ಲಾ, ಥೂತ್ತೇರಿ!!

* * * * * *

ಕರ್ನಾಟಕದ ಮಣ್ಣಿನ ಮಗ ದೇವೇಗೌಡರ ಬೆವರಿನ ಮಗನಾದ ಕುಮಾರಣ್ಣ ಹಿಂದುಮುಂದು ನೋಡದೆ "ರೈತರ ಸಾಲವೆಲ್ಲಾ ಮನ್ನಾ" ಎಂದುಬಿಟ್ಟರಂತಲ್ಲಾ, ಇದನ್ನು ಕೇಳಿ ಬೆಚ್ಚಿಬಿದ್ದ ಎಡೂರಪ್ಪ "ರೀ ಕುಮಾರಸ್ವಾಮಿ, ರೈತರ ಸಾಲ ಬರೋಬರಿ ಹದಿನಾರು ಸಾವಿರ ಕೋಟಿ ಇದೆ. ಸರ್ಕಾರದ ಖಜಾನೆಲಿ ಚಿಲ್ರೆನೂ ಸೇರಿ ಹದಿಮೂರು ರೂಪಾಯಿದೆ. ಸಾಲ ತೀರಸಕ್ಕೆ ಎಲ್ಲಿಂದ ಹಣ ತರತೀರಿ?" ಎಂದರಂತಲ್ಲಾ, ಅದಕ್ಕೆ ಕುಮಾರಣ್ಣ ಸರಾಗವಾಗಿ "ಬೆಂಗಳೂರಿನ ಸುತ್ತಮುತ್ತ ಇರೊ ಜಮೀನನ್ನ ಅಧಿಕಾರಿಗಳು, ಆ ಶಿವಕುಮಾರ ಕೊಂಡಿದಾನಂತೆ. ಅವರದ ಕಿತ್ತು ಇವುರಿಗೆ ಕೊಡನ" ಎಂದರಂತಲ್ಲಾ. ಅದಕ್ಕೆ ಎಡೂರಪ್ಪ "ಅಷ್ಟು ಸುಲಭವಾಗಿ ಅವರದನೆಲ್ಲ ಕೀಳಕ್ಕೆ ಬರಲ್ಲ. ಕೀಳಕ್ಕೋದ್ರೆ ಟೈಂ ತಗಳುತ್ತೆ. ಆಗ ನಾವೂ ಇರಲ್ಲ ನೀವೂ ಇರಲ್ಲ" ಎಂದರಂತಲ್ಲಾ. "ಇರದೆಯಿದ್ರೆ ಅಷ್ಟೆ ಹೊಯ್ತು. ಹಾಗಂತ ರೈತರನ್ನ ನಂಬಿಸಬವುದೊ. ಬ್ಯಾಂಕಲ್ಲಿ ಸಾಲ ಮಾಡಿರೊ ರೈತರು ನಮ್ಮ ಮಾತ ನಂಬಿ ಪುನಃ ನಮಗೇ ಓಟು ಮಾಡ್ತರೆ. ಪುನಃ ನಾವೇ ಆಯ್ಕೆಯಾಗ್ತಿವಿ. ಆನಂತರ ನೋಡಿಕೊಂಡರಾಯ್ತು" ಎಂದು ಕುಮಾರಸ್ವಾಮಿ ಕಾಲು ಅಲ್ಲಾಡಿಸುತ್ತ ಹೇಳಿದರಂತಲ್ಲಾ, ಥೂತ್ತೇರಿ!!



* * * * * *

ರೈತರ ಸಾಲ ಮನ್ನಾ ವಿಚಾರದಲ್ಲಿ ಕುಮಾರಣ್ಣ ಸಾರಾಸಗಟು ಹೇಳಿಕೆ ಕೊಟ್ಟು ಸಿಗಾಕಿಕೊಂಡ ನಂತರ, ಹದಿನಾರು ಸಾವಿರ ಕೋಟಿ ರೈತರ ಸಾಲದ ಬಗ್ಗೆ ದೀರ್ಘವಾಗಿ ಯೋಚಿಸಿದ ಆಧುನಿಕ ಅರ್ಥಶಾಸ್ತ್ರಜ್ಞರಾದ ಮಾನ್ಯ ದೇವೇಗೌಡರು, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮಾಡಿದವರ ಸಾಲದ ಮೊತ್ತವೆಷ್ಟು, ಸಹಕಾರಿ ಬ್ಯಾಂಕಿನ ಸಾಲವೆಷ್ಟು, ಎಂದು ಪರಿಶೀಲಿಸಲಾಗಿ, ಸಹಕಾರಿ ಬ್ಯಾಂಕಿನ ಸಾಲ ಕೇವಲ ನಾಲ್ಕೂವರೆ ಸಾವಿರ ಕೋಟಿ ಎಂದು ತಿಳಿಯಿತಂತಲ್ಲಾ. ಕೂಡಲೇ ಮಗನನ್ನು ಸಂಪರ್ಕಿಸಿದ ಆಧುನಿಕ ಅರ್ಥಶಾಸ್ತ್ರಜ್ಞರು "ಕುಮಾರೂ, ನಿನ್ನ ಸಾಲ ಮನ್ನಾ ಹೇಳಿಕೆ ಬದಲಿಸಿಕೋ. ಈ ಸಹಕಾರಿ ಬ್ಯಾಂಕಿನಲ್ಲಿ ಸಾಲ ಮಾಡಿರುವವರೆಲ್ಲಾ ನಮ್ಮ ಜೆಡಿಎಸ್ ರೈತರೇ ಆದ್ದರಿಂದ ನೀನು ಅವರ ಸಾಲವನ್ನು ಮನ್ನಾ ಮಾಡಿಬಿಡುತ್ತೇನೆಂದು ಹೇಳು. ಆ ರೈತರಿಗೆ ಪುನಃ ನಮ್ಮ ಸರ್ಕಾರವನ್ನು ಅಧಿಕಾರಕ್ಕೆ ತರುವ ಶಕ್ತಿಯಿದೆ" ಎಂದು ಹೇಳಿದರಂತಲ್ಲಾ, ಆ ಕೂಡಲೇ ಕುಮಾರಣ್ಣ ಸಹಕಾರಿ ಬ್ಯಾಂಕಿನ ಶಾಶ್ವತ ಸಾಲಗಾರರ ಸಹಾಯಕ್ಕೆ ಬರುವುದಾಗಿ ಘೋಷಿಸಿದರಂತಲ್ಲಾ, ಥೂತ್ತೇರಿ!!!

* * * * * *

ಈ ಸರ್ಕಾರದೊಳಗೆ ಸಿಕ್ಕಿಕೊಂಡವರೆಲ್ಲಾ ಸಾಲದ ಬಗ್ಗೆ, ರೈತರ ಬಗ್ಗೆ, ಬರಗಾಲದ ಬಗ್ಗೆ ಚರ್ಚಿಸುತ್ತಾ ಕುಳಿತರಬೇಕಾದರೆ, ನಮ್ಮ ತಲೆ ಕೆಟ್ಟ ಚೆಡ್ಡಿಗಳು ಇದ್ಯಾವುದನ್ನು ತಲೆಗೆ ಹಚ್ಚಿಕೊಳ್ಳದೆ 'ಗುರೂಜಿ' ಎಂಬುವನ ಪ್ರತಾಪವನ್ನು ಕೊಚ್ಚಿಕೊಳ್ಳುತ್ತ ಕುಳಿತಿವೆಯಂತಲ್ಲಾ. ಇದನ್ನು ನೋಡಿದ ಶೂದ್ರ ಹೈದರು "ಎಷ್ಟೇ ಆಗಲಿ, ಈ ಮುಂಡೆಮಕ್ಕಳು ಪರಕೀಯರು. ನಮ್ಮ ದೇಶದ ಮೇಲೆ ದಾಳಿ ಮಾಡುವಾಗ ಪಟ್ಟಾಗಿ ಉಂಡು ದೇವಸ್ಥಾನದಲ್ಲಿ ಭಜನೆ ಮಾಡುತ್ತ ಕುಳಿತಿದ್ದವರು. ಅವರ ಹುಟ್ಟುಗುಣ ಬಿಡಲು ಸಾಧ್ಯವೇ?" ಎಂದು ತಾತ್ಸಾರ ಮಾಡಿದರಂತಲ್ಲಾ. ಈ ತಾತ್ಸಾರವನ್ನೆ ಒಪ್ಪಿಗೆಯೆಂದು ಭಾವಿಸಿರುವ ಮಂದಮತಿಗಳಾದ ಚೆಡ್ಡಿಗಳು "ಗುರೂಜಿ ಅಂಬೇಡ್ಕರ್‌ಗಿಂತ, ಗಾಂಧಿಗಿಂತ, ಕನಕ, ಬಸವನಿಗಿಂತ ಒಂದು ಗುಲಗಂಜಿ ತೂಕ ಹೆಚ್ಚಿಗೆ ಇರುವ ವ್ಯಕ್ತಿ. ಈ ಗುಲಗಂಜಿ ತೂಕ ಆತ ಧರಿಸಿದ್ದ ಜನಿವಾರದಿಂದ ಹೆಚ್ಚಿದ ತೂಕವಲ್ಲ. ನಿಜಕ್ಕೂ ಆತನ ಚಿಂತನೆ, ಆಲೋಚನೆ, ಕಾರ್ಯವಿಧಾನ ಇವೆಲ್ಲವೂ ಜಾರಿಯಾದರೆ, ಪುನಃ ನಾವು ನಮ್ಮ ಗರ್ಭಗುಡಿಯೊಳಗೆ ಗಾರ್ಧಭ ದನಿಯಲ್ಲಿ ಭಜನೆ ಮಾಡಬಹುದು. ಆಗ ಚಾತುರ್ವರ್ಣಗಳು ತಮ್ಮ ಕರ್ಮಾನುಸಾರ ವ್ಯಾಪಾರ, ಕೃಷಿ, ಕ್ಲೀನಿಂಗ್ ಇತ್ಯಾದಿ ಕೆಲಸ ಮಾಡುತ್ತ ಹೋಗುತ್ತವೆ" ಎಂದು ನಾಚಿಕೆ ಬಿಟ್ಟು ರೀಮು ಗಟ್ಟಲೇ ಬರೆಯುತ್ತ ಕುಳಿತಿವೆಯಂತಲ್ಲಾ, ಥೂತ್ತೇರಿ!!!

-ಯಾಹೂ

ಚಂದ್ರಾಲೇಔಟ್ ನಾಯಿಗಳು

ರಾ. ಸೋಮನಾಥ್

ಹೆಚ್ಚೆಂದರೆ ಅವುಗಳ ಸಂಖ್ಯೆ ನಾಲ್ಕರಿಂದ ಆರು. ಬಡಕಲು ನಾಯಿಗಳಲ್ಲ. ಜನರ ಗುಂಪೊಂದು ಕಲ್ಲು, ದೊಣ್ಣೆ ಏನೇ ಬಳಸಿದರೂ ತಪ್ಪಿಸಿ ಕೊಳ್ಳುತ್ತವೆ. ಬೆಂಗಳೂರು ಮಹಾನಗರ ಪಾಲಿಕೆಯ ಬೀದಿನಾಯಿ ಹಿಡಿಯುವ ಎಲ್ಲಾ ಸ್ಕ್ವಾಡುಗಳೂ ಅಹೋರಾತ್ರಿ ತಿಣುಕಾಡಿದರೂ ಪ್ರಯೋಜನವಾಗುತ್ತಿಲ್ಲ. ಐಷಾರಾಮಿ ಕಟ್ಟಡ ಸಮೂಹಗಳ ಮಧ್ಯದ ಖಾಲಿ ಸೈಟೊಂದರಲ್ಲಿ ಬೆಳೆದು ನಿಂತ ಪೊದೆಗಳಲ್ಲಿ ಅಡಗಿಕೊಂಡಿದ್ದು ಕೆಲವೊಮ್ಮೆ ತಮ್ಮದೇ ಹಿಂದಿನ ಎರಡು ನಾಯಿಗಳನ್ನು ಬೇಟೆಗೆ ಕಳಿಸುತ್ತವೆ. ಅವು ಎಳೆದು ತಂದ ಮಗುವಿನ ಮೇಲೆ ಮಿಕ್ಕೆಲ್ಲವೂ ಮುಗಿಬೀಳುತ್ತವೆ. ಅಗತ್ಯ ಬಿದ್ದಲ್ಲಿ ಇವೂ ಬೀದಿಗಿಳಿಯುತ್ತವೆ!



ಬೀದಿ ನಾಯಿಗಳ ದಾಳಿಗೆ ತುತ್ತಾದ ಗೌರಮ್ಮ

ಬೆಂಗಳೂರಿನ ಬೇರೆಲ್ಲಾ ಬೀದಿನಾಯಿಗಳಂತೆ ಅವು ಇಂಥದ್ದೇ ಮನೆಯ ತಂಗಳನ್ನವಾಗಲಿ, ನಿರ್ದಿಷ್ಟ ಗಲ್ಲಿಯದೇ ಕಸದ ತೊಟ್ಟಿಯನ್ನಾಗಲಿ ನೆಚ್ಚಿಕೊಂಡಿಲ್ಲ. ಅವುಗಳಿಗೆ ಮನುಷ್ಯನ ಮಾಂಸದ ರುಚಿ ಹತ್ತಿಬಿಟ್ಟಿದೆ. ಕೆಲವೊಮ್ಮೆ ಭೂಗತ ಚರಂಡಿ ಸಂಧಿಗಳಿಂದಲೋ, ಮತ್ತೊಮ್ಮೆ ಖಾಲಿ ನಿವೇಶನಗಳ ಪೊದೆಗಳಿಂದಲೋ ಹೊಂಚಿ ಕಾದಿದ್ದು ಧುತ್ತೆಂದು ಪ್ರತ್ಯಕ್ಷವಾಗುತ್ತವೆ. ಒಂಟಿ ಮಗುವೇ ಅದರ ಶಿಕಾರಿ! ಹಸಿವು ಅದರ ಪರಮವೈರಿ?


ಅವು ಚಂದ್ರಲೇಔಟ್ ನಾಯಿಗಳು!

ಒಂದು ಮಗುವನ್ನು ಕೊಂದು, ಇನ್ನೊಬ್ಬನ ಹೆಬ್ಬೆಟ್ಟನ್ನೇ ಕಚ್ಚಿ ತಿಂದು, ಮತ್ತೊಬ್ಬ ಬಾಲಕನ ತೋಳಿನ ಮಾಂಸವನ್ನೇ ಕಿತ್ತೊಯ್ದು, ಸರಿಸುಮಾರು ಒಂದು ಡಜನ್ ಮಕ್ಕಳನ್ನು ಕಚ್ಚಿ ತಿನ್ನಲೆತ್ನಿಸಿದ ಸದರಿ ನಾಯಿ ಹಿಂಡು ಸಮಸ್ತ ಶ್ವಾನ ಸಂಕುಲಕ್ಕೇ ಶಾಪವಾಗಿದ್ದು ಹೇಗೆ? ಮನುಷ್ಯ ಮತ್ತು ನಾಯಿಯ ಯುಗ ಯುಗಾಂತರದ ಅನುಬಂಧದಲ್ಲಿ ಪ್ರಮಾದವಾಗಿದ್ದು ಎಲ್ಲಿ? ಇದು ಮನುಷ್ಯನ ಪಾಪದ ಫಲವೆ? ಅಥವಾ ನಿಸರ್ಗವೇ ಆತನ ವಿರುದ್ಧ ತಿರುಗಿ ಬಿದ್ದುದ್ದರ ಅಪಶಕುನವೆ?

ಬೆಂಗಳೂರು ಮಹಾನಗರ ಪಾಲಿಕೆಯ ಅಷ್ಟೂ ಬೀದಿ ನಾಯಿ ಹಿಡಿಯುವ ಸ್ಕ್ವಾಡುಗಳಿಂದಾಗಲಿ, ಜನರಿಂದಾಗಲಿ ಏಕೆ ಈತನಕ ಇವುಗಳನ್ನು ಹಿಡಿಯಲಾಗುತ್ತಿಲ್ಲ?

ನಾಂದಿ ಹಾಡಿದ್ದು ಹುಚ್ಚು ನಾಯಿ!

ಇದು ಪ್ರಶ್ನೆ. ಬಹುಶಃ ಇನ್ನಾವುದೇ ಜಾಗೃತ ದೇಶವಾಗಿದ್ದರೆ ಅಲ್ಲಿನ ಸರ್ಕಾರ, ಪ್ರಾಣಿಶಾಸ್ತ್ರಜ್ಞರು ಮತ್ತು ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳೆಲ್ಲ ಇಂಥ ಸಮಸ್ಯೆಯೊಂದರ ಮೂಲಕ್ಕೆ ಕೈ ಹಾಕುತ್ತಿದ್ದವು.



ಸತ್ತ ಶ್ರೀದೇವಿಯ ತಂದೆ-ತಾಯಿ

ದುರಂತವೆಂದರೆ ಅಪ್ಪ-ಮಕ್ಕಳ ಸರ್ಕಾರಕ್ಕಿದು ಯಕಃಶ್ಚಿತ್ ಬೀದಿನಾಯಿ ಹಾವಳಿಯಾಗಿ ಮಾತ್ರ ಕಾಣಿಸುತ್ತದೆ. ಹಸಿವಿಗೆ ಬಿದ್ದು ಮಗುವಿಗೆ ಬಾಯಿ ಹಾಕಿದ ನಾಯಿಗಳ ಮೃಗೀಯತೆಗೂ ಈ ಪ್ರಕರಣದ ತಲೆಬುಡ ಕೂಡ ವಿವೇಚಿಸದೇ ಏಕಾಏಕಿ ಕರ್ನಾಟಕದ ಎಲ್ಲಾ ಬೀದಿನಾಯಿಗಳನ್ನು ಕೊಂದು ಹಾಕಿ ಎಂದು ಪತ್ರಿಕಾಗೋಷ್ಠಿ ಕರೆದು ಹೂಂಕರಿಸಿದ ಉಪಮುಖ್ಯಮಂತ್ರಿ ಯಡಿಯೂರಪ್ಪನ ಅವಿವೇಕಕ್ಕೂ ಹೆಚ್ಚು ವ್ಯತ್ಯಾಸ ಕಾಣಿಸುತ್ತಿಲ್ಲ. ಎಲ್ಲಾ ಬಿಟ್ಟು ಭಂಗಿ ನೆಟ್ಟಂತೆ ನಾಯಿಭೂತ ಮಾಡಿ ಸುಟ್ಟ ವಾಟಾಳ್, ಯಥಾವತ್ತು ಸುದ್ದಿ ಬರೆಯುವ ಪತ್ರಿಕೆಗಳು ಮತ್ತು ಇದಕ್ಕೆಲ್ಲ ಪಾಲಿಕೆಯನ್ನೇ ಹೊಣೆ ಮಾಡುವ ಜನಸಾಮಾನ್ಯರು; ಬಹುಶಃ ಯಾರಿಗೂ ವಾಸ್ತವದ ಅರಿವಿರುವಂತಿಲ್ಲ.

ಬಹುತೇಕರು ಭಾವಿಸಿದಂತೆ ಚಂದ್ರಾಲೇಔಟ್‌ನ ಎಲ್ಲಾ ನಾಯಿಗಳು ನರಭಕ್ಷಕಗಳಲ್ಲ. ಬೇರೆಲ್ಲಾ ಏರಿಯಾಗಳಿಗಿಂತ ವಿಪರೀತ ಎನ್ನಿಸುವಷ್ಟು



ನಾಯಿ ಹಾವಳಿಯೂ ಅಲ್ಲಿರಲಿಲ್ಲ. ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಹುಚ್ಚು ನಾಯಿಯೊಂದು ಎಂಟಕ್ಕೂ ಹೆಚ್ಚು ಜನಕ್ಕೆ ಕಚ್ಚಿದ್ದೇ ಚಂದ್ರಾಲೇಔಟ್ ನಾಯಿ ಕಾರಣಕ್ಕೆ ಸುದ್ದಿಯಾಗಲು ಮೂಲವಾಯಿತು. ಆದರೆ ಈಗ ಒಂದರ ಮೇಲೊಂದು ಶ್ವಾನ ಹಾವಳಿ ವರದಿಯಾಗುತ್ತಿರುವುದು ಪಕ್ಕದ ಬಿಸಿಸಿ ಲೇಔಟ್‌ನಲ್ಲಿ!



ನಾಯಿಗಳಿಂದ ಪೊದೆಗೆ ಎಳೆದೊಯ್ಯಲ್ಪಟ್ಟ ಕುಲ್ಸುಂ


ಈ ಬಿಸಿಸಿ ಲೇಔಟ್ ಎಂಬುದು ವಿಜಯನಗರ, ಅತ್ತಿಗುಪ್ಪೆ, ಚಂದ್ರಾ ಲೇಔಟ್, ನಾಗರಬಾವಿ, ನಾಯಂಡಹಳ್ಳಿ, ಮೈಸೂರು ರಸ್ತೆ ಇತ್ಯಾದಿ ಏರಿಯಾಗಳ ಪಾಲಿಗೆ ಡಾಲರ್ಸ್ ಕಾಲನಿಯಿದ್ದಂತೆ. ಚಂದ್ರಾಲೇಔಟ್‌ನ ಗುಡ್‌ವಿಲ್ ಅಪಾರ್ಟ್‌ಮೆಂಟ್ ಮತ್ತು ಗಂಗೊಂಡನಹಳ್ಳಿ ಸ್ಲಂಗಳ ಮಧ್ಯದ ಎತ್ತರದ ಪ್ರದೇಶಗಳಲ್ಲಿರುವ ಈ ಬಡಾವಣೆ ಇತ್ತೀಚೆಗಷ್ಟೇ ಅಭಿವೃದ್ಧಿ ಹೊಂದುತ್ತಿರುವ, ಸುಸಜ್ಜಿತ, ಶ್ರೀಮಂತರ ಬಡಾವಣೆ. ಹಚ್ಚ ಹಸಿರಾದ ಪಾರ್ಕುಗಳ, ಏಳೆಂಟು ಬಂಗಲೆಗಳ ನಡುವೆ ಅಲ್ಲಲ್ಲಿ ಖಾಲಿ ನಿವೇಶನಗಳೂ, ಅವುಗಳಲ್ಲಿ ಆ ಕಾಲದಿಂದ ಬೆಳೆದ ಪೊದೆಗ[ಳು] ಮತ್ತು ನೀರೇ ನಿಲ್ಲದೇ ಖಾಲಿ ಬಿದ್ದ ಗೂಡಿನ[ಂತಹ] ಮೋರಿಗಳು. ಬೇರೆ ಏರಿಯಾಗಳಿಗೆ ಹೋಲಿಸಿದ[ರೆ] ಇಲ್ಲಿ ನಾಯಿ ಹಾವಳಿ ಕಮ್ಮಿಯೇ. ಇಂಥದ[ರಲ್ಲಿ] ಹಿಂದ್ಯಾವತ್ತೂ ಇಲ್ಲದ ಶ್ವಾನಪ್ರಕೋಪ ಕಳೆದ ನಾ[ಲ್ಕು] ತಿಂಗಳಿಂದೀಚೆಗೆ ವಿಪರೀತವಾಗಿದ್ದೇಕೆ?

ಮೊದಲ ಅಟ್ಯಾಕ್

ಇದು ಇಲ್ಲಿಗೆ ಮೂರು ತಿಂಗಳ ಹಿಂದಿನ ಘಟ[ನೆ]. ಬಿಸಿಸಿ ಲೇಔಟ್‌ನ 9 ನೇ ಕ್ರಾಸ್‌ನಲ್ಲಿ ಬಂಗ[ಲೆ] ಕಟ್ಟಿಸಿಕೊಂಡಿರುವ ಜಮೀರ್ ಅಹ್ಮದ್ ಮ[ತ್ತು] ಹುಸೇನ್ ಅಹ್ಮದ್ ಎಂಬಿಬ್ಬರು ಮುದುಕರು ನಿಂ[ತು] ನೋಡುತ್ತಿದ್ದಂತೆಯೇ ಟ್ಯೂಷನ್ ಮುಗಿಸಿಕೊಂಡ[ು] ಬರುತ್ತಿದ್ದ ಅವರ ಮೊಮ್ಮಗ ಶಿಬಾನ್‌ನ ಮೇ[ಲೆ] ಏಕಾಏಕಿ ನಾಲ್ಕು ನಾಯಿಗಳು ದಾಳಿಯಿಟ್ಟ[ವು]. ಅದೃಷ್ಟವಶಾತ್ ಶಿಬಾನ್ ಯಾರದೋ ಮ[ನೆ] ಕಾಂಪೌಂಡ್ ಹೊಕ್ಕಿ ಗೇಟು ಹಾಕಿಕೊಂಡ. ಬಚ[ಾ]ವಾದ.

ಇದಾಗಿ ವಾರಕ್ಕೇ ಇದ[ೇ] ಪಕ್ಕದ ರಸ್ತೆಯಲ್ಲಿ ಜುಬೇದ[ಾ] ಬೇಗಂ ಎಂಬ 60 ರ ವೃ[ದ್ಧೆ] ಸಂಜೆ ಆರೂವರೆಯ ಹೊತ್ತ[ಿಗೆ] ವಾಕಿಂಗ್ ಹೊರಟಿದ್ದಾಳೆ. ತ[ನ್ನ] ಮನೆಯಿಂದ ಇನ್ನೇನು ಅರ್ಧ ಫರ್ಲಾಂಗ್ ನಡೆದಿ[ದ್ದಾಳೆ] ಹಿಂದಿನಿಂದ ಮಗುವೊಂದ[ು] ಕಿರುಚಿದ್ದು ಕೇಳಿಸಿದೆ. ತಿರು[ಗಿ] ನೋಡುತ್ತಾಳೆ, ಸರಿಸುಮಾ[ರು] ನಾಲ್ಕು ನಾಯಿಗಳ ಹಿಂಡೊಂದ[ು] ಆಕೆಯ ಮೂರು ವರ್ಷದ ಮೊಮ್ಮಗ[ಳು] ಕುಲ್ಸುಮ್‌ಳನ್ನು ನೆಲಕ್ಕೆ ಹಾಕಿ ಕಚ್ಚುತ್ತಿ[ದೆ]. ದೃಶ್ಯ ಎಷ್ಟೊಂದು ಭಯಾನಕವಾ[ಗಿ]ತ್ತೆಂದರೆ ಮನೆ ಗೇಟಿನಿಂದ ಮಗುವ[ನ್ನು] ಹೊರಕ್ಕೆಳೆದು ಕೊಂಡ ನಾಯಿಹಿಂಡ[ು] ಆಕೆಯನ್ನು ಎದುರಿದ್ದ ದಟ್ಟ ಪೊದ[ೆ]ಯೊಂದಕ್ಕೆ ಎಳೆಯುತ್ತಿದ್ದವು. ಜುಬೇ[ದಾ] ಬೇಗಂ ಬೊಬ್ಬೆಯಿಟ್ಟಿದ್ದಾಳೆ. ಆಕೆಯ ನೆರವಿಗೆ ಬಂದ ಒಂದಿಬ್ಬರು ದಾ[ರಿ] ಹೋಕರು ನಾಯಿಗಳನ್ನು ಓಡಿಸ[ದೆ] ಹೋಗಿದ್ದರೆ ಬಹುಶಃ ಕುಲ್ಸುಮ್ ಎಂ[ಬ] ಮಗುವೇ ಮೊದಲ ಬಲಿಯಾ[ಗು]ತ್ತಿತ್ತೇನೊ!

ಇದಾಗಿ ಒಂದೆರಡು ತಿಂಗಳವರ[ೆಗೆ] ಅಲ್ಲಿ ಇಲ್ಲಿ ನಾಯಿ ಹಿಂಡು ಮಕ್ಕಳನ್ನು ಅಟ್ಯಾಡಿಸ[ಿದ] ಸುದ್ದಿ ಕೇಳಿ ಬರುತ್ತಲೇ ಇತ್ತು. ಆದರೆ 2007ರ ಜನವರಿ ಐದನೇಯ ತಾರೀಖಿನಂದು ದುರಂತ ನಡೆ[ದೇ] ಹೋಯಿತು. ಬಿಸಿಸಿ ಲೇಔಟ್‌ನ ಒಂಬತ್ತನೇ ಮೇನ್[ನ] ಖಾಲಿ ಸೈಟೊಂದರಲ್ಲಿ ಗುಡಿಸಲು ಹಾಕಿಕೊಂಡ[ಿದ್ದ] ಗುಲ್ಬರ್ಗಾ ಮೂಲದ ಶಿವಲಿಂಗ-ನಾಗಮ್ಮ ದಂಪತಿ[ಯ] ಮೊದಲ ಮಗಳು ಎಂಟು ವರ್ಷದ ಶ್ರೀದೇವಿ ಬೆ[ಳಗ್ಗೆ] ಏಳೂವರೆಗೆ ಅಂಗಡಿಗೆಂದು ಹೊರಟವಳು ತ[ನ್ನ] ಜೋಪಡಿ ಬಿಟ್ಟು ಹತ್ತು ಹೆಜ್ಜೆ ಇಟ್ಟಿರಲಿಲ್ಲ, ಮತ್ತ[ದೇ] ನಾಯಿ ಹಿಂಡು ದಾಳಿ ನಡೆಸಿತ್ತು. ಆಕೆಯನ್ನು ನೆಲ[ಕ್ಕೆ] ಕೆಡವಿ ಎಲ್ಲೆಂದರಲ್ಲಿ ಕಚ್ಚಿ ಎಳೆದಾಡುತ್ತಿದ್ದ ದೃಶ್ಯ ಭೀಕರವಾಗಿ[ತ್ತು]. ಅಕ್ಕಪಕ್ಕದವ[ರು] ಓಡಿ ಬಂದ[ು] ಕಲ್ಲು ತೂರುತ್ತಿದ್ದ[ರೂ] ಅದನ್ನು ಲೆಕ್ಕಿಸದೇ ಕಚ್ಚುತ್ತಿದ್ದ ನಾಯಿ ಹಿಂಡು ಕೆಲವೇ ಕ್ಷಣಗಳಲ್ಲಿ ನಾಪತ್ತೆಯಾ[ಗಿ]ತ್ತಾದರೂ ಹತ್ತೇ ನಿಮಿಷಕ್ಕೆ ಶ್ರೀದೇವಿ ಹೆಣವಾಗಿದ್ದಳು!




ಅಡುಗದಾಣವಾಗಿರುವ ಮೋರಿಗಳು

ನಾಯಿಗಳ ಮಾರಣಹೋಮ

ಮರುದಿನದ ಪತ್ರಿಕೆಗಳಲ್ಲೆಲ್ಲ ಇದು ಮುಖಪುಟ[ದ] ಸುದ್ದಿಯಾಗಿ ದೇಶಾದ್ಯಂತ ಕಲ್ಲೋಲವೆಬ್ಬಿಸಿ ಬಿಟ್ಟ[ಿತು]. ಪ್ರತಿಯೊಬ್ಬರೂ ತಮಗೆ ತೋಚಿದಂತೆ, ಬೆಂಗಳೂರಿ[ನ] ಬೀದಿನಾಯಿಗಳ ಹಾವಳಿ ವಿಪರೀತವೆಂದೂ, ಇದ[ಕ್ಕೆ] ಪಾಲಿಕೆಯೇ ನೇರ ಹೊಣೆಯೆಂದೂ ಬೊಬ್ಬೆಯಿಟ್ಟ[ರು]. ಕೆಲ ಪತ್ರಿಕೆಗಳು ಇದಕ್ಕೆಲ್ಲ ಬೀದಿನಾಯಿ ಸಂಹಾ[ರ]

ತೋಳನ ತಮ್ಮ ನರಿಯ ಅಣ್ಣ

ಖ್ಯಾತ ಪ್ರಾಣಿ ಶಾಸ್ತ್ರಜ್ಞ ಡಾ. ವಿ.ಸಿ. ಮೂರ್ತಿಯವರ ಪ್ರಕಾರ ನಾಯಿಗಳು ಸ್ವಭಾವತಃ ನರಭಕ್ಷಕಗಳಲ್ಲ, ವನ್ಯ ಪರಿಸರಕ್ಕೆಂದೇ ಸೃಷ್ಟಿಯಾದದ್ದು ನಾಯಿ. ಅದು ತೋಳಕ್ಕೆ ತಮ್ಮ ಮತ್ತು ನರಿಗೆ ಅಣ್ಣ. ಯಾವುದನ್ನು ನಾವು ಕಾಡು ನಾಯಿ ಅಥವಾ ಸೀಳುನಾಯಿ ಎನ್ನುತ್ತೇವೋ ಅದನ್ನೇ ಮನುಷ್ಯ ಪಳಗಿಸಿಕೊಂಡ. ಬೇಟೆಗೆ ಬಳಸಿಕೊಂಡ. ಕಾಲಾಂತರದಲ್ಲಿ ನಾಯಿಗಳು ಮನುಷ್ಯ ಪರಿಸರಕ್ಕೆ ಒಗ್ಗಿಕೊಂಡವಾದರೂ ಅನುವಂಶೀಯವಾಗಿ ಅದು ತೋಳದ ತಮ್ಮ ಎಂಬುದನ್ನು ಮನುಷ್ಯ ಮರೆಯಕೂಡದು. ಹಸಿ ಮಾಂಸವೇ ಅದರ ನೈಸರ್ಗಿಕ ಆಹಾರ. ಅದರ ಜೀನ್ಸ್ ಅಂದರೆ ವಂಶವಾಹಿನಿಯಲ್ಲಿರುವ ಬೇಟೆಯ ಗುಣ ಯಾವತ್ತೂ ನಶಿಸುವುದಿಲ್ಲ.



ಡಾ.ವಿ.ಸಿ.ಮೂರ್ತಿ

ಸಿನಿಮಾಗಳ ಕಥೆಯಂತೆ ಬಾಲ್ಯದಲ್ಲಿ ಬೇರ್ಪಟ್ಟ ಅವಳಿಗಳ ಪೈಕಿ ಒಬ್ಬ ಕಳ್ಳನಾದರೆ ಮತ್ತೊಬ್ಬ ಪೊಲೀಸ್ ಆಗುವುದಿಲ್ಲವೇ? ಹಾಗೆ ನಾಯಿಗಳು ತಮ್ಮ ಸುತ್ತಣ ಪರಿಸರಕ್ಕೆ ತಕ್ಕಂಥ ಬೆಳೆಯುತ್ತವೆ. Carnivores ಅಂದರೆ ಅವುಗಳ ಕೋರೆಹಲ್ಲಿರುವುದೇ ಮಾಂಸವನ್ನು ಕಚ್ಚಿ ತಿನ್ನುವುದಕ್ಕೆ. ಕೆಲವೊಮ್ಮೆ ಆಸ್ಪತ್ರೆ ತ್ಯಾಜ್ಯಗಳನ್ನು ತಿಂದೋ ದನದ ಮಾಂಸದ ರುಚಿಗೆ ಬಿದ್ದೋ ಚಂದ್ರಾ ಲೇಔಟ್ ನಾಯಿಗಳಂತೆ ನರಭಕ್ಷಕಗಳಾಗಿರಬಹುದು. ಸಾಮಾಜಿಕವಾಗಿ ಅವು ಸಾಕು ಪ್ರಾಣಿಗಳಾದರೂ ದಿಕ್ಕು ದೆಸೆಯಿಲ್ಲದ ಬೀದಿನಾಯಿಗಳು ಕೆಲವೊಮ್ಮೆ wild ಆಗಿಬಿಡುತ್ತವೆ. ಏಕಾಂಗಿ ನಾಯಿಗಿಂತಲೂ ಹಿಂಡು ಹೆಚ್ಚು ಅಪಾಯಕಾರಿ. ವಯಸ್ಕರನ್ನು, ಸದೃಢರನ್ನು, ಬೈಕು-ಕಾರುಗಳಲ್ಲಿ ಓಡಾಡುವವರನ್ನು ದಾಳಿ ಮಾಡದೇ ಕೇವಲ ಸಣ್ಣ ಮಕ್ಕಳ ಮೇಲೇ ಏಕೆ ಅಟ್ಯಾಕ್ ಮಾಡುತ್ತವೆಯೆಂದರೆ, ಬೇಟೆಯ ತಾಕತ್ತೇನೆಂಬುದನ್ನು ಅವು ಚೆನ್ನಾಗಿ ನಿರ್ಧರಿಸುತ್ತವೆ. ಜೊತೆ ಸೇರಿದ ಬೇರೆ ನಾಯಿಗಳೂ ಹಿಂಡಿನ ಪ್ರಭಾವಕ್ಕೊಳಗಾಗುವುದರಿಂದ ಕಾಲಕ್ರಮೇಣ ಅವಕ್ಕೂ ತೋಳದ ಬುದ್ಧಿಯೇ ಬರುವ ಸಾಧ್ಯತೆಗಳಿವೆ.

ನಾಯಿಯ ನಿಯತ್ತಿಗೂ ಕಾ[...] ಮೇಕೆಗಳಂತೆ ಮನುಷ್ಯನ ಹಂಗಿಲ್ಲದೇ ಸೊಪ್ಪು ಹುಲ್ಲು ತಿಂದು ಬದುಕಲಾರವು. ಕಾಡಿಗೆ ಹೋಗಿ ಬೇಟೆಯಾಡವುದೂ ಕಷ್ಟ. ಮನುಷ್ಯ ಕೊಟ್ಟರೆ ಮಾತ್ರ ಉಂಟು ಇಲ್ಲವೆಂದರೆ ಇಲ್ಲ ಎಂಬ ಸ್ಥಿತಿ ನಾಯಿಯ ಹೊರತಾಗಿ ಈ ಭೂಮಿಯ ಮೇಲೆ ಬೇರಾವ ಜೀವಿಗೂ ಇಲ್ಲ. ಅದರ ಮನುಷ್ಯ ನಿಷ್ಠೆಗೆ ಮೂಲ ಕಾರಣವೇ ಮನುಷ್ಯ ಅದನ್ನು ಕಾಡಿನಿಂದ ನಾಡಿಗೆ ತಂದು ಅದರ ನೈಸರ್ಗಿಕ ಆಹಾರ ಮೂಲದಿಂದಲೇ ವಂಚಿಸಿದ್ದು.

ಹಾಗಂಥ ಎಲ್ಲಾ ಬೀದಿನಾಯಿಗಳನ್ನೂ ಕೊಲ್ಲುವುದು ನ್ಯಾಯವಲ್ಲ. ಉಮೇಶ್ ರೆಡ್ಡಿ ನರಹಂತಕನೆಂದು ಎಲ್ಲಾ ರೆಡ್ಡಿಗಳನ್ನೂ ದೂರಲಾಗುತ್ತಾ? ದಂಡುಪಾಳ್ಯದ ಹಂತಕರ ಕಾರಣಕ್ಕೆ ಆ ಊರಿನ ಎಲ್ಲರನ್ನೂ ಕೊಲ್ಲುವುದು ನ್ಯಾಯವಾ? ರೋಗಗ್ರಸ್ಥ ಹುಚ್ಚು ನಾಯಿಗಳನ್ನೋ, ತೀರ ನರಭಕ್ಷಕ ಪ್ರವೃತ್ತಿಯವುಗಳನ್ನೋ ಬೇಕಿದ್ದರೆ ಕೊಲ್ಲಲಿ. ಆದರೆ ಆರೋಗ್ಯವಂತ ಮತ್ತು ಜನರ ಪ್ರೀತಿ ಪಾತ್ರವಾದ ಬೀದಿನಾಯಿಗಳನ್ನು ಈ ನೆಪದಲ್ಲಿ ಕೊಲ್ಲುವುದು ಯಾವ ನ್ಯಾಯ?

ಚಂದ್ರಾಲೇಔಟಿನ ಜನಕ್ಕೆ ನನ್ನ ಸಲಹೆಯಿಷ್ಟೆ. ಹೊಟ್ಟೆ ತುಂಬಿದ ನಾಯಿ ಬೇಟೆಗೆ ಇಳಿಯೋಲ್ಲ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಪ್ರತಿ ಮನೆಯವರೂ ತಮ್ಮ ತಂಗಳನ್ನವಾದರೂ ಅಲ್ಲಿನ ನಾಯಿಗಳಿಗೆ ಹಾಕುವುದೊಂದೇ ಈ ಸಮಸ್ಯೆಗೆ ಪರಿಹಾರ.

ಇದು ಪ್ರಾಣಿ ಶಾಸ್ತ್ರಜ್ಞ ಡಾ. ವಿ.ಸಿ. ಮೂರ್ತಿಯವರ ಮಾತು. ಕೇವಲ ಚಂದ್ರಾಲೇಔಟ್ ಮಾತ್ರವೇಕೆ ಪ್ರತಿ [...] ಇದು ಅರ್ಥವಾದರೆ?

ವೊಂದೇ ಪರಿಹಾರವೆಂದು ಸಂಪಾದಕೀಯ ಬರೆದವು. ಆರೋಗ್ಯ ಮಂತ್ರಿ ಅಶೋಕ್‌ನಿಂದ ಹಿಡಿದು ಉಪಮುಖ್ಯಮಂತ್ರಿ ಯಡ್ಡಿಯ ತನಕ ಪ್ರತಿಯೊಬ್ಬರೂ ಬೀದಿ ನಾಯಿಗಳ ಮೇಲೆ ಪೌರುಷ ಮೆರೆದದ್ದೇ ಬಂತು.


ತಾಯಿ ಮಂಜುಳಾ ಜೊತೆ ವಿಷ್ಣು

ಯಾರೂ ಘಟನೆಯ ಮೂಲ ಕೆದಕಲು ಹೋಗಲಿಲ್ಲ. ಹಕೀಕತ್ತೇನೆಂದರೆ ಬಿಸಿಸಿ ಲೇಔಟ್ ಮಿಕ್ಕೆಲ್ಲಾ ಬಡಾವಣೆಗಳಂಥಲ್ಲ. ಅಲ್ಲಿರುವುದು ಐಷಾರಾಮಿ ಬಂಗಲೆಗಳು. ಮನೆ ಗೇಟು ತೆರೆದರೆ ನೇರವಾಗಿ ಕಾರು ಹತ್ತುವಂಥ ಶ್ರೀಮಂತರು. ಮಿಕ್ಕಂಥೆ ಅಲ್ಲಿ ಖಾಲಿ ಸೈಟುಗಳಲ್ಲಿ ನಿರ್ಮಾಣಾವಸ್ಥೆಯ ಕಟ್ಟಡಗಳ ಪಕ್ಕ ಗುಡಿಸಲು ಕಟ್ಟಿಕೊಂಡ ಗುಲ್ಬರ್ಗಾ-ರಾಯಚೂರು ಮೂಲದ ನಿರ್ಗತಿಕ ಕೂಲಿಗಳು. ಮನುಷ್ಯ ಮಾಂಸದ ರುಚಿ ಹತ್ತಿದ ನಾಯಿ ಹಿಂಡೊಂದಕ್ಕೆ ಇಂಥ ಕೂಲಿಗಳ


ಖಾಲಿ ನಿವೇಶನದಲ್ಲಿ ಬೆಳೆದು ನಿಂತ ಪೊದೆ

ಮಕ್ಕಳೇ ಸುಲಭದ ತುತ್ತಾಗುವ ಸಾಧ್ಯತೆಯಿತ್ತು. ಆ ಹೊತ್ತಿಗಾಗಲೇ ಪಾಲಿಕೆಯ ಇಪ್ಪತ್ತಕ್ಕೂ ಹೆಚ್ಚು ಬೀದಿನಾಯಿ ಹಿಡಿಯುವ ತಂಡಗಳು ಚಂದ್ರಾಲೇಔಟಿಗೆ ದಾಳಿಯಿಟ್ಟವು. ಸಾವಿರಕ್ಕೂ ಹೆಚ್ಚು ಬೀದಿ ನಾಯಿಗಳನ್ನು ಹಿಡಿದು ಕೊಲ್ಲಲಾಯ್ತು. ಇಡೀ ಬೆಂಗಳೂರಿನ ಜನ ಬೀದಿನಾಯಿಗಳಿಗೆ ಶಾಪ ಹಾಕತೊಡಗಿದರು.

ಸರಿ, ಇಡೀ ಪಾಲಿಕೆಯ 'ಬೀದಿನಾಯಿ ನಿಯಂತ್ರಣ ಪಡೆ' ಚಂದ್ರಾಲೇಔಟಿನ ಬಹುಪಾಲು ಬೀದಿ ನಾಯಿಗಳನ್ನು ಹಿಡಿದುಕೊಂಡ ನಂತರ ವಾದರೂ ಇದು ನಿಲ್ಲಬೇಕಲ್ಲ? ಹಾಗಾಗಲಿಲ್ಲ. ಮತ್ತೆ ಜನವರಿ 11 ಕ್ಕೆ ಇದೇ ಬಿಸಿಸಿ ಲೇಔಟಿನ ಹನ್ನೊಂದನೇ ಕ್ರಾಸಿನಲ್ಲಿ ಆಟವಾಡಿಕೊಂಡಿದ್ದ ಗೌರಮ್ಮ ಎಂಬ 8 ವರ್ಷದ ಬಾಲಕಿಯ ಮೇಲೆ ಮತ್ತದೇ ನಾಯಿ ಹಿಂಡು ದಾಳಿ ನಡೆಸಿತ್ತು. ಆಕೆಯ ತಲೆ, ಕೈ, ಬೆನ್ನು ಎಲ್ಲವನ್ನೂ ಕಚ್ಚಿ ಗಾಯಗೊಳಿಸಿದ ನಾಯಿಗಳು ಆಕೆಯನ್ನು ಪಕ್ಕದ ಪೊದೆಗೆ ಎಳೆ ದೊಯ್ಯಲು ಹವಣಿಸಿದ್ದವು. ಅಷ್ಟರಲ್ಲೇ ಪಕ್ಕದ ಮನೆಯ ಪುಟ್ಟರಾಜು ಮತ್ತವರ ಅಳಿಯ ಜೈರಾಜ್ ಬಂದು ಆಕೆಯನ್ನು ನಾಯಿಗಳಿಂದ ಪಾರು ಮಾಡಿದ್ದಾರೆ.

ಹೆಬ್ಬೆಟ್ಟೇ ಮಾಯ!

ಪುಟ್ಟರಾಜು ಹೆಂಡತಿ ಜಗದಾಂಬ ಇವತ್ತಿಗೂ ಅದನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸುತ್ತಾರೆ. ನಾಯಿಗಳು ಮಜಭೂತಾಗಿವೆ. ಹಿಂದ್ಯಾವತ್ತೂ ಅವನ್ನು ನೋಡಿರಲಿಲ್ಲ, ತಮ್ಮದೇ ಬೀದಿಯಲ್ಲಿದ್ದ ನಾಯಿಗಳೂ ಅವಾಗಿರಲಿಲ್ಲ. ಒಂದು ಕಂದು, ಮತ್ತೊಂದು ಕಾಫಿ ಬಣ್ಣ, ಇನ್ನೊಂದಕ್ಕೆ ಬಿಳಿ ಕಪ್ಪು ಪಟ್ಟೆಗಳಿವೆ, ಮಗದೊಂದು ಕಂದು ಬಿಳಿಮಿಶ್ರಿತ. ಪಕ್ಕಾ ಕಂತ್ರಿ ನಾಯಿಗಳೆ!

ಇದು ಜಗದಾಂಬ ಹೇಳುವ ನರಭಕ್ಷಕ ನಾಯಿಗಳ ವಿವರಣೆ. ಚಂದ್ರಾಲೇಔಟಿನ ಪ್ರತಿ ಗಲ್ಲಿಯ ಜನಕ್ಕೂ ಅವರವರ ಮನೆ ಪಕ್ಕದ ಬೀದಿ ನಾಯಿಗಳು ಚಿರಪರಿಚಿತ. ಇದನ್ನು ಎಸಗುತ್ತಿರುವುದು ಒಂದೇ ಹಿಂಡಿನ ನಾಯಿಗಳೆಂದೂ, ಅವು ಎಲ್ಲಿಂದಲೋ ಬಂದ ನಾಯಿಗಳೆಂದೂ, ಮಿಕ್ಕೆಲ್ಲಾ ನಾಯಿಗಳಿಗೆ ನರಭಕ್ಷಕ ಪ್ರವೃತ್ತಿಯಿಲ್ಲವೆಂದೂ ಯಾರೂ ವಿವೇಚಿಸಲೇ ಇಲ್ಲ. ಕೆಲವರು ಪಕ್ಕದ ಗಂಗೊಂಡನಹಳ್ಳಿಯ ದನದ ಮಾಂಸದ ಅಂಗಡಿಗಳನ್ನು ದೂರಿದರು. ಅಂತಹ ಅಂಗಡಿಗಳ ತ್ಯಾಜ್ಯ ತಿಂದೇ ನಾಯಿಗಳಿಗೆ ನರಮಾಂಸದ ರುಚಿ ಹತ್ತಿವೆಯೆಂದರೆ ಇದನ್ನು ನಂಬಿದ ಪಾಲಿಕೆ ಕಮೀಷನ್ ಜೈರಾಜ್ ಗಂಗೊಡನಹಳ್ಳಿ ಏರಿಯಾದಲ್ಲಿ ಮುಸ್ಲಿಮರು ನಡೆಸುತ್ತಿದ್ದ ಮಾಂಸದ ಅಂಗಡಿಗಳನ್ನೆಲ್ಲ ಮುಚ್ಚಿಸಿಬಿಟ್ಟರು. ಅಕ್ಕಪಕ್ಕದ ಕಸದ ರಾಶಿಗಳೆಲ್ಲ ಶುಚಿಗೊಂಡವು. ಖಾಲಿ ಸೈಟುಗಳಲ್ಲಿ ಬೆಳೆದಿದ್ದ ಪೊದೆಗಳನ್ನು ಕತ್ತರಿಸಿ ಶುಚಿಗೊಳಿಸಲಾಯ್ತು. ಎಲ್ಲೆಂದರಲ್ಲಿದ್ದ ಬೀದಿ ನಾಯಿಗಳನ್ನು ಹಿಡಿದೊಯ್ದು ಕೊಂದರು. ಆದರೆ ಈ ನರಭಕ್ಷಕಗಳ ಹಿಂಡು ಮಾತ್ರ ಯಾರ ಕೈಗೂ ಸಿಗಲೇ ಇಲ್ಲ.


ಗುಲ್ಬರ್ಗಾದ ಬಡಕೂಲಿಯೂ ಬೀದಿ ನಾಯಿಯೂ


ಇನ್ನೇನು ನಾಯಿ ಹಾವಳಿ ನಿವಾರಣೆಯಾಯಿತೆಂದೇ ಯಾರೆಲ್ಲ ಭಾವಿಸಿದ್ದರೋ ಅವರೆಲ್ಲರನ್ನೂ ಮೊನ್ನೆ ಜನವರಿ 17 ರ ಘಟನೆ ಬೆಚ್ಚಿಬೀಳಿಸಿತ್ತು. ಬಿಸಿಸಿ ಲೇಔಟ್ ಪಕ್ಕದ ಗಂಗೊಡನಹಳ್ಳಿ ಸ್ಲಂನ ಅಕ್ರಮ್ ಪಾಷಾ ಎಂಬಾತ ಇದೇ ಗಂಗೊಡನಹಳ್ಳಿ ಮುಖ್ಯರಸ್ತೆಯ ಕರ್ನಾಟಕ ಮೆಡಿಕಲ್ಸ್ ಎದುರಿನ ಪುಟ್‌ಪಾತ್‌ನಲ್ಲಿ ಕುಡಿದು ಬಿದ್ದಿದ್ದ. ನಾಯಿ ಹಿಂಡು ಆತನ ಮೇಲೆ ಎಂಥಾ ದಾಳಿ ನಡೆಸಿತ್ತೆಂದರೆ ಆತನ ತಲೆ, ಬೆನ್ನು, ಕೈ ಎಲ್ಲವನ್ನೂ ಕಚ್ಚಿ ಕೊನೆಗೆ ಬಲಗಾಲಿನ ಹೆಬ್ಬೆಟ್ಟನ್ನೇ ತಿಂದು ಹಾಕಿದ್ದವು. ಕುಡಿದು ಪ್ರಜ್ಞೆಯಿಲ್ಲದೇ ಬಿದ್ದಿದ್ದ ಅಕ್ರಮ್ ಪಾಷಾನನ್ನು ನಾಯಿಗಳು ಕಿತ್ತು ತಿನ್ನುತ್ತಿದ್ದದ್ದನ್ನು ನೋಡಿ ದಾರಿಹೋಕರು ಕಲ್ಲು ತೂರಿ ಓಡಿಸಿದ್ದಾರೆ. ಆಸ್ಪತ್ರೆ ಸೇರಿ ಹೇಗೋ ಬದುಕುಳಿದಿದ್ದಾನೆ ಅಕ್ರಮ್ ಪಾಷಾ. ಇದಾಗಿ ಒಂದು ಗಂಟೆಗೆ ಸರಿಯಾಗಿ ಇಲ್ಲಿಂದ ಮೂರು ಫರ್ಲಾಂಗ್ ದೂರದ ವಿದ್ಯಾ ಸಾಗರ್ ಸ್ಕೂಲ್ ಪಕ್ಕದ ಮನೆ ಮುಂದೆ ನಿಂತಿದ್ದ ವಿಷ್ಣು ಎಂಬ ಬಾಲಕನನ್ನು ಇದೀ ನಾಯಿ ಹಿಂಡು ಎಳೆದಾಡಿದೆ.

ಅದೂ ಮೊದಲು ಎರಡು ನಾಯಿಗಳು ಬಂದು ವಿಷ್ಣುವನ್ನು ನೆಲಕ್ಕೆ ಕೆಡವಿದವು. ಆತನನ್ನು ಪಕ್ಕದ ಖಾಲಿ ನಿವೇಶನದ ಪೊದೆಗೆ ಎಳೆದೊಯ್ಯಬೇಕೆನ್ನುವಷ್ಟರಲ್ಲಿ ಇನ್ನೆರಡು ನಾಯಿಗಳು ಪ್ರತ್ಯಕ್ಷಗೊಂಡವು. ಅಕ್ಕಪಕ್ಕದ ಜನ ಓಡಿ ಬರುವಷ್ಟರಲ್ಲಿ ನಾಯಿ ಹಿಂಡು ತೋಳಿನ ಮಾಂಸವನ್ನೇ ಕಿತ್ತು ತಿಂದಿದ್ದವು!

ಗ್ಯಾಂಗ್ ಆಫ್ ಪೋರ್

ಬಿಲ್ಡರ್ ಶ್ರೀನಿವಾಸ್ ಮತ್ತು ಮಂಜುಳಾ ದಂಪತಿಗಳ ಒಬ್ಬನೇ ಮಗ ವಿಷ್ಣು ಮೈತುಂಬಾ ಬ್ಯಾಂಡೇಜ್ ಸುತ್ತಿಕೊಂಡ ಪೋಟೋ ಹಾಕಿದ ಪತ್ರಿಕೆಗಳು ಮತ್ತೆ ನಾಯಿ ಹಾವಳಿಯೆಂದು ಪಾಲಿಕೆಗೆ ಶಾಪ ಹಾಕಿ ವರದಿ ಬರೆದವೇ ಹೊರತು, ಇದೆಲ್ಲವೂ ಒಂದೇ ನಾಯಿ ಹಿಂಡಿನ ಕೃತ್ಯವೆಂದಾಗಲಿ ಮತ್ತು ಅವು ಇಲ್ಲಿನ ಮಾಮೂಲಿ ಬೀದಿ ನಾಯಿಗಳಲ್ಲ ಎಂಬುದನ್ನಾಗಲಿ ಈತನಕ ಮನಗಂಡಿಲ್ಲ.

ಇಷ್ಟೆಲ್ಲಾ ಘಟನೆಗಳು ನಡೆದಿರುವುದು ಕೇವಲ ಅರ್ಧ ಕಿಲೋಮೀಟರ್ ವ್ಯಾಪ್ತಿಯಲ್ಲಿ ಮಾತ್ರವೇ ಹೊರತು ಅದರಿಂದಾಚೆಗೆಲ್ಲೂ ಇಂಥ ಪ್ರಕರಣಗಳಾಗಿಲ್ಲ. ಮೊದಮೊದಲು ಬಿಸಿಸಿ ಲೇಔಟಿನ ಅಕ್ಕಪಕ್ಕದ ರಸ್ತೆಗಳಲ್ಲಿ ಒಂಟಿ ಮಕ್ಕಳ ಮೇಲೆ ದಾಳಿ ನಡೆಸುತ್ತಿದ್ದ ನಾಯಿ ಹಿಂಡು ಕುಡಿದು ಬಿದ್ದಿದ್ದ ಅಕ್ರಮ್ ಪಾಷಾ ಒಬ್ಬನನ್ನು ಕಚ್ಚಿದಂತೆ ಬೇರೆ ಯಾರೇ ವಯಸ್ಕರ ಮೇಲೆ ದಾಳಿ ನಡೆಸಿಲ್ಲ.


ಚಂದ್ರಾಲೇಔಟ್ ಸ್ಮಶಾನ



ತೊಟ್ಟಿಗೆಸೆದಿದ್ದ ನವಜಾತ ಶಿಶುವೇ ಕಾರಣವೆ?

ನಾಗರಿಕ ಇತಿಹಾಸದಲ್ಲಿ ನಾಯಿಗಳು ನರಭಕ್ಷಕಗಳಾದ ಉದಾಹರಣೆಯೇ ಅಪರೂಪ. ಹಾಗಿದ್ದೂ ಯಾವ ಪರಿಸ್ಥಿತಿಯಲ್ಲಿ ಚಂದ್ರಾಲೇಔಟ್ ನಾಯಿಗಳ ಹಿಂಡೊಂದಕ್ಕೆ ನರರಕ್ತದ ರುಚಿ ಹತ್ತಿತ್ತು?

ಕೆಲವರ ಪ್ರಕಾರ ಬಿಸಿಸಿ ಲೇಔಟ್ ಕೊನೆಗಿರುವ ಸ್ಮಶಾನವೇ ಇಲ್ಲಿನ ನಾಯಿಗಳಿಗೆ ಮನುಷ್ಯನ ಮಾಂಸದ ರುಚಿ ಹತ್ತಿಸಿದೆ. ಹುಗಿದಿದ್ದ ಯಾವುದೋ ಹೆಣವನ್ನು ಇಲ್ಲಿನ ನಾಯಿಗಳು ನೆಲಬಗೆದು ತಿಂದಿರಬೇಕೆಂಬುದು ಇಲ್ಲಿನ ಕೆಲವರ ವಾದ. ಆದರೆ ಈ ಸ್ಮಶಾನಕ್ಕೆ ಹೆಣ ಬರುವುದೇ ಅಪರೂಪ. ಈತನಕ ಹೆಣ ಅಗೆದು ಅದನ್ನು ನಾಯಿಗಳು ತಿಂದ ಒಂದೇ ಒಂದು ಉದಾಹರಣೆಯಿಲ್ಲ. ಅಷ್ಟಕ್ಕೂ ಹೆಣವನ್ನು ಯಾರೂ ಮೇಲು ಮಟ್ಟದಲ್ಲಿ ಹೂಳುವುದಿಲ್ಲ. ಬಹುಶಃ ಯಾರೋ ತಾಯೊಬ್ಬಳು ತೊಟ್ಟಿಯಲ್ಲಿ ಎಸೆದು ಹೋದ ನವಜಾತ ಶಿಶುವನ್ನು ಕೆಲ ಬೀದಿನಾಯಿಗಳು ತಿಂದಿರಬೇಕೆ? ಅಂಥ ಯಾವುದೋ ಒಂದು ನಾಯಿಯನ್ನು ಪಾಲಿಕೆಯವರು ಹಿಡಿದು ಸಂತಾನಹರಣದ ನಂತರ ಚಂದ್ರಾಲೇಔಟನಲ್ಲಿ ಬಿಟ್ಟರಬೇಕೆ?

ಈ ಸಾಧ್ಯತೆಯೇ ನಿಜವೆನ್ನಿಸುತ್ತಿದೆ. ಒಂದೆರಡು ವರ್ಷದ ಹಿಂದೆ 'ಕಸದ ತೊಟ್ಟಿಗೆ ಬೀಸಾಡಿದ್ದ ನವಜಾತ ಶಿಶು ಬೀದಿನಾಯಿಗಳಿಗೆ ಬಲಿ' ಎಂಬ ಸುದ್ದಿಯನ್ನು ಜನ ಓದಿರಬೇಕು.

ಸಂಜೆ ಹೊತ್ತು ಅಥವಾ ಬೆಳ್ಳಂಬೆಳಿಗ್ಗೆ ಇವು ಬೇಟೆಗಿಳಿಯುತ್ತವೆ. ರಾತ್ರಿಯಿಡೀ ಸಂಚರಿಸಿ ಅಡುಗುದಾಣಗಳನ್ನು ಗೊತ್ತುಪಡಿಸಿಕೊಳ್ಳುತ್ತವೆ. ಹಗಲು ಹೊತ್ತು ಗುಂಪು ಗುಂಪಾಗಿ ಬೀದಿಗಿಳಿಯುವುದಿಲ್ಲ. ನಿರ್ದಿಷ್ಟ ಜಾಗದಿಂದ ಮತ್ತೊಂದು ಜಾಗಕ್ಕೆ ಒಂದೊಂದಾಗಿ ಬಂದು ಜಮೆಯಾಗುತ್ತವೆ. ಒಬ್ಬಂಟಿ ಅದರಲ್ಲೂ ಗಲೀಜು ಬಟ್ಟೆ ಹಾಕಿದ ಮಗುವನ್ನೇ ಬೇಟೆಯೆಂದು ಪರಿಗಣಿಸುತ್ತವೆ. ಪಾಲಿಕೆಯ ನಾಯಿ ಹಿಡಿಯುವ ದಳದವರಿಂದ ಅವಕ್ಕೆ ಸಲೀಸಾಗಿ ಬಚಾವಾಗುವುದೂ ಗೊತ್ತು. ಬಿಸಿಸಿ ಲೇಔಟಿನ ಮೋರಿಗಳಡಿಯಲ್ಲಿ ದಿನಗಟ್ಟಲೇ ಹೊಕ್ಕಿ ಕೂರುವುದೂ ಗೊತ್ತು.

ಹೀಗಾಗಿ ಚಂದ್ರಾಲೇಔಟಿನ ಬೇರೆಲ್ಲಾ ಬೀದಿ ನಾಯಿಗಳನ್ನು ಪಾಲಿಕೆಯವರು ಹಿಡಿದೊಯ್ದಾಗಲೂ ಈ ನರಭಕ್ಷಕ ಹಿಂಡು ಮಾತ್ರ ಈತನಕ ಸಿಕ್ಕಿಲ್ಲ. ಬಹುಶಃ ಸಿಗಲಿಕ್ಕೂ ಇಲ್ಲ. ಹಾಗೊಮ್ಮೆ ಇನ್ನೂ ಕೆಲ ಬೀದಿನಾಯಿಗಳಿಗೆ ಈ ಹಿಂಡಿನ ಸಂಪರ್ಕ ಸಿಕ್ಕಿಬಿಟ್ಟರೆ? ಅವಕ್ಕೂ ನರಮಾಂಸದ ರುಚಿ ಸಿಕ್ಕಿಬಿಟ್ಟರೆ? ನಾಗರಿಕ ಸಮಾಜ ಇಂಥದೊಂದು ಸಮಸ್ಯೆಯನ್ನು ಹೇಗೆ ಎದುರಿಸುತ್ತದೆ? ಇದಕ್ಕೆ ಬೆಂಗಳೂರಿನ ಎಲ್ಲ ನಾಯಿಗಳನ್ನೂ ಕೊಲ್ಲುವುದೇ ಪರಿಹಾರವೆ? ಅಷ್ಟಕ್ಕೂ ಬೀದಿನಾಯಿಗಳಿಗೆ ಮನುಷ್ಯನ ಅನ್ನದ ಹೊರತಾಗಿ ಇನ್ನಾವ ನೈಸರ್ಗಿಕ ಆಹಾರ ಮೂಲವಿದೆ? ತನ್ನನ್ನು ಯುಗಯುಗಾಂತರಗಳಿಂದ ನಂಬಿಕೊಂಡು ಬಂದ, ತನ್ನನ್ನೇ ಅವಲಂಬಿಸಿದ ಒಂದು ಪರಮನಿಷ್ಠ ಜೀವಿಯನ್ನು ಮನುಷ್ಯ ಹಸಿವಿಗೆ ಕೆಡವಿದ್ದರಿಂದಲೇ ಹೀಗಾಯಿತೆ?


ಹೆಬ್ಬೆಟ್ಟು ಕಳೆಕೊಂಡ ಅಕ್ರಂ

ಬದುಕುವ ಕೊನೆಯ ಯತ್ನವಾಗಿ ಈ ನಾಯಿಗಳು ನರಭಕ್ಷಕಗಳಾದವೆ? ■

ಬ್ರೆಡ್ಡು ತರುತ್ತಿದ್ದ ತಾಯಿಯೂ ಗಂಗೊಂಡನಹಳ್ಳಿಯ ಮುಸ್ಲಿಮರೂ

ಬಹುಶಃ ಬೀದಿನಾಯಿಗಳ ಧಾರುಣ ಸ್ಥಿತಿ ಕಂಡೇ 'ನಾಯಿಪಾಡು' ಎಂಬ ಶಬ್ದ ಹುಟ್ಟಿದೆ. ಪಾಲಿಕೆ ಹಿಂದಿನಂತೆ ನಾಯಿಗಳನ್ನು ಕೊಲ್ಲುತ್ತಿಲ್ಲ. ಅವಕ್ಕೆ ಸಂತಾನಹರಣ ಚಿಕಿತ್ಸೆ ಮಾಡಿ ಮತ್ತದೇ ಜಾಗಕ್ಕೆ ತಂದುಬಿಡುತ್ತದೆ. ಇಷ್ಟೇ ಆಗಿದ್ದರೆ ಬೀದಿನಾಯಿಗಳು ನೆಮ್ಮದಿಯಿಂದಿರಬೇಕಿತ್ತು. ಆದರೆ ಇದಕ್ಕೆ ತಕ್ಕಂಥೆ ಪಾಲಿಕೆ ಸ್ವಚ್ಛ ಬೆಂಗಳೂರು ಕಾರ್ಯಕ್ರಮವನ್ನು ತಂದು ಮನೆಮನೆಯಿಂದ ಕಸ ಸಂಗ್ರಹಿಸುತ್ತಿದೆ. ಹಿಂದಿನಂತೆ ಒಮ್ಮೆಗೇ ಸತ್ತಂತಿಲ್ಲ, ಬದುಕಬೇಕೆಂದರೆ ಕಸದ ತೊಟ್ಟಿಗಳಿಲ್ಲ. ಜನಕ್ಕೆ ನಾಯಿಪಾಡು ಮೊದಲೇ ಗೊತ್ತಿಲ್ಲ.


ಇದಕ್ಕೆ ಚಂದ್ರಾಲೇಔಟ್ ಶ್ರೀಮಂತರೂ ಹೊರತಾಗಲಿಲ್ಲ. ಅಲ್ಲಿನ ಬೀದಿನಾಯಿಗಳಿಗೆ ಕಳೆದ ಕೆಲ ವರ್ಷಗಳಿಂದ ಯಾರೋ ಹೆಂಗಸೊಬ್ಬಳು ಪ್ರತಿನಿತ್ಯ ಬಂದು ಬ್ರೆಡ್ಡು ಬನ್ನು ಹಾಕುತ್ತಿದ್ದಳು. ಯಾವತ್ತು ಹುಚ್ಚುನಾಯಿಯೊಂದು ಕೆಲವರನ್ನು ಕಚ್ಚಿತೋ ಕೆಲ ಅವಿವೇಕಿಗಳು 'ನೀನು ಬ್ರೆಡ್ಡು ತಂದು ಹಾಕುವುದರಿಂದಲೇ ನಾಯಿಗಳು ಕಚ್ಚುತ್ತಿವೆ' ಎಂದು ಆಕೆಯ ಮೇಲೆ ಜಗಳಕ್ಕೆ ಬಿದ್ದರು. ಕಚ್ಚಿದ್ದು ಎಲ್ಲಿಂದಲೋ ಬಂದಿದ್ದ ಹುಚ್ಚುನಾಯಿಗಳು. ಈ ಕಾಯು ಹಾಕುತ್ತಿದ್ದದ್ದು ನಿತ್ಯಾಸಿ ಬೀದಿನಾಯಿಗಳಿಗೆ!

ಯಾವತ್ತು ಆ ಹೆಂಗಸು ಹಾಕುತ್ತಿದ್ದ ಆಹಾರ ನಿಂತಿತೋ ಬೀದಿನಾಯಿಗಳು ಕಂಗೆಟ್ಟವು. ಕೆಲವು ಮಕ್ಕಳ ಕೈಲಿದ್ದ ತಿಂಡಿ ಕಿತ್ತು ತಿನ್ನತೊಡಗಿದವು. ಹಾಗೇ ಮಕ್ಕಳ ತಿಂಡಿಗೆ ಕಚ್ಚಿ ಹೆದರಿಸಲು ಹೋಗಿಯೇ ನಾಯಿಗಳಿಗೆ ಮಕ್ಕಳ ರಕ್ತದ ರುಚಿ ಹತ್ತಿತೆ?

ಇಷ್ಟಾದ ನಂತರವೂ ಜನಕ್ಕೆ ವಾಸ್ತವದ ಅರಿವಾಗಲಿಲ್ಲ. ಪಕ್ಕದ ಗಂಗೊಂಡನಹಳ್ಳಿಯ ಮುಸ್ಲಿಮರೇ ಇದಕ್ಕೆಲ್ಲ ಕಾರಣ. ಅವರ ದನದ ಮಾಂಸದಂಗಡಿಗಳ ತ್ಯಾಜ್ಯ ತಿಂದೇ ನಾಯಿಗಳಿಗೆ ಮನುಷ್ಯನ ಮಾಂಸದ ರುಚಿ ಹತ್ತಿದೆಯೆಂದರು. ಅದನ್ನೇ ನಂಬಿದ ಪಾಲಿಕೆ ಅಲ್ಲಿನ ಮಾಂಸದಂಗಡಿಗಳನ್ನೆಲ್ಲ ಮುಚ್ಚಿಸಿತು. ಇದರಿಂದ ಅಳಿದುಳಿದ ನಾಯಿಗಳಿಗೆ ಸಿಗುತ್ತಿದ್ದ ಚೂರುಪಾರು ಆಹಾರವೂ ತಪ್ಪಿಹೋಯಿತು. ಶ್ರೀದೇವಿಯ ಸಾವಿನ ನಂತರ ಮುನ್ನೂರಕ್ಕೂ ಹೆಚ್ಚು ಬೀದಿನಾಯಿಗಳನ್ನು ಹಿಡಿದೊಯ್ದು ಕೊಂದು ಹಾಕಿದ ನಂತರವೂ, ಗಂಗೊಂಡನಹಳ್ಳಿಯ ಮಾಂಸದಂಗಡಿಗಳನ್ನು ಮುಚ್ಚಿಸಿದ ನಂತರವೂ ನಿಲ್ಲಬೇಕಿದ್ದ ನಾಯಿಗಳ ದಾಳಿ ಹಿಂದಿಗಿಂತಲೂ ದುಷ್ಟವಾಯಿತು.

ಚಂದ್ರಾಲೇಔಟ್‌ನ ಸುಖಪುರುಷರ ಎಲ್ಲಾ ಲೆಕ್ಕಾಚಾರಗಳೂ ಪಾಲಿಕೆಯ ಎಲ್ಲಾ ಯತ್ನಗಳೂ ಪ್ರಕೃತಿಯ ಮುಂದೆ ನಿಷ್ಫಲಗೊಂಡಿದ್ದವು. ಬೀದಿ ನಾಯಿಗಳೆಂದರೆ ಅವು ಹಸಿವಿನ ಮತ್ತೊಂದು ರೂಪ ಎಂಬುದನ್ನೇ ಯಾರೂ ಅರ್ಥ ಮಾಡಿಕೊಳ್ಳಲಿಲ್ಲ.

"ನಮ್ಮುಡುಗ್ರು ಮಟ್ಟೆ ತಿನ್ನಲಿಲ್ಲ ಅಂದ್ರೆ ಪೇಜಾವರನಂಗಾಯ್ತವೆ'



"ಕಿವ್ವಕ್ಕಿದ್ದಂತೆ ಸೀರ ಪಕಾರೆಂದು ನಗಾಡಿ. "ಇದೊಳ್ಳೆ ರಾಮಾಯಣಾಯ್ತಲ್ಲಾ" ಎಂದ. ಅವನ ನಗು ಮತ್ತು ವ್ಯಾಖ್ಯಾನಕ್ಕೆ ಅವನೇ ಉತ್ತರ ಹೇಳುತ್ತಾನೆಂದು ಕಾದ ಕಾಳಮಾವ.

"ಏನಾಯಿತ್ಲ?" ಎಂದ.

"ಆ ಇಸುಗೂಲುದ್ರಿಗೆ ಕೋಳಿಮಟ್ಟೆ ಕೊಡದು ಬ್ಯಾಡ ಅಂತ ಕೂತವ್ರುರೆ."

"ಯಾರು?"

"ಸ್ವಾಮಿಗೋಳು."

"ಅವ್ರ್ಯಾಕ್ ಬ್ಯಾಡ ಅಂತರ್ಲ, ಅವುರಿಗೇನು ಗುರುಗುಟ್ಯತೆ?"

"ಸ್ವಾಮಿಗಳು ಇವತ್ತಿನ ದಿವಸದಲ್ಲಿ ಸ್ವಾಮಿಗಳಂಗೆ ಮಾತಾಡ್ತಯಿಲ್ಲ ಕಣ ಮಾವ, ಯಮ್ಮೆಲ್ಗೆಗಳಂಗೆ ಮಾತಾಡ್ತ ಅವುರೆ" ಎಂದ ಉಗ್ರಿ.

"ಯಮ್ಮೆಲ್ಗೆಗಳು ಯಾರೂ ಬಡ್ಡಿಯವಾರ ಮಾಡ್ತ ಯಿಲ್ಲಕಣೋ ಉಗ್ರಿ. ಈ ಸ್ವಾಮಿಗಳು ಮಾಡ್ತ ಅವುರೆ ಇದಕೇನೇಳ್ತೀ" ಎಂದ ವಾಟಿಸ್ಸೆ.

"ಸ್ವಾಮಿಗಳು ಬಡ್ಡಿಯವಾರ ಮಾಡ್ತರೇನ್ಲ?" ಎಂದಳು ಜುಮ್ಮಿ.

"ಊಕಣಕ್ಕ ನಾನು ಸುಳ್ಳೇಳತಯಿಲ್ಲ. ಆ ಪೇಜಾವರ ಬಡ್ಡಿಯವಾರದಲ್ಲೆ ಹನ್ನೆರಡು ಲಕ್ಷ ಕಳಕಂಡು ಕುಂತವುನೆ."

"ಇವುನಂತನೆ ಅಂತ ಕೇಳ್ಳೆ ನೀನು" ಎಂದ ಕಾಳಮಾವ.

"ದ್ವಡಪ್ಪ, ನನಿಗೆ ಪೇಜಾವರ ಸ್ವಾಮಿ ಮೇಲೆ ಗೌರವ ಇಲ್ದೆಯಿರೋದ್ರಿಂದ ಹಿಂಗೆ ಮಾತಾಡ್ತನೆ ಅಂತ ತಿಳಕಬ್ಯಾಡ. ಬೇಕಾದ್ರೇ ಉಗ್ರಿನೆ ಕೇಳು."

"ಅಯ್ಯೋ ಆ ಪೇಜಾವರನ ಕತೆ ಒಂದೊಂದಲ್ಲ. ಈ ಸ್ಕೂಲುಡುಗ್ರಿಗೆ ಮಟ್ಟೆ ಕೊಡಬ್ಯಾಡಿ ಅಂತ ಜಗಳ ಹಚ್ಚದೋನು ಅವುನೆಯ" ಎಂದ ಉಗ್ರಿ.

"ಅಲ್ಲಾ ಕಂಡ್ಯ, ನಾವು ಆ ಪೇಜಾವರ ಏನು ತಿಂತನೆ ಅಂತ ಇವತ್ತಿನ ವರಿಗೂ ಕೇಳಕ್ಕೋಗಿಲ್ಲ, ಅಂತದ್ರಲಿ ಪಾಪ ಇಸುಗೂಲುಡ್ರು ಮಟ್ಟೆ ತಿಂದ್ರೆ ಇವುನಿಗೇನ್ಲ?"

"ಅದ್ಯಾಕವುನು ಅಂಗಂತ ಅವುನೆ ಗೊತ್ತೆ ದ್ವಡಪ್ಪ? ನಮುಡ್ರು ಕೋಳಿಮಟ್ಟೆ ತಿಂದ್ರೆ ಬುದ್ಧಿ ಬ್ಯಳಿತದೆ. ಬುದ್ಧಿ ಬ್ಯಳದ ಹುಡುಗರ ಕೈಗೆ ಲಾಟ ಕೊಡಕ್ಕಾಗದಿಲ್ಲ, ಭಜರಂಗಿ ಮಾಡಕ್ಕೂ ಆಗದಿಲ್ಲ. ಅದ್ಕೆ ಅವುನು 'ಮಟ್ಟೆಕೊಡಬ್ಯಾಡಿ ಅಂತ ಕುಂತವ್ನೂನೆ. ಅಲವೇನೂ ಉಗ್ರಿ?" ಎಂದ ವಾಟಿಸ್ಸೆ.

"ಥೂ ನೀನಲ್ಲಿಗಂಟ ಯೋಚನೆ ಮಾಡಬ್ಯಾಡಕಣೊ. ಅವುನು ಕೋಳಿ ಮಟ್ಟೆಯ ಮಾಂಸ ಅಂತ ತಿಳಿಕಂಡ ವುನೆ ಅಷ್ಟೆಯ."

"ಮಟ್ಟೆ ಬಾಡಲ್ಲ, ಮೀನು ಮಾಂಸಲ್ಲ ಅಂತ ಮದ್ಲೆ ಹೇಳಿಲವೇನ್ಲ. ಮಟ್ಟೆಯ ಯಾವನಾರ ಬಾಡು ಅಂದನೆ?"

"ಅವುನು ತಿಂದಿದ್ರೆ ಗೊತ್ತಾಗದು ದ್ವಡಪ್ಪ ಇದು ಬಾಡಲ್ಲ ಅಂತವ. ಪಾಪ ಇಸುಗೂಲುಡ್ರು ಬರಿ ಅನ್ನ ಸಾರು ತಿಂತವೆ. ಅದರ ಜ್ವತಿಗೆ ಒಂದೇ ಒಂದು ಕೋಳಿಮಟ್ಟೆ ಕೂಡನ ಅಂದ್ರೆ, ಅದಕೂ ಕಲ್ಲಾಕ್ತನಲ್ಲಾ. ಈ ಪೇಜಾವರನಿಗೆ ಹೇಳೋರು ಕೇಳೋರು ಯಾರೂ ಇಲವೆ?"

"ಸ್ವಾಮಿಗಳ ಅಂಗ್ಯಲ್ಲ ಅನ್ನಕೋಗಬ್ಯಾಡ ಕಂಡ್ಯೆ."


"ಅನ್ನಿಸಿಗಳೂ ಅಂತ ಕ್ಯಲಸ ಯಾಕ್ ಮಾಡಬೇಕು ದ್ವಡಪ್ಪ. ಒಂದು ವೇಳೆ ಇವುರ ಮಾತ ಕಟಗಂಡು ಹುಡ್ರಿಗೆ ಎಗ್ ಸಪ್ಲೆ ಮಾಡಲಿಲ್ಲ ಅಂದ್ರೆ ಹುಡುಗರ್ಯಲ್ಲ ಆ ಪೇಜಾವರನಂಗೆ ಆಯ್ತವೆ. ಆಗ ಅವುರ ಕೈಲಿ ಯಾವ ಕ್ಯಲಸ ಮಾಡಕ್ಕಾಯ್ತದೆ? ಹೋಗ್ಲಿ ಯಾರಾರ ಹೆಣ್ಣು ಕೂಡ್ತರ" ಎಂದು ವಾಟಿಸ್ಸೆ ಜುಮ್ಮಿ ಮುಖ ನೋಡಿದಾಗ ಪಕಾರೆಂದು ನಗಾಡಿದ ಅವಳು.

"ಆಹಹ ಯಂಗಂತನೆ ನೋಡು ಈ ಸೂಳೆಮಗ. ಅಲ್ಲ ಕಂಡ್ಯ ಮಟ್ಟೆ ತಿನ್ನಕ್ಕು ಹೆಣ್ಣು ಕೊಡಕ್ಕು ತಂದು ತಾರಾಕ್ತಿಯಲ್ಲಾ. ಮಟ್ಟೆ ತಿನ್ನದಲೆ ಚನ್ನಾಗಿರೋರ ಏಟು ಜನ ತೋರ್ಸಿ" ಎಂದಳು.

"ನೋಡಕ್ಕ ಮಕ್ಕಳು ಬ್ಯಳಿಯೋ ಏಜಲ್ಲಿ ಕೆಲವು ವಿಟಾಮಿನ್ ಸಿಗಬೇಕು. ಸಿಕ್ಕಿದ್ರೆ ಅವು ಚನ್ನಾಗಿ ಬ್ಯಳಕತ್ತವೆ. ನನ್ನನ್ನೆ ನೋಡು ನಾಯಿ ಹ್ವಡಿಯೋ ಕೋಲಿನಂಗಿದ್ದೆ. ನನ್ನ ಎಗ್‌ಜಾಂಪಲ್ಲು ಬ್ಯಾಡ, ಈ ಉಗ್ರಿನೆ ತಗೊ. ಅವುನು ಇಲ್ಲಿದ್ದಾಗ ಯಂಗಿದ್ದ. ಆ ಪೇಜಾವರಸ್ವಾಮಿ ಹದನಾರೊರ್ಷದಲ್ಲಿ ಯಂಗಿದ್ದೊ ಅಂಗಿದ್ದ. ಎಜುಕೇಶನ್ ಬುಟ್ಟು ಬೆಂಗಳೂರ ಹೋಟ್ಯಗೋಗಿ ಸೇರಿಕಂಡ ಯರಡೇ ತಿಂಗಳಿಗೆ, ಅವುನಿಕ್ಕಂಡೋಗಿದ್ದ ಅಂಗಿ, ಪ್ಯಾಂಟು ಟೈಟಾಗಿ ಇಕ್ಕಳಕ್ಕಾಗದೆ, ಬಸಾಕಿ ಬ್ಯಾರೆ ಬಟ್ಟೆ ವಲಸಬೇಕಾಯ್ತು, ಅಂಗಾಗಿದ್ದ, ಅಲವೇನೂ ಉಗ್ರಿ" ಎಂದ ವಾಟಿಸ್ಸೆ.

"ಅದೇನೂ ನಿಜಕಣೊ, ಬ್ಯಳಿಯೋ ವಯಿಸಲ್ಲಿ ವಳ್ಳೆ ಊಟ ಸಿಗಬೇಕು ನಮ್ಮ ಮಕ್ಕಳಿಗೆ. ಒಂದು ಮಟ್ಟೆ ಕೂಡ್ತಿವಿ ಅಂದ್ರೆ ಬ್ಯಾಡ ಅಂತ ಕೂಗಾಡ್ತರಲ್ಲಾ. ಇನ್ನೇನಾರ ಇವುರದೇ ಸರಕಾರಾಗಿದ್ರೆ ಇನ್ನೇನೇನು ಮಾಡತಿದ್ರು ಅಂತ?"

"ಹಾಲು, ಬಾಳೆಹಣ್ಣು ಕೊಡಿ ಅಂದವುರಂತೆ" ಎಂದಳು ಜುಮ್ಮಿ.



"ಅಂಗಂದವುರೆ ಸರಿ ಕಣೆ. ಅಲ್ಲಿಗೆ ಇವುರ ದೃಷ್ಟಿಲಿ. ಬಾಳೆಹಣ್ಣು ಹಾಲು ಶ್ರೇಷ್ಠ, ಮಟ್ಟೆ ಕನಿಷ್ಠ ಅಂದಂಗಾಯ್ತು. ಈಗಿನ ಇಲಾತಿ ಹಸಿನ ಹಾಲು ಹಾಲಿನಂಗಿದ್ದತೆ. ಅಂಗೆ ಅಸಿಟ್ಟನ ನೀರಿದ್ದಂಗಿರತದೆ. ಅದ ಕುಡಿಯುದಕಿಂತ ಮಟ್ಟೆ ತಿನ್ನದೇ ವಳ್ಳೆದು" ಉಗ್ರಿ.

"ಸರಕಾರ ಮಟ್ಟೆ ಕೊಡದೇನು ಅವುರ ಕೈಯಿ ಕೊಡದಿಲ್ಲಕಣೊ. ನಮ್ಮ ಹುಡುಗರಪ್ಪದೀರು ಶ… ಕುಡಿತರೆ. ಅದರಾದಾಯದಲ್ಲಿ ಇವುರು ಮಟ್ಟೆ ಕ… ಅಷ್ಟೆ."

"ಈಗ ಶರಾಪುನೇ ನಿಲ್ಲುಸ್ತರಂತಲ್ಲ ತಗೊ?"

"ನಿಲ್ಲುಸ್ಲಿ ನೋಡನ."

"ನಿಲ್ಸಿಸೇ ಬುಟ್ರಪ್ಪ, ಆಗೇನು ಮಾಡ್ತೀ?"

"ನೋಡಕ್ಕ, ನೈನ್‌ಟೀನ್ ಸಿಕ್‌ಟಿ ಸಿಕ್ಸಲ್ಲಿ (1… ಶರಾಪಿರಲಿಲ್ಲ, ಆಗ ನಿಜಲಿಂಗಪ್ಪನ ಕಾಲ. ಆಗ್ಲೂ… ನಮ್ಮ ಸೀರ ಚಿಗಪ್ಪ, ಬೈರೇಗೌಡ, ತಮ್ಮೇಗೌಡ… ರಿಣ್ಣಾಗಿ ಬಂದು ಊರು ಮುಂದೆ ಸಾಕಾ… ವಷ್ಟು ಮಾತಾಡಿ ಮನೆ ಸೇರಿಕಳೊ… ಅದೆಲ್ಲಿ ಕುಡಿತಿದ್ರೊ ಏನೊ ಅಂತ ಬತ್ತದೆ. ಅದೇ ಒಂಥರ ಥ್ರಿಲ್ಲಾಗಿರತದೆ… ಯಲ್ಲಾತ್ಕು ರಡಿಕಣಕ್ಕ. ಇವುರು ಗಂಡುಸರ… ನಿಲ್ಲುಸ್ಲಿ ನೋಡನ."

"ನಿಲ್ಸಿಸಿ ಅಂತ ಕೂಗಾಡರು ಹೆಂ… ಕಂಡ್ಯ."

"ಹೆಂಗಸರ ಡಿಮ್ಯಾಂಡು ಸಿಕ್ಕಾಬಟ್ಟೆ… ಕಣಕ್ಕ. ಗಂಡನ್ನ ಮನೆಲೆ ಇರು ಅಂ… ಎಲ್ಲಿಗೂ ಹೋಗಬ್ಯಾಡ ಅಂತರೆ, ಮಾ… ಬ್ಯಾಡ ಅಂತರೆ, ಬೀಡಿ ಸೇದಬ್ಯಾಡ ಅಂ… ಮನೆತವುಲೆ ಇರು ನಾನು ಸಿನುಮ ನೋ… ಕಂಡು ಬತ್ತಿನಿ ಅಂತರೆ. ಅವುರು ಹೇ… ತರ ನಾವಿರ ಕ್ಯಾಯ್ತದೇನಕ್ಕ?"

"ಆಗದಿಲ್ಲ, ಹೋಗ್ಲಿ ಕುಡಿದಂಗಿರಕ್ಕಾಗದಿಲವೆ?"


"ಇರತಿವಿ, ಶರಾಪು ಸುಲಭವಾಗಿ ಸಿಗೋದ್ರಿಂದ ಕುಡಿತಿವಿ. ಸಿಗಲಿಲ್ಲ ಅದ… ಸುಮ್ಮನಿರತಿವಿ. ಅದ್ಕೆ ನಾನು ಈ ಎಡೂರ, ಕುಮಾರನಿಗೆ ಚಾಲೆಂಜ್ ಮಾಡಿದ್ದು ಶರಾಪ ನಿಲ್ಸದಿದ್ರೆ ನಿಲ್ಸಿ ನೋಡನ ಅಂತವ."

"ಇವುರ ಕೈಲೆಲ್ಲಾಯ್ತದೊ?" ಎಂದ ಉಗ್ರಿ.

"ಅದು ನನಿಗೂ ಗೊತ್ತು!"

-ಬಿ. ಚಂದ್ರೇಗ…

ಚನ್ನಿಗಪ್ಪನ ರೌದ್ರಾವತಾರಕ್ಕೆ ದಳ ಶಾಸಕರು ವಲಸೆ?



ರಾಜ್ಯದ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಕಂ ತುಮಕೂರು ಜಿಲ್ಲಾ ಉಸ್ತುವಾರಿ ಮಂತ್ರಿ ಸಿ. ಚನ್ನಿಗಪ್ಪನ ರೌದ್ರಾವತಾರಕ್ಕೆ ಆತನದೇ ಜಿಲ್ಲೆಯ ಕೆಲವು ಶಾಸಕರು ಜೆಡಿಎಸ್ ಪಕ್ಷ ತೊರೆಯಲು ತುದಿಗಾಲಲ್ಲಿ ನಿಂತಿರುವುದು ಸ್ಪಷ್ಟವಾಗತೊಡಗಿದೆ.

ಜಿಲ್ಲೆ ಒಟ್ಟು 13 ವಿಧಾನಸಭಾ ಕ್ಷೇತ್ರ ಹೊಂದಿದ್ದು, ಒಂಬತ್ತು ಕ್ಷೇತ್ರಗಳಲ್ಲಿ ಜೆಡಿಎಸ್, ಎರಡು ಕ್ಷೇತ್ರಗಳಲ್ಲಿ ಬಿಜೆಪಿ, ಒಂದು ಕ್ಷೇತ್ರದಲ್ಲಿ ಸಂಯುಕ್ತ ದಳ ಮತ್ತೊಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದರೂ ಅವರೆಲ್ಲ ಆಟಕ್ಕುಂಟು ಲೆಕ್ಕಕಿಲ್ಲ, ಇಡೀ ತುಮಕೂರು ಜಿಲ್ಲೆಗೆ ಚನ್ನಿಗಪ್ಪನೇ ಸರ್ವಾಧಿಕಾರಿ!

ಜಿಲ್ಲೆಯ ಶಾಸಕರುಗಳ ಪೈಕಿ, ಸಿರಾ ಕ್ಷೇತ್ರದ ಬಿ. ಸತ್ಯನಾರಾಯಣ ಮತ್ತು ಹುಲಿಯೂರು ಕ್ಷೇತ್ರದ ಡಿ. ನಾಗರಾಜಯ್ಯ ಮಾಜಿ ಸಚಿವರು. ಈ ಮಾಜಿಗಳ ಮಾತಿಗೇ ಕವಡೆ ಕಾಸಿನ ಕಿಮ್ಮತ್ತು ನೀಡದ ಚನ್ನಿಗಪ್ಪ ಇನ್ನು ಮೊದಲ ಬಾರಿಗೆ ಶಾಸಕರಾದವರ ಗೋಳು ಕೇಳುತ್ತಾರಾ?

ಜಿಲ್ಲೆಯ ಯಾವೊಬ್ಬ ಶಾಸಕನೂ ಉಸ್ತುವಾರಿ ಸಚಿವರ ವಿರುದ್ಧ ಚಕಾರ ಎತ್ತುವಂತಿಲ್ಲ, ಎತ್ತಿದರೋ ಅಪ್ಪಾಜಿ (ಮಾಜಿ ಪ್ರಧಾನಿ ದೇವೇಗೌಡ)ಗೆ ದೂರು ನೀಡುತ್ತೇನೆಂದು ಬೆದರಿಸಿ "ಅಮ್ಮ-ಅಕ್ಕ" ಮಂತ್ರ ಉದುರಿಸುತ್ತಾನೆ ಚನ್ನಿಗಪ್ಪ. ಈ ಬಗ್ಗೆ ಪಕ್ಷದ ಹಿರಿಯರಿಗೆ ಲಿಖಿತ ಹಾಗೂ ಮೌಖಿಕ ದೂರು ನೀಡಿದರೂ ಪ್ರಯೋಜನವಿಲ್ಲ ಎಂದು ಇವರೆಲ್ಲ ಪರಿತಪಿಸುವುದು ಮಾಮೂಲಿಯಾಗಿದೆ. ಬಳ್ಳಾರಿ ಗಣಿ-ಕಪ್ಪ ಹಗರಣದ ಕುಖ್ಯಾತಿಯನ್ನೇ ಖ್ಯಾತಿ ಮಾಡಿಕೊಂಡು ತುಮಕೂರು ಎಂದರೆ ಚನ್ನಿಗಪ್ಪ, ಚನ್ನಿಗಪ್ಪ ಎಂದರೆ ತುಮಕೂರು ಎಂಬಂತಾಗಿದ್ದು, ಇದ್ದೂ ಇಲ್ಲದಂತಿರುವ ಬದಲು ಪಕ್ಷ ಬಿಡುವ ತೀರ್ಮಾನಕ್ಕೆ ಕೆಲವು ಶಾಸಕರು ಬಂದಿದ್ದಾರೆನ್ನಲಾಗಿದೆ.

ಬೆಳ್ಳಾವಿ ಕ್ಷೇತ್ರದ ಕೆ.ಎನ್. ರಾಜಣ್ಣ, ಪಾವಗಡದ ತಿಮ್ಮರಾಯಪ್ಪ, ಸಿರಾ ಕ್ಷೇತ್ರದ ಬಿ. ಸತ್ಯನಾರಾಯಣರವರು ಸಚಿವ ಸಂಪುಟ ವಿಸ್ತರಣೆ ಮತ್ತು ನಿಗಮ ಮಂಡಳಿ ನೇಮಕದವರೆಗೂ 'ಕಾದು ನೋಡು' ತತ್ವ ಅನುಸರಿಸುತ್ತಿದ್ದಾರೆ. ಆಗಲೂ ಏನೂ ದಕ್ಕದಿದ್ದರೆ ಅವರ‍್ಯಾರು ಪಕ್ಷದಲ್ಲಿ ಉಳಿಯುವ ಸಾಧ್ಯತೆ ಇಲ್ಲದಂತಾಗಿದೆ. ಇದರ ಬಗ್ಗೆ ಅವರೆಲ್ಲ ಕೆಲವೆಡೆ ನೇರವಾಗಿ ಅಸಮಾಧಾನ ತೋಡಿಕೊಳ್ಳತೊಡಗಿದ್ದಾರೆ.

ಅಭಿವೃದ್ಧಿ ಕಾಮಗಾರಿ, ವರ್ಗಾವಣೆ, ಸಭೆ ಸಮಾರಂಭ ಎಲ್ಲ ವಿಚಾರದಲ್ಲೂ ಯಾವೊಬ್ಬ ಶಾಸಕರನ್ನೂ ಪರಿಗಣಿಸದ ಚನ್ನಿಗಪ್ಪನ ವಿರುದ್ಧ ಅಸಮಾಧಾನಗೊಂಡಿರುವ ಶಾಸಕರುಗಳು ಸ್ಫೋಟಗೊಳ್ಳುವುದನ್ನೇ ಹಸಿದ ಹೆಬ್ಬುಲಿಯಂತೆ ಕಾದುಕೂತಿದ್ದಾರೆ. ಕಾಂಗ್ರೆಸ್ಸಿಗರು ಚನ್ನಿಗಪ್ಪನ ದರ್ಪದ ಮೇಲೆ ತುಮಕೂರಿನಲ್ಲಿ ಕಾಂಗ್ರೆಸ್ ಪತಾಕೆ ಹಾರಿಸುವ ಹಗಲು ಕನಸು ಕಾಣುತ್ತಿದ್ದಾರೆ!


ಪಿ. ಲಂಕೇಶ್ ಆದರ್ಶ ಶಾಲೆ ಪ್ರಶಸ್ತಿ

ಗೈಡ್ ಪತ್ರಿಕಾ ಬಳಗವು ಈ ವರ್ಷದಿಂದ ಅತ್ಯುತ್ತಮ ಸರ್ಕಾರಿ ಶಾಲೆಗಳಿಗೆ (1 ರಿಂದ 10ನೇ ತರಗತಿವರೆಗೆ) ನೀಡಲಿರುವ ಪ್ರಶಸ್ತಿ ಇದು.

20 ವರ್ಷಗಳ ಕಾಲ ಶಿಕ್ಷಕರಾಗಿದ್ದ ಪಿ. ಲಂಕೇಶ್ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಆಶಿಸಿದ್ದರು. ಈ ನಾಡಿನ ಖ್ಯಾತ ಪತ್ರಕರ್ತರಾಗಿ ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸುವ ಬಗ್ಗೆ, ಉತ್ತಮ ವಾತಾವರಣ, ಶಿಕ್ಷಕ-ವಿದ್ಯಾರ್ಥಿಗಳ ನಡುವಿನ ಕಲಿಕೆ ರಚನಾತ್ಮಕ-ಒಡನಾಟಗಳ ಬಗ್ಗೆ ಕಾಳಜಿ ತೋರಿದ್ದರು.


'ಗೈಡ್'ನ ಕಾಳಜಿಗಳೂ ಇದೇನೆ.

ಈಗ ನೀವು ಮಾಡಬೇಕಿರುವುದು ಇಷ್ಟೆ. ನೀವು ಕಂಡಿರುವ ಇಂತಹ ಅತ್ಯುತ್ತಮ ಸರ್ಕಾರಿ ಶಾಲೆಯ ಬಗ್ಗೆ ನಮಗೆ ವಿವರಗಳ ಸಮೇತ ಬರೆದು ಫೋಟೋದೊಂದಿಗೆ ಕಳುಹಿಸಿ. ಶಿಕ್ಷಣ ತಜ್ಞರಿರುವ ತೀರ್ಪುಗಾರರು ಈ ವರ್ಷದ 'ಆದರ್ಶ ಸರ್ಕಾರಿ ಶಾಲೆ'ಯನ್ನು ಆರಿಸುತ್ತಾರೆ. ಬರುವ ಮಾರ್ಚ್ 8 ರಂದು ಬೆಂಗಳೂರಿನಲ್ಲಿ ನಡೆಯಲಿರುವ 'ಲಂಕೇಶ್' ಹಾಗೂ 'ಗೈಡ್' ಪತ್ರಿಕೆಯ ವಾರ್ಷಿಕೋತ್ಸವದಲ್ಲಿ ಆದರ್ಶ ಶಾಲೆಯ ಮುಖ್ಯಸ್ಥರನ್ನು ಸನ್ಮಾನಿಸಿ "ಪಿ. ಲಂಕೇಶ್ ಆದರ್ಶ ಶಾಲೆ ಪ್ರಶಸ್ತಿ" ನೀಡಲಾಗುವುದು.



ಆದರ್ಶ ಶಾಲೆಯ ಬಗ್ಗೆ ನಮ್ಮ ಓದುಗರು, ಅದೇ ಶಾಲೆಯ ವಿದ್ಯಾರ್ಥಿಗಳು, ಸ್ವತಃ ಶಿಕ್ಷಕರೂ ಬರೆದು ತಿಳಿಸಬಹುದು. ನಿಮ್ಮ ಬರಹ ನಮಗೆ ಫೆಬ್ರವರಿ 15 ರೊಳಗೆ ತಲುಪಲೇಬೇಕು.

ಮುಂದಿನ 'ಗೈಡ್' ಸಂಚಿಕೆಯಲ್ಲಿ ವಿಜೇತರ ವಿವರ ಪ್ರಕಟಿಸಲಾಗುವುದು.



ಅಕ್ಟೋಬರ್ 2, 1988

ತುಂಬ ಚುರುಕಾಗಿ ಓಡಾಡುತ್ತಿದ್ದೆ; ಎಲ್ಲರೊಂದಿಗೆ ಕೆಲಸ ಮಾಡುತ್ತಿದ್ದೆ ...ಮಿಷ ಕೂಡ ಪುರುಸೊತ್ತಿರಲಿಲ್ಲ. ಎಲ್ಲ ಸರಿಯಾಗಿದ್ದಂತಿತ್ತು. ಸರಿಯಾಗಿದೆಯೋ ...ದೆಯೋ ಎಂದು ಯೋಚಿಸಲೂ ಕೂಡ ಆಗಿರಲಿಲ್ಲ. ಇಷ್ಟಾದರೂ ಆಳದಲ್ಲಿ ...ಮಾರಿತನ ಇತ್ತು. ಮಾಡಬೇಕಾದ್ದನ್ನು ಮನಸ್ಸು ಮೂಲೆಗೆ ತಳ್ಳಿತ್ತು. ನಮ್ಮ ...ನೆಯ ಹತ್ತಿರದ ಹಳ್ಳಿಯೊಂದರಲ್ಲಿ ಬೀದಿ ದೀಪ ಇಲ್ಲದೆ ಹದಿನೈದು ದಿನವಾಗಿತ್ತು. ...ಗರು ಈ ಬಗ್ಗೆ ಮೊರೆ ಇಟ್ಟಿದ್ದರು. ಇವತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ...ಳಬೇಕೆಂದು ಎರಡು ದಿನ ನಿರ್ಧರಿಸಿದ್ದರೂ ಹೇಳಲಾಗಿರಲಿಲ್ಲ. ಮೂರನೆ ...ನ ಆ ಹಳ್ಳಿಯವರೇ ದೀಪ ಸರಿಮಾಡಿಸಿಕೊಳ್ಳಲು ಓಡಾಡುತ್ತಿರುವುದನ್ನು ...ನೋಡಿ ಕ್ಷಮೆ ಕೇಳಿದೆ; ದೀಪ ಬರುವಂತೆ ಪ್ರಯತ್ನಿಸಿದೆ.

SLOTH

...ಸ್ತರು ಇದನ್ನ SLOTH ಅನ್ನುತ್ತಾರೆ. ಅದನ್ನು ಸೋಮಾರಿತನ, ಜಡತೆ, ...ಗ್ಗತನ ಎಂದು ...ಳಬಹುದು; ಆದರೆ ಇದಕ್ಕೆ ...ನ್ನೂ ಹೆಚ್ಚಿನ ಅರ್ಥವಿದೆ. ...ರ್ಲಕ್ಷ್ಯ, ಅನೀತಿವಂತ, ಅಲಿಪ್ತತೆ, ...ಂಡತನವನ್ನೆಲ್ಲ ಈ ಮಾತು ...ಗೊಳ್ಳುತ್ತದೆ. ನೀವು ...ರಸೊತ್ತಿಲ್ಲದೆ ಕೆಲಸ ಮಾಡು...ತ್ತಿದ್ದರೂ ...ಳಗೆ ...ರ್ಥಿಯೂ, ...ಚನೂ ...ಗಿರ ...ಬಹುದು; ...ಮಾನವೀಯ ...ಯೆಗಳಲ್ಲಿ ...ತೊಡಗಿರ ...ಬಹುದು. ...ಆದ್ದರಿಂದಲೇ ...ಇದು ದ್ವಂದ್ವದ ...ಸ್ಥಿತಿ. ...ಜಡ್ಡುಗಟ್ಟಿದ ...ಸ್ಥಿತಿ. ಈ ...ಮನಃಸ್ಥಿತಿ...




...ಯಿಂದಾಗಿಯೇ ಏನನ್ನೂ ಮಾಡದ, ಸೃಷ್ಟಿಸದ, ಕಣ್ಣೆದುರು ಕೊಳಕು ಬೀಳುತ್ತಿದ್ದರೂ ಸುಮ್ಮನಿರುವ, ಕಣ್ಣೆದುರು ಅನ್ಯಾಯ, ಅನಾಚಾರ ನಡೆಯುತ್ತಿದ್ದರೂ ಸಹಿಸುವ ಗುಣ ಬೆಳೆಯುತ್ತದೆ. ವ್ಯಕ್ತಿತ್ವವನ್ನು ...ಚ್ಚರದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದೇ slothನಿಂದ ದೂರವಾಗುವ ಮಾರ್ಗ.

ಏಳು ಮಹಾಪಾತಕಗಳಾದ ಅಹಂಕಾರ, ದುರಾಶೆ, ಹೊಟ್ಟೆಬಾಕತನ ಮುಂತಾದವುಗಳಲ್ಲಿ ಸೋಮಾರಿತನ ಅಥವಾ ಸ್ಲಾತ್ ಅತ್ಯಂತ ಕೆಟ್ಟ ಪಾತಕ. ಸ್ಲಾತ್ ಎಂಬುದು ಒಂದು ಕಟ್ಟಾ ಶೋಂಭೇರಿಯಾದ ಪ್ರಾಣಿ ಕೂಡ. ಅಮೆರಿಕಾದ ಮರಗಳಲ್ಲಿ ಕೂತಲ್ಲೇ ಕೂತಿರುವ, ಕುರೂಪದ ಮುಖವುಳ್ಳ, ಕೊಂಬೆಯ ಮೇಲೆ ಪಾಚಿ ಬೆಳೆಯುವುದನ್ನೆ ಕಾದಿದ್ದು ಅದನ್ನು ತಿನ್ನುವ, ಹಸಿರುಬಣ್ಣದೊಂದಿಗೆ ತನ್ನ ದೇಹದ ಹಸಿರು ಬಣ್ಣ ಸಮ್ಮಿಳನಗೊಳಿಸಿ ಯಾರಿಗೂ ಕಾಣಿಸದಂತಿರುವ ನಿರ್ಲಕ್ಷ್ಯವೇ ಮೂರ್ತಿವೆತ್ತಂತಹ ಪ್ರಾಣಿ ಇದು. ಅದರಂತಿರುವ ಮನುಷ್ಯ ಆತ್ಮ ಮತ್ತು ದೇಹವೆರಡರಲ್ಲೂ ಆ ಪ್ರಾಣಿಗಿಂತ ಹೆಚ್ಚು ಕುರೂಪಿಯೂ ಕ್ಷುದ್ರನೂ ಆಗಿರುತ್ತಾನೆ.

ಬಂಡಾಯ, ಡಂಬಾಯ

ಈ ಸಲ ಹತ್ತು ಊರುಗಳಿಗೆ ಹೋದೆ. ಚಿಕ್ಕಬಾಣಾವರ, ಚೆನ್ನಗಿರಿ, ಸಲ್ಲಾಪುರ ಮುಂತಾದ ಊರುಗಳು; ಅವುಗಳಲ್ಲಿ ಒಂದರಲ್ಲಿ ಮಾತ್ರ ರಾಜಕೀಯವಲ್ಲದ ಭಾಷಣ ಮಾಡಬೇಕಾಯಿತು. ಅದು ಚಳ್ಳಕೆರೆಯಲ್ಲಿ, ಬಂಡಾಯ ಸಾಹಿತ್ಯದ ವಿಚಾರ ಸಂಕಿರಣವೊಂದರ ಉದ್ಘಾಟನೆ. ಚಳ್ಳಕೆರೆ ಎಂಬ ಊರಿನ ಬಗ್ಗೆ ನೀವು ಕೇಳಿರಬಹುದು; ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗ ಬಿಟ್ಟರೆ ತೀವ್ರವಾಗಿ ವ್ಯಾಪಾರದ, ಹಣದ ಝಣಝಣ ಕಿವಿಗಡಚಿಕ್ಕುವ ಊರು. ಈರುಳ್ಳಿ, ಮೆಣಸಿನಕಾಯಿ, ಹತ್ತಿ, ಶೇಂಗಾದ ಕೊಡುಕೊಳ್ಳುವ ಸ್ಥಳ. ಅಲ್ಲಿ ಬಂಡಾಯ ಸಾಹಿತ್ಯದ ಸಮಾವೇಶ. ನಾನು ನೆನೆಸಿಕೊಳ್ಳಬೇಕಾಯಿತು. ಬಂಡಾಯ ಸಾಹಿತ್ಯ ಹುಟ್ಟಿದ್ದು ಅನೇಕ ವರ್ಷಗಳ ಹಿಂದೆ–ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳ ವಿರುದ್ಧ, ಧರ್ಮಸ್ಥಳದ ಸಾಹಿತ್ಯ ಸಮ್ಮೇಳನ ನಡೆದಾಗ ಬೆಂಗಳೂರಲ್ಲಿ ತರುಣ ಲೇಖಕರು ಕೆಲವರು ಜಿಡ್ಡುಗಟ್ಟಿದ್ದ ಪರಿಷತ್ ಸಾಹಿತ್ಯದ ವಿರುದ್ಧ ಅಂಥ ಸಾಹಿತ್ಯ ರಚಿಸುವವರ ವಿರುದ್ಧ ಪರಿಷತ್ತಿನ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿಷ್ಠೆಯ ನಿರ್ಜೀವ ಜನರ ವಿರುದ್ಧ ಒಂದು ಸಮ್ಮೇಳನ ನಡೆಸಿದರು.




ತಮಾಷೆಯೆಂದರೆ, ಈ ವಿಚಾರ ನನಗೆ ಸಕಾಲದಲ್ಲಿ ತಲುಪದೆ ನಾನು ಧರ್ಮಸ್ಥಳದ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಬಂಡಾಯ ಸಾಹಿತ್ಯದ ಗುರಿ ನನಗೂ ಗೊತ್ತಿತ್ತು, ಇದು ಕರ್ಕೆಗಾರ್ಡ್ ಧರ್ಮದ ಬಗ್ಗೆ ಹೇಳಿದಂತೆ. 'ಚರ್ಚ್‌ನಲ್ಲಿ ಧರ್ಮವಿರುವುದು ಕಷ್ಟ; ಎಲ್ಲ ಧರ್ಮವೂ ಮನುಷ್ಯನ ಆಳದಲ್ಲಿ ಮೂಡಬೇಕು,' ಹಾಗೆಯೇ ಸಾಹಿತ್ಯ ಕೂಡ. ದೊಡ್ಡ ಭವನಗಳಲ್ಲಿ ಸಾಹಿತ್ಯ ಸ್ಫೂರ್ತಿ ಕಳೆದುಕೊಂಡಿರುತ್ತದೆ. ಸಾಮಾಜಿಕ ಮನ್ನಣೆ ಹೆಚ್ಚಾದಂತೆಲ್ಲ ಅದು ಊದಿಕೊಂಡು ಸತ್ತು ಹೋಗುತ್ತದೆ. ಹಾಗೆಯೇ ಸಾಹಿತ್ಯ ಛಂದಸ್ಸಿನ ಪಂಜರದಲ್ಲಿರಲಾರದು, ಕೇವಲ ಸುಂದರ ವಾಕ್ಯಗಳಲ್ಲಿ ಉಸಿರಾಡಲಾರದು. ಅದು ಸಿಟ್ಟಿನಿಂದ, ಪ್ರತಿಭಟನೆಯಿಂದ, ಸದ್ಯದ ಸ್ಥಿತಿಯನ್ನು ತಿರಸ್ಕರಿಸಿ ಹೊಸಜೀವ ಉಕ್ಕಿಸುವುದರಿಂದ ರೂಪುಗೊಳ್ಳುತ್ತದೆ.

ಇನ್ನೊಂದು ವಿಚಿತ್ರವೆಂದರೆ, ಬಂಡಾಯ ಸಾಹಿತ್ಯದ ಗುಂಪು ರೂಪುಗೊಳ್ಳುವ ಸಮಯದಲ್ಲಿ ನಾನು ಪರಿಷತ್ತಿನ ಸಮ್ಮೇಳನದಲ್ಲಿದ್ದಂತೆಯೇ ಈ ಬಂಡಾಯ ಸಾಹಿತ್ಯವನ್ನು ಆಗಾಗ ಡಂಬಾಯ ಸಾಹಿತ್ಯ ಎಂದು ತಮಾಷೆ ಮಾಡಿದ್ದೆ. ಒಮ್ಮೆ ಗುಂಡೂರಾವ್, "ಅದೇನ್ರೀ ಆ ಡಂಬಾಯ ಸಾಹಿತ್ಯ? ಅದನ್ನು ನಾವು ಪ್ರೋತ್ಸಾಹಿಸಬೇಕಲ್ಲ?" ಎಂದು ಕೇಳಿದ್ದರೆಂದು ಚುಡಾಯಿಸಿದ್ದೆ. ಇದಕ್ಕೆ ಕಾರಣ ಈ ಬಂಡಾಯ ಸಾಹಿತಿಗಳ ಉಗ್ರ ಮುಖಗಳು, ನನ್ನಲ್ಲಿ ನಗೆ ತರಿಸುತ್ತಿದ್ದ ಭೀಕರ ಹೋರಾಟದ ವರಸೆ; ಅಲ್ಲದೆ ಈ ಅಮಾಯಕ ಉಗ್ರ ಹುಡುಗರಿಗೆ ವಿನೋದ, ತಮಾಷೆ ಅರ್ಜೆಂಟಾಗಿ ಬೇಕಾಗಿದೆಯೆಂಬ ನನ್ನ ನಂಬಿಕೆ. ಇಂಥ ಅನೇಕ "ಕ್ರಾಂತಿಕಾರಿ" ಚಳವಳಿ ಬಲ್ಲ ನನಗೆ ಈ ಬಂಡಾಯ ಸಾಹಿತ್ಯದ ಯಶಸ್ಸು, ಸೋಲು, ಎಡಹುವಿಕೆ ಎಲ್ಲ ಗೊತ್ತಿತ್ತು. ಬಂಡಾಯ ಸಾಹಿತ್ಯದಲ್ಲಿ ಕೆಲವರು ಸಾಹಿತಿಗಳು ಮಾತ್ರ ಉಳಿದರು. ಹತಾಶರಾದ ಕೆಲವರು ಎರಡೂ ಕ್ಯಾಂಪಿನಲ್ಲಿ ಸಂಚರಿಸತೊಡಗಿದರು. ಒಮ್ಮೆ ಈ ಬಂಡಾಯ ಹಂಪನಾ ಎಂಬ 'ಸಾಹಿತಿ'ಯನ್ನು ಬೆಂಬಲಿಸುವ ಘಟ್ಟ ಕೂಡ ತಲುಪಿತು. ಬಂಡಾಯ ಎಂಬುದು ಡಂಬಾಯ ಕೂಡ ಆಗಾಗ ಆಗುತ್ತಿತ್ತು.

ಇಷ್ಟಾದರೂ ಬಂಡಾಯ ಅಗತ್ಯ. ಸಾಹಿತಿಯ ಆತ್ಮದ ಆರೋಗ್ಯಕ್ಕೆ ಅಗತ್ಯ. ತಾನು ಸುಲಭವಾಗಿ ಹೊಂದಿಕೊಳ್ಳಲಾರದ ಸಜೀವ ವಸ್ತು ಎಂದು ನೆನಪಿಸಿಕೊಳ್ಳಲು, ಎಲ್ಲರ ನಡುವೆ ಇದ್ದೂ ತನ್ನ ವೈಶಿಷ್ಟ್ಯ ಕಾಪಾಡಿಕೊಳ್ಳಲು ಅಗತ್ಯ. ಮುಖ್ಯವಾಗಿ, ತನ್ನ ಉಂಡುಟ್ಟು ಎಲ್ಲರೊಂದಿಗೆ ಓಡಾಡುವ ಸಂಘಜೀವದ ವಿರುದ್ಧ ತನ್ನಲ್ಲೇ ಅತೃಪ್ತಿ ಮತ್ತು ಹೋರಾಟ ಕಾಪಾಡಿಕೊಳ್ಳಲು ಅಗತ್ಯ. ■

ಹುಡುಗಿಯರು ನಿರಂತರ 'Sweet Sixteen' ಇರುವ ಹಾಗಿದ್ದರೆ?



...ಪುಷ್ಪಲತಾ. ಬೆಂಗಳೂರು
ಶಿಲ್ಪಾಶೆಟ್ಟಿಗೆ ಅವಮಾನ ಮಾಡಿದ್ದಾರಲ್ಲಾ?
* ಎಂಜಲು ಕಾಸಿನಾಸೆಗೆ ಆಕೆನೂ ಹೋಗಿದ್ದಾಳಲ್ಲ.

ಕುಮಾರಸ್ವಾಮಿ. ಕನಕಪುರ
'ಹಾಮಿಡಿ ಟೈಮ್' ಗಣೇಶ ಕೂಡಾ ಹೀರೋ ಆದನಲ್ಲಾ?
* ವಿಷ್ಣು ಉಪೇಂದ್ರರ 'ಟ್ರಾಜಿಡಿ' ಮುಖ ನೋಡಿ ಜನ ಬೇಸತ್ತಿದ್ದರಂತೆ.

ವಿಜಯಕುಮಾರ್. ಬೆಂಗಳೂರು
ಏನಿದು ಬೆಳಗಾವಿ ವಿಶ್ವಕನ್ನಡ ಸಮ್ಮೇಳನ?
* 'ಕೋ-ಜಾ'ಗಳ ಚಪ್ಪಾಳೆ!

ಎ.ಎಂ. ಶ್ವೇತಾ. ದಾವಣಗೆರೆ
ಸೇದೆ ಮನೆಯಲ್ಲಿ ಕಳುವಾದರೆ ಯಾರಿಗೆ ದೂರು ಕೊಡಬೇಕು?
* ಪೆದ್ದಿ ಅಷ್ಟೂ ಗೊತ್ತಾಗಲ್ವಾ. ರೋಲ್‌ಕಾಲ್ ಕೊಡೋ ಖದೀಮರಿಗೆ.

ಕಾಳೀಹುಂಡಿ ಶಿವಕುಮಾರ್. ಮೈಸೂರು
ಕಟ್ಟಾಗಿದವರು ಬಹು ಬೇಗ ಒಂದಾಗುತ್ತಾರೇಕೆ?
* ಹಾಗಾದರೆ ರೇವಣ್ಣ, ಕುಮಾರಸ್ವಾಮಿ ಒಂದಾಗಿದ್ದಾರೆ ಅಂತೀರಾ?

ದಿ.ವೆಂಕಟೇಶ್. ದೇವದುರ್ಗ
ನೇರ ಪ್ರಸಾರ ಮಾಡಿದ್ದಕ್ಕೆ ಮಲ್ಲಿಕಾ ಶೆರಾವತ್ ನೃತ್ಯ ಕಾರ್ಯಕ್ರಮ ಅರ್ಧಕ್ಕೆ ನಿಲ್ಲಿಸಿದಳಂತೆ?
* 'ನೇರ' ಅಲ್ಲ 'ಸೊಟ್ಟಗೆ' ಕುಣಿಯುವುದು ಜಾಸ್ತಿ ಅದಕ್ಕೆ.

ದಿ.ಎಲ್. ಸುರೇಶ್. ಹರಪನಹಳ್ಳಿ
ನಾಯಿಗಳ ಉಪಟಳಕ್ಕೆ ಕಡಿವಾಣವಿಲ್ಲವೆ?
* ನಾಯಿ ಪ್ರಿಯರಾದ ನಮ್ಮ ರಾ. ಸೋಮನಾಥ್ ಮತ್ತು 'ನಾಯಿ'ರಾಜ ಇದೆಲ್ಲಕ್ಕೆ ಜನಾನೇ ಕಾರಣ ಅಂತಿದ್ದಾರೆ ಏನು ಮಾಡೋಣ?

ಎಚ್.ಸಿ. ಭಾಗ್ಯಕುಮಾರ್. ಬೆಂಗಳೂರು
ಸಂಸದರೇ ಪ್ರಶ್ನೆ ಕೇಳಲು ಲಂಚ ಪಡೆಯುವಾಗ ನಾವೇಕೆ ನಿಮ್ಮಿಂದ ಪಡೆಯಬಾರದು?
* ಪ್ರಶ್ನೆ ಮಾತ್ರವಲ್ಲ, ನಾವು ಉತ್ತರಕ್ಕೂ ಬಹುಮಾನ ಕೊಡ್ತೀವಿ ಗೊತ್ತಾ?

ಎಂ.ಶ್ರೀಧರ ಮಿರ್ಜಾನ. ಕುಮಟಾ
ಪ್ರತಿಯೊಂದು ಪತ್ರಿಕೆಯೂ 'ತನ್ನದೇ ಅತ್ಯಧಿಕ ಪ್ರಸಾರದ ಪತ್ರಿಕೆ' ಎಂದು ಹೇಳಿಕೊಳ್ಳುವುದಲ್ಲಾ?
* ಸಂಕೇಶ್ವರ ಹೀಗೆ ನಂಬಿಸಿಯೇ ಟೈಮ್ಸ್ ಮಾರ್ವಾಡಿಗಳಿಗೆ ಟೋಪಿ ಹೊಲಿದದ್ದು.

ದಿ.ಎಲ್.ಚಂದ್ರಿಕಾ. ಹರಪನಹಳ್ಳಿ
ಸಾವಯವ ಓ.ಕೆ., ಸಾರಾಯಿ ಏಕೆ?
* ಸಾವಯವ ಸಾರಾಯಿ (ನೀರಾ) ಇದೆ ಜೋಕೆ!

ಮಂಚಾಲಿ ಗುರುರಾಜಾಚಾರು. ಬಳ್ಳಾರಿ
ವರ ಕೊಡುವ ಹಕ್ಕು ದೇವರಿಗೆ ಇದ್ದ ಹಾಗೆ ಈಗಿನ ಮಂತ್ರಿಗಳಿಗೂ ಇದ್ದಿದ್ದರೆ?
* ದೇವರು (ಮಂತ್ರಿ) ವರ ಕೊಟ್ಟರೂ ಪೂಜಾರಿ (ದೇವೇಗೌಡ) ಕೊಡುತ್ತಿರಲಿಲ್ಲರ್ರಿ.

ಪಿ.ಎನ್. ಶ್ರೀವತ್ಸ. ಬೆಂಗಳೂರು
ಶೋಭಾ ಕರಂದ್ಲಾಜೆ ನಟಿ ಜಯಮಾಲಾಳನ್ನು ತೆಗಳುವ ಮಟ್ಟಕ್ಕೆ ಬಂದುಬಿಟ್ಟಳಲ್ಲಾ?
* ಹರಿ-ಹರನಿಗೆ ಹುಟ್ಟಿದ ಅಯ್ಯಪ್ಪನಿಗೂ, ಕೋ-ಜಾಗಳ ಕೃಪಾಕಟಾಕ್ಷ ಪಡೆದಿರುರ ಶೋಭಾಗೂ ಇರುವ ನಂಟು ಏನೆಂದು ಗೊತ್ತಾಯಿತಾ ಈಗ.

ಶಿವಕುಮಾರ್. ಶೋರಾಪೂರ
ಪ್ರೀತಿಯ ಅಡಿಪಾಯ ಯಾವುದು?
* ಭ್ರಾಂತಿ.

ಕೆ.ಶ್ರೀನಿವಾಸ್. ಮಂಡ್ಯ
ಹನಿಮೂನ್‌ಗೆ ಯಾವ ಋತು ಚೆಂದ?
* ರಣಬೇಸಿಗೆಯಲ್ಲೂ ಚಿಗುರುವ ಪ್ರೇಮ-ಕಾಮಕ್ಕೆ ಋತು ಯಾವ ಲೆಕ್ಕ.

ಎಂ. ಶಿವಕುಮಾರ್. ಕುಮಟಾ
ಹುಡುಗಿಯರು ನಿರಂತರ "Sweet Sixteen" ಇರುವ ಹಾಗಿದ್ದರೆ?
* ಛೇ, ಸೆಕ್ಸಿ ಸೆವೆಂಟೀನ್ ಬರ್‍ತಾನೆ ಇರ್‍ತಿರಲಿಲ್ಲ.

ಬಹುಮಾನಿತ ಪ್ರಶ್ನೆ

ಥೀ ತುಂಟಿ!

ಬರೀ ರೇಪ್ ಸೀನ್‌ಗಳಲ್ಲೇ ಕಾಣಿಸಿಕೊಂಡು ಖ್ಯಾತಿ ಪಡೆದಿದ್ದ ನಟಿಯೊಬ್ಬಳನ್ನು ಭೇಟಿ ಮಾಡಿದ ಪತ್ರಕರ್ತರು, ಯಥಾ ಪ್ರಕಾರ ತಲೆಗೊಂದು ಪ್ರಶ್ನೆ ಕೇಳಿ ಮಜಾ ತೆಗೆದುಕೊಳ್ಳುತ್ತಿದ್ದರು.

ಅದರಲ್ಲೊಬ್ಬ "ಈವರೆಗೆ ನೂರಾರು ಸಲ ರೇಪ್ ಸೀನ್‌ನಲ್ಲಿ ಭಾಗವಹಿಸಿದ್ದೀರಲ್ಲ... ನಿಮ್ಮ ಅನುಭವದಲ್ಲಿ ಅದು ಹೇಗನ್ನಿಸುತ್ತೆ?" ಎಂದು ಕೇಳಿದ.

ಪ್ರಶ್ನೆಗೆ ಕಿರುನಗೆ ಬೀರುತ್ತಲೇ ನಟಿ ನುಲಿದಳು: "ನನ್ನ ಹತ್ರ ಇನ್ನೂ ಬೇಕಾದಷ್ಟು ಮಾನ ಸ್ಟಾಕ್ ಇದೆ ಅನ್ನಿಸುತ್ತೆ!"




ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಇಂಗ್ಲಿಷ್ ಬಾರದವರು ನಕ್ಸಲೈಟ್ ಆಗ್ತಾರಂತೆ?

ಜನವರಿ 17ರ ಸಂಚಿಕೆಯ ನಮ್ಮ ಪ್ರಶ್ನೆ: ನಾರಾಯಣ ಮೂರ್ತಿಯವರ ಪ್ರಕಾರ ದೇಶಭಕ್ತಿ ಎಂದರೇನು?
ನಿಮ್ಮ ಉತ್ತರ: ದೇಶ ಅಂದ್ರೆ ರೈತರ ಜಮೀನು, ಭಕ್ತಿ ಅಂದ್ರೆ ಗಾಂಧಿ ನೋಟು.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ.ಹಾಲಸ್ವಾಮಿ. ಬೆಂಗಳೂರು

ಗೋಲ್ವಾಲ್ಕರ್‌ನ ದ್ರೋಹ ಚಿಂತನೆಯ ಮುಳ್ಳಿನ ಗೊಂಚಲು!



ಈಗ ದೇಶದೆಲ್ಲೆಡೆ ಸಂಘಪರಿವಾರದ ಎರಡನೇ ಸರಸಂಘಚಾಲಕ ಗೋಲ್ವಾಲ್ಕರ್‌ನ ಜನ್ಮ ಶತಮಾನೋತ್ಸವ ವನ್ನು ಆಚರಿಸುವ ಹೆಸರಲ್ಲಿ ಸಾಮರಸ್ಯದ ಬದುಕಿಗೆ ವಿಷಬೀಜ ಬಿತ್ತುವ 'ಹಿಂದೂ ಸಮಾಜೋತ್ಸವ'ವನ್ನು ಆಚರಿಸಲಾಗುತ್ತಿದೆ. ಒಂದು ಕಡೆ ಇದನ್ನು 'ವಿರಾಟ್ ಹಿಂದೂ ಸಮಾವೇಶ'ವೆಂದು ಕರೆದರೆ ಮತ್ತೊಂದು ಕಡೆ ಇದನ್ನು 'ವಿಶಾಲ ಹಿಂದೂ ಸಮಾವೇಶ'ವೆಂದು ಕರೆಯಲಾಗುತ್ತಿದೆ. ಅವುಗಳನ್ನು ಯಾವುದೇ ಹೆಸರಲ್ಲಿ ಕರೆದರೂ ಅದರ ಮೂಲ ಉದ್ದೇಶವಾಗಿರುವ ಪರಮತ ದ್ವೇಷ ಮತ್ತು ಹಿಂದೂ ಎಂದು ಕರೆಸಿಕೊಳ್ಳಲ್ಪಡುವ ಜನರ ಮೇಲೆ ಸಂಘಪರಿವಾರದ ದ್ವೇಷದ ಚಿಂತನೆಯ ಹೇರಿಕೆಯ ಹುನ್ನಾರಗಳು ಪ್ರತಿ ಬ್ಯಾನರ್ ಹಾಗೂ ಬಂಟಿಂಗ್‌ಗಳಲ್ಲಿ ಎದ್ದು ಕಾಣುತ್ತಿದೆ.

ಆದರೆ ವಿಶಾಲ ಹಿಂದೂ ಸಮಾವೇಶದ ಹೆಸರಲ್ಲಿ ತಮ್ಮ ಜೀವಿತಾವಧಿಯುದ್ದಕ್ಕೂ ಸಂಘಪರಿವಾರದ ಚಿಂತನಾ ಧಾರೆಯನ್ನು ವಿರೋಧಿಸುತ್ತಾ, ಸಮಾನತೆಯನ್ನು ಆಧರಿಸಿದ ಸಾಮರಸ್ಯದ ಬದುಕು ಮತ್ತು ಸಮಾಜಕ್ಕಾಗಿ ಹೋರಾಡುತ್ತಾ ಬಂದ ಮಹಾನ್ ಮಾನವತಾವಾದಿಗಳ ಭಾವಚಿತ್ರಗಳನ್ನು ಬಳಸಿಕೊಂಡು ಶೋಷಿತ ಜನರಿಗೆ ದ್ರೋಹ ಬಗೆಯುತ್ತಿದ್ದಾರೆ. ಬಾಬಾಸಾಹೇಬ್ ಅಂಬೇಡ್ಕರ್, ಭಗತ್ ಸಿಂಗ್, ಆಜಾದ್, ಬುದ್ಧ, ವಿವೇಕಾನಂದ ಮತ್ತು ಬಸವಣ್ಣನವರ ಭಾವಚಿತ್ರ ಗಳನ್ನು ತಮ್ಮ ಪ್ರಚಾರ ಸಾಮಗ್ರಿಗಳಲ್ಲಿ ಬಳಸಿಕೊಂಡು, ಅವರುಗಳು ಸಹಾ ಸಂಘಪರಿವಾರದ ಚಿಂತನೆಯನ್ನೇ ಹೊಂದಿದ್ದರು ಎಂಬ ಭಾವನೆ ಬರುವಂತೆ ಇತಿಹಾಸದ ವಿಕೃತಿ ನಡೆಸಿದ್ದಾರೆ.

ಹಿಂದೂ ಧರ್ಮದಲ್ಲಿನ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದ, ಕೊನೆಗೆ ಹಿಂದೂ ಧರ್ಮದಿಂದ ಹೊರಹೋಗಿ ಸಮಾನತೆಯನ್ನು ಆಧರಿಸಿದ ಪ್ರತ್ಯೇಕ ಧರ್ಮಗಳನ್ನೇ ಸ್ಥಾಪಿಸಿದ್ದರು ಬುದ್ಧ ಮತ್ತು ಬಸವಣ್ಣ. ಹಾಗೆಯೇ 'ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಎಂದಿಗೂ ಹಿಂದೂವಾಗಿ ಸಾಯಲಾರೆ' ಎಂದು ಬೌದ್ಧ ಧರ್ಮ ಸೇರಿದ, ಹಿಂದೂ ಧರ್ಮದ ಚೌಕಟ್ಟು ಮುರಿಯದೇ ಜಾತಿ ನಾಶವಾಗುವುದಿಲ್ಲ ಎಂದು ಸ್ಪಷ್ಟವಾಗಿ ಘೋಷಿಸಿದ್ದರು ಶೋಷಿತ ಜನತೆಯ ಮಹಾನ್ ನಾಯಕ ಬಾಬಾ ಸಾಹೇಬ್ ಅಂಬೇಡ್ಕರ್. ಹಿಂದೂ ಧರ್ಮದೊಳಗಿನ ಪುರೋಹಿತಶಾಹಿಯನ್ನು ಜೀವನಾದ್ಯಂತ ವಿರೋಧಿಸಿ ಕೊಂಡೇ ಬಂದಿದ್ದರು ವಿವೇಕಾನಂದ.

ಇವರೆಲ್ಲರನ್ನು ಸಂಘಪರಿವಾರದ ಪ್ರತಿಪಾದಕರೆಂಬಂತೆ ಹಿಂದೂ ಸಮಾಜೋತ್ಸವದ ಪ್ರಚಾರಗಳಲ್ಲಿ ಬಳಸಿಕೊಂಡು ಈ ಮಹಾನ್ ಚೇತನಗಳಿಗೆ ಮತ್ತು ಅವರು ಪ್ರತಿಪಾದಿಸಿದ ಮಾನವೀಯ ಮೌಲ್ಯಗಳಿಗೆ ದ್ರೋಹ ಬಗೆಯಲಾಗುತ್ತಿದೆ.

ಅದೇರೀತಿ ತಮ್ಮ ಇತಿಹಾಸದಲ್ಲೇ ಎಂದಿಗೂ ಬ್ರಿಟಿಷರ ವಿರುದ್ಧ ಮಾತಾಡದ, ಸ್ವಾತಂತ್ರ್ಯ ಹೋರಾಟದಲ್ಲಿ ಎಂದಿಗೂ ಭಾಗವಹಿಸದ ಈ ಸಂಘಪರಿವಾರ ಮತ್ತು ಅವರ ನಾಯಕ ಗೋಲ್ವಾಲ್ಕರ್ ಅನುಯಾಯಿಗಳು, ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸಿ, ಈ ದೇಶಕ್ಕೆ ರಾಜಕೀಯ ಮತ್ತು ಆರ್ಥಿಕ ವಿಮೋಚನೆ ಪಡೆದುಕೊಳ್ಳಲು ಹೋರಾಡಿ ಪ್ರಾಣವನ್ನೇ ತೊರೆದ ಭಗತ್ ಸಿಂಗ್ ಮತ್ತು ಆಜಾದ್‌ಗಳಿಗೂ ಈಗ ಜನಿವಾರ ತೊಡಿಸಿ ಸಂಘಪರಿ ವಾರದ ವಕ್ತಾರರನ್ನಾಗಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ವಾಸ್ತವವಾಗಿ ಇವರ ನಾಯಕ ಗೋಲ್ವಾಲ್ಕರ್ ತನ್ನ ಜೀವನದುದ್ದಕ್ಕೂ ತಮ್ಮ ಸಮಕಾಲೀನರೇ ಆಗಿದ್ದ ಅಂಬೇಡ್ಕರ್, ಭಗತ್ ಸಿಂಗ್‌ರನ್ನು ,ಅವರ ಚಿಂತನಾಧಾರೆ ಗಳನ್ನು ವಿರೋಧಿಸಿಕೊಂಡೆ ಬಂದವರು. ಈಗ ಹಿಂದೂ ಸಮಾಜೋತ್ಸವದ ಹೆಸರಲ್ಲಿ ಅವರೆಲ್ಲರನ್ನೂ ಸಂಘಪರಿ ವಾರದ ವಕ್ತಾರರನ್ನಾಗಿಸಿಕೊಂಡು ಅವರನ್ನು ಮತ್ತೊಮ್ಮೆ ಕೊಲ್ಲುವ ಪ್ರಯತ್ನ ನಡೆಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಂಘಪರಿವಾರದ ಈ ಬೌದ್ಧಿಕ ಪಿತಾಮಹ ಗೋಲ್ವಾಲ್ಕರ್ ಪ್ರತಿಪಾದಿಸಿದ ಸಿದ್ಧಾಂತಗಳೇನು ಎಂಬುದನ್ನು ಅವರ ಚಿಂತನೆಗಳ ಸಾರಸಂಗ್ರಹವಾಗಿರುವ "Bunch Of Thoughts" ಮತ್ತು "We or our Nationhood Defined" ಎಂಬ ಪುಸ್ತಕಗಳಿಂದ ಆಯ್ದು ಕೆಳಗೆ ನೀಡಲಾಗಿದೆ. ಸಂಘಪರಿ ವಾರದ ನಾಯಕ ಮಣಿಗಳು ಈ ವಿಕೃತಿಯನ್ನು ಉದ್ದೇಶಪೂರ್ವಕವಾಗಿಯೇ ಮಾಡುತ್ತಿದ್ದಾರೆ. ಆದರೆ ಅವರ ಪ್ರಚಾರಗಳಿಗೆ ಬಲಿಯಾಗಿ ಅವರ ಪಾದಕ್ಕೆ ಬೀಳುತ್ತಿರುವ ಶೋಷಿತ ಜನಸಮುದಾಯ ಈ ಹುನ್ನಾರಗಳ ಬಗ್ಗೆ ಮತ್ತಷ್ಟು ಜಾಗೃತಿ ಮತ್ತು ಎಚ್ಚರಿಕೆಯನ್ನು ಪ್ರದರ್ಶಿಸಬೇಕಾಗಿದೆ.

ಗೋಲ್ವಾಲ್ಕರ್‌ರ ಜನವಿರೋಧಿ ಚಿಂತನೆಯ ಕೆಲವು ಸ್ಯಾಂಪಲ್‌ಗಳು

ಜಾತಿ ವ್ಯವಸ್ಥೆಯ ಕುರಿತು:

"ಜಾತಿ ವ್ಯವಸ್ಥೆ ಎಂಬುದು ನಮ್ಮ ದೇಶದ ಉಜ್ವಲ ರಾಷ್ಟ್ರೀಯ ಬದುಕಿನಲ್ಲಿ ಸನಾತನ ಕಾಲದಿಂದಲೂ ಅಸ್ತಿತ್ವ ದಲ್ಲಿದೆ. ಆದರೆ ಈ ನಮ್ಮ ಉಜ್ವಲ ಇತಿಹಾಸದಲ್ಲಿ ಈ ಜಾತಿ ವ್ಯವಸ್ಥೆಯು ನಮ್ಮ ದೇಶದ ಪ್ರಗತಿಗೆ ಅಡ್ಡಿಯಾಗಿ ದ್ದಾಗಲೀ ನಮ್ಮ ದೇಶದ ಐಕ್ಯತೆಗೆ ಅಡ್ಡಿಯಾಗಿದ್ದಾಗಲೀ ಇಲ್ಲ, ವಾಸ್ತವವಾಗಿ ಅದು ನಮ್ಮ ಸಾಮಾಜಿಕ ಒಗ್ಗಟ್ಟಿಗೆ ಗಟ್ಟಿ ಅಡಿಪಾಯವಾಗಿ ಕೆಲಸ ಮಾಡಿದೆ...ಜಾತಿ ವ್ಯವಸ್ಥೆಯೇ ನಮ್ಮ ದೌರ್ಬಲ್ಯವಾಗಿದ್ದಲ್ಲಿ ಜಾತಿ ವ್ಯವಸ್ಥೆ ಇಲ್ಲದ ದೇಶಗಳಿಗಿಂತ ಸುಲಭವಾಗಿ ನಮ್ಮ ದೇಶದ ಜನ ವಿದೇಶಿ ಆಕ್ರಮಣಕ್ಕೆ ತುತ್ತಾಗಬೇಕಿತ್ತು... ನಮ್ಮ ಈಶಾನ್ಯ ಮತ್ತು ಆಗ್ನೇಯ ಪ್ರದೇಶಗಳಲ್ಲಿ ಬುದ್ಧ ಧರ್ಮದ ಪ್ರಭಾವದಿಂದಾಗಿ ಜಾತಿ ವ್ಯವಸ್ಥೆ ಭಗ್ನವಾಗಿದ್ದರಿಂದ, ಅವು ಬಹಳ ಸುಲಭವಾಗಿ ಮುಸ್ಲಿಮರ ದಾಳಿಗೆ ತುತ್ತಾದವೆಂಬುದನ್ನು ಇತಿಹಾಸ ಓದಿದಾಗ ನಮಗೆ ವೇದ್ಯವಾಗುವ ವಾಸ್ತವ. ಈಗ ಕಾಂದಹಾರ್ ಎಂದು ಕರೆಸಿಕೊಳ್ಳಲ್ಪಡುವ ಗಾಂಧಾರ ದೇಶವು ಸಂಪೂರ್ಣವಾಗಿ ಮುಸ್ಲಿಮೀಕರಿಸಲ್ಪಟ್ಟಿತು. ಪೂರ್ವ ಬಂಗಾಳದಲ್ಲೂ ಮತಾಂತರವು ತೀವ್ರ ಪರಿಣಾಮ ವನ್ನು ಬೀರಿತು. ಆದರೆ ಜಾತಿ ವ್ಯವಸ್ಥೆ ತುಂಬಾ ಸಾಂಪ್ರ ದಾಯಿಕವಾಗಿ ಮತ್ತು ಕಠಿಣವಾಗಿ ಪಾಲಿಸಲ್ಪಡುತ್ತಿತ್ತು ಎಂದು ಪರಿಗಣಿಸಲ್ಪಡುವ ಉತ್ತರ ಪ್ರದೇಶ ಮತ್ತು ದೆಹಲಿ ಪ್ರದೇಶಗಳು ಶತಮಾನಗಳ ಕಾಲ ಮುಸ್ಲಿಂ ರಾಜ್ಯಾಧಿಕಾರ ಮತ್ತು ಮತೋನ್ಮತ್ತತೆಯ ಕೇಂದ್ರ ಸ್ಥಾನ ವಾಗಿದ್ದರೂ ಪ್ರಧಾನವಾಗಿ ಹಿಂದೂವಾಗಿಯೇ ಉಳಿದುಕೊಂಡಿತು. ನಮಗೆ ತಿಳಿದಿರುವಂತೆ ಶಿವಾಜಿಯ ಕಾಲಘಟ್ಟದಲ್ಲೂ ಕೆಳ ಜಾತಿ ಎಂದು ಕರೆಸಿಕೊಳ್ಳಲ್ಪಡು ವವರು ಸ್ವರಾಜ್‌ನ ಪುನುರುತ್ಥಾನಕ್ಕಾಗಿ ಐತಿಹಾಸಿಕ ಪಾತ್ರ ನಿರ್ವಹಿಸಿದ್ದಾರೆ. ಹೀಗೆ ಇತಿಹಾಸವು ಸತ್ಯದ ಎರಡು ಮುಖಗಳ ಬಗ್ಗೆಯೂ ಸಾಕ್ಷ್ಯ ನುಡಿಯುತ್ತಿದೆ. ಒಂದು ಕಡೆ "ಜಾತಿ ಪೀಡಿತ" ಹಿಂದೂ ಸಮಾಜವು ಎರಡು ಸಾವಿರ ವರ್ಷಗಳ ಕಾಲ ಗ್ರೀಕರ, ಶಕರ, ಹೂಣರ, ಮುಸ್ಲಿಮರ ಮತ್ತು ಯುರೋಪಿಯನ್ನರ ದಾಳಿಯನ್ನು ಒಂದರ ನಂತರ ಒಂದರಂತೆ ಅನುಭವಿಸಿದ ತರುವಾಯವೂ ಜಗ್ಗದೆ ಅಜೇಯವಾಗಿ ಉಳಿದಿರುವುದಲ್ಲದೆ ಈಗಲೂ ಒಬ್ಬ ರಾಮಕೃಷ್ಣ, ಒಬ್ಬ ವಿವೇಕಾನಂದ, ಒಬ್ಬ ತಿಲಕ್, ಒಬ್ಬ ಗಾಂಧಿಯನ್ನು ಸೃಷ್ಟಿಸುವ ಅಂತಃಶಕ್ತಿಯನ್ನು ಉಳಿಸಿ ಕೊಂಡಿದ್ದರೆ ಜಾತಿ ರಹಿತ ಸಮಾಜಗಳು ಇನ್ನೆಂದೂ ತಲೆ ಎತ್ತದಂತೆ ಮಣ್ಣಲ್ಲಿ ಮಣ್ಣಾಗಿ ಹೋಗಿವೆ."

("Bunch Of Thoughts" ಪುಸ್ತಕದಿಂದ)

ಸ್ವಾತಂತ್ರ್ಯ ಹೋರಾಟ ಮತ್ತು ಬ್ರಿಟೀಷರನ್ನು ವಿರೋಧಿಸುವ ಬಗ್ಗೆ:

"ಸಂಘವು ನಮ್ಮ ಸಮಾಜದ ಇಂದಿನ ಸ್ಥಿತಿಗೆ ಯಾರನ್ನೂ ದೂಷಿಸುವುದಿಲ್ಲ, ಜನರು ಯಾವಾಗ ಇತರ ರನ್ನು ದೂರಲು ಪ್ರಾರಂಭಿಸುತ್ತಾರೆಯೋ ಆಗ ಅವರಲ್ಲೇ ಏನೋ ದೌರ್ಬಲ್ಯವಿದೆ ಎಂದರ್ಥ. ಬಲಹೀನರ ಮೇಲೆ ಬಲಶಾಲಿಗಳು ನಡೆಸುವ ಅನ್ಯಾಯದ ಬಗ್ಗೆ ಬಲಶಾಲಿಗಳನ್ನು ದೂರುವುದೇ ನಿರರ್ಥಕ. ಸಂಘಪರಿವಾರವು ತನ್ನ ಅಮೂಲ್ಯ ಸಮಯವನ್ನು ಇತರರನ್ನು ದೂರುವುದಕ್ಕೆ ವಿಮರ್ಶಿಸು ವುದಕ್ಕೆ ಕಳೆಯುವುದಿಲ್ಲ, ದೊಡ್ಡ ಮೀನು ಸಣ್ಣ ಮೀನನ್ನು ನುಂಗುತ್ತದೆ ಎಂದು ತಿಳಿದಾದ ಮೇಲೆ ಸಣ್ಣ ಮೀನನ್ನು ದೂರುವುದೇ ಹುಚ್ಚುತನ. ಒಳ್ಳೆಯದೋ, ಕೆಟ್ಟದೋ ಪ್ರಕೃತಿಯ ನಿಯಮಗಳು ಯಾವಾಗಲೂ ಒಂದೇ ಆಗಿದೆ. ಅದನ್ನು ಅನ್ಯಾಯ ಎಂದು ಕರೆದ ಮಾತ್ರಕ್ಕೆ ಅದು ಬದಲಾಗುವುದಿಲ್ಲ"

(ಗೋಲ್ವಾಲ್ಕರ್ 1942ರ ಜುಲೈ 8ರಂದು ಮಾಡಿದ ಭಾಷಣದಿಂದ)

"1947ಕ್ಕೆ ಮುನ್ನ ಬಹಳಷ್ಟು ಜನ ಈ ದೇಶದಿಂದ ಬ್ರಿಟಿಷರನ್ನು ಹೊರಗಟ್ಟಬೇಕು ಎಂಬ ಸ್ಫೂರ್ತಿಯಿಂದ ಹೋರಾಡಿದರು. ಬ್ರಿಟಿಷರು ಅಧಿಕಾರಿಕವಾಗಿ ಈ ದೇಶ ವನ್ನು ಬಿಟ್ಟು ಹೋದ ನಂತರ ಈ ಸ್ಫೂರ್ತಿ ಕುಂದಿತು. ಆದರೆ ವಾಸ್ತವವಾಗಿ ಈ ಬಗೆಯ ಸ್ಫೂರ್ತಿ ಇಟ್ಟುಕೊಳ್ಳುವ ಅಗತ್ಯವೇ ಇರಲಿಲ್ಲ, ನಾವು ನಮ್ಮ ಪ್ರತಿಜ್ಞೆಯಲ್ಲಿ ನಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಮೂಲಕ ದೇಶದ ಸ್ವಾತಂತ್ರ್ಯದ ಬಗ್ಗೆ ಮಾತಾಡಿದ್ದೇವೆ. ಅದರಲ್ಲಿ ಬ್ರಿಟಿಷರನ್ನು ಹೊರಗಟ್ಟುವ ವಿಷಯವೇ ಇರಲಿಲ್ಲ ಎಂಬುದನ್ನು ಎಲ್ಲರೂ ಗಮನಿಸಬೇಕು."

(1960ರಲ್ಲಿ ಇಂದೂರಿನಲ್ಲಿ ಗೋಲ್ವಾಲ್ಕರ್ ಮಾಡಿದ ಭಾಷಣದಿಂದ)

ಭಾರತದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಬಗ್ಗೆ:

"ಆದರೆ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಇಸ್ಲಾಮಿಗೆ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಗೊಂಡಿರುವ ಜನಗಳ ಧೋರಣೆ ಏನೆಂಬುದು? ಅವರು ಈ ನೆಲದಲ್ಲಿ ಹುಟ್ಟಿದ್ದಾರೆ ಎಂಬುದು ನಿಸ್ಸಂಶಯ. ಆದರೆ ಅವರು ಉಪ್ಪುಂಡ ಮನೆಯ ಋಣದ ಪ್ರಜ್ಞೆ ಹೊಂದಿ ದ್ದಾರೆಯೇ? ತಮ್ಮನ್ನು ಪೊರೆದ ಈ ನೆಲದ ಬಗ್ಗೆ ಅವರಿಗೆ ಕಿಂಚಿ ತ್ತಾದರೂ ನಿಷ್ಠೆ- ಗೌರವಗಳಿ ವೆಯೇ? ತಾವು ಈ ನೆಲದ ಮತ್ತು ಇಲ್ಲಿನ ಪರಂಪರೆಯ ಮಕ್ಕಳು ಮತ್ತು ಅದಕ್ಕೆ ಸೇವೆ ಮಾಡುವುದು ತಮ್ಮ ಜೀವಿತದ ದೊಡ್ಡ ಭಾಗ್ಯವೆಂಬ ಭಾವನೆಯನ್ನು ಹೊಂದಿದ್ದಾ ರೆಯೇ? ಆ ಮಾತೆಗೆ ಸೇವೆ ಮಾಡುವುದು ತಮ್ಮ ಕರ್ತವ್ಯ ವೆಂದು ಅವರು ಭಾವಿಸು ತ್ತಾರೆಯೇ?.... ಇಲ್ಲ! ಅವರ ಧರ್ಮಶ್ರದ್ಧೆ ಬದಲಾಗು ವುದರೊಂದಿಗೆ ರಾಷ್ಟ್ರದ ಬಗೆಗಿನ ಪ್ರೇಮ ಮತ್ತು ತ್ಯಾಗದ ಭಾವನೆಯೂ ಹೋಗಿಬಿಟ್ಟಿದೆ.

ಅದು ಇಷ್ಟಕ್ಕೆ ನಿಲ್ಲುವುದಿಲ್ಲ, ಅವರು ಈ ನೆಲದ ಶತ್ರುಗಳೊಂದಿಗೆ ಒಂದು ಬಗೆಯ ಏಕಾತ್ಮತೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಅವರು ತಮ್ಮನ್ನು ತಾವು "ಶೇಖರು" ಮತ್ತು "ಸೈಯದ್"ಗಳೆಂದು ಕರೆದುಕೊಳ್ಳುತ್ತಾರೆ. ಶೇಖರು ಮತ್ತು ಸೈಯದ್‌ರೆಂಬುದು ಅರೇಬಿಯಾದಲ್ಲಿರುವ ಪಂಗಡಗಳ ಹೆಸರು. ಹಾಗಿದ್ದಲ್ಲಿ ತಾವು ಅವರ ಸಂತಾ ನವೆಂಬ ಭಾವನೆ ಅವರಿಗೆ ಹೇಗೆ ಬಂತು? ಅದೇಕೆಂದರೆ ಈ ದೇಶದ ಪರಂಪರೆಯೊಂದಿಗೆ ಅವರು ಕೊಂಡಿಗಳನ್ನು ಕಡಿದುಕೊಂಡು ಮಾನಸಿಕವಾಗಿ ಈ ದೇಶದ ಮೇಲೆ ಆಕ್ರಮಣ ಮಾಡಿದವರೊಂದಿಗೆ ಸೇರಿಕೊಂಡುಬಿಟ್ಟಿದ್ದಾರೆ. ಅವರು ತಾವಿಲ್ಲಿ ಈ ನೆಲವನ್ನು ಗೆದ್ದುಕೊಂಡು ಸಾಮ್ರಾಜ್ಯವನ್ನು ಸ್ಥಾಪಿಸಲು ಬಂದಿದ್ದೇವೆಂದೇ ಈಗಲೂ ಯೋಚಿಸುತ್ತಾರೆ. ಹೀಗೆ ಸ್ಪಷ್ಟವಾಗಿ ತಿಳಿದು ಬರುವಂತೆ ಇದು ಕೇವಲ ಧರ್ಮಶ್ರದ್ಧೆಯ ಬದಲಾವಣೆಯ ವಿಷಯವಲ್ಲ, ಬದಲಿಗೆ ಅದು ರಾಷ್ಟ್ರೀಯ ಅನನ್ಯತೆಯ ಬದಲಾವಣೆಯ ಪ್ರಶ್ನೆಯೂ ಆಗಿದೆ. ತಮ್ಮ ದೇಶವನ್ನು ತೊರೆದು ಶತ್ರುಗಳ ಜೊತೆ ಸೇರುವುದನ್ನು ದ್ರೋಹವೆನ್ನದೆ ಇನ್ನೇನನ್ನುತ್ತಾರೆ?

ಒಂದು ನಿರ್ಧಿಷ್ಟ ಭೌಗೋಳಿಕ ಪ್ರದೇಶದ ಚೌಕಟ್ಟಿ ನೊಳಗೆ ವಾಸಿಸಿದ ಮಾತ್ರಕ್ಕೆ ಒಂದೇ ಸ್ವಭಾವ ಮತ್ತು ಗುಣಗಳನ್ನೊಳಗೊಂಡ ಒಂದು ಸುಮೈಕ್ಯಗೊಂಡ ರಾಷ್ಟ್ರೀಯ ಸಮಾಜವನ್ನು ರೂಪಿಸಲು ಸಾಧ್ಯವಾಗುವುದಿಲ್ಲ, ಹೊಸದಾಗಿ ಬಂದವರು ತಮ್ಮ ಜೀವನ ದೃಷ್ಟಿಯ ಬಗ್ಗೆ ಸಂಪೂರ್ಣ ಪರಿವರ್ತನೆ ಮಾಡಿಕೊಳ್ಳಬೇಕು, ನಮ್ಮ ರಾಷ್ಟ್ರದ ಪರಂಪರೆಯಲ್ಲಿ ಆದಂತೆ ಮರುಹುಟ್ಟನ್ನು ಪಡೆಯಬೇಕು. ಕೇವಲ ಒಂದೇ ನೆಲದಲ್ಲಿ ಹುಟ್ಟಿ ಬೆಳೆದ ಮಾತ್ರಕ್ಕೆ ಅಲ್ಲಿ ವಾಸಿಸುವ ಎಲ್ಲರಲ್ಲೂ ಒಂದೇ ಬಗೆಯ ನಿಷ್ಠೆ, ಸ್ವಭಾವ ಮತ್ತು ಜೀವನ ವಿಧಾನ ಇರುವುದಿಲ್ಲ."

("Bunch Of Thoughts" ಪುಸ್ತಕದಿಂದ)

ಮತಾಂತರದ ಬಗ್ಗೆ:

"ಹಿಂದೂಗಳನ್ನು ಇತರ ಧರ್ಮಗಳಿಗೆ ಮತಾಂತರ ಮಾಡುವುದೆಂದರೆ ಈ ದೇಶದ ಬಗ್ಗೆ ಇದ್ದ ಅಚಲ ಮತ್ತು ಸಂಪೂರ್ಣ ನಿಷ್ಠೆಯನ್ನು ವಿಚಲಿತಗೊಳಿಸುವುದೇ ಆಗಿದೆ. ಇದು ದೇಶದ ಮತ್ತು ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ ಗಂಡಾಂತರಕಾರಿಯಾದದ್ದಾಗಿದೆ. ಆದ್ದರಿಂದ ಅದನ್ನು ಸಂಪೂರ್ಣವಾಗಿ ನಿಲ್ಲಿಸಲೇಬೇಕು. ಮತಾಂತರ ಗೊಳ್ಳುವ ವ್ಯಕ್ತಿ ವಿವಿಧ ಧರ್ಮಗಳ ತತ್ವವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿ ನಿರ್ಧಾರಕ್ಕೆ ಬರುವುದಿಲ್ಲ, ಜನರ ಬಡತನ, ಅನಕ್ಷರತೆ ಮತ್ತು ಅಜ್ಞಾನದ ಬಂಡವಾಳ ಮಾಡಿಕೊಂಡು ಅವರಿಗೆ ಇಲ್ಲಸಲ್ಲದ ಆಮಿ[illegible] ಗಳನ್ನು ತೋರಿ ಕುತಂತ್ರದ ಮೂಲಕ ಮತಾಂತ[illegible] ಗೊಳಿಸಲಾಗುತ್ತದೆ. ಇದರಲ್ಲಿ ನಿಜವಾದ ಹೃದಯ[illegible] ಪರಿವರ್ತನೆಯೇನೂ ಒಳಗೊಂಡಿರುವುದಿಲ್ಲ, ಆ ಅನ್ಯಾ[illegible] ಯುತವಾದ ಮತಾಂತರವನ್ನು ತಡೆಗಟ್ಟುವುದು ಸಮಂಜ[illegible] ಸವೇ ಆಗಿದೆ. ಅಜ್ಞಾನ ಮತು ಬಡತನದಲ್ಲಿರುವ ನಮ್ಮ[illegible] ಸಹೋದರರನ್ನು ರಕ್ಷಿಸುವುದು ನಮ್ಮ ಕರ್ತವ್ಯವೇ ಆಗಿದೆ."

("Bunch Of Thoughts" ಪುಸ್ತಕದಿಂದ)

ಭಾರತದ ಕ್ರಿಶ್ಚಿಯನ್ನರ ಬಗ್ಗೆ:

"ಇನ್ನು ಕ್ರಿಶ್ಚಿಯನ್ನರ ಕುರಿತು ಹೇಳುವುದಾದ[illegible] ಮೇಲ್ನೋಟಕ್ಕೆ ನೋಡುವವರಿಗೆ ಅವರು ಯಾವುದೇ[illegible] ಅಪಾಯಮಾಡದವರಾಗಿ ಮಾತ್ರವಲ್ಲದೆ ದಯೆ ಮತ್ತು[illegible] ಕರುಣೆಯೇ ಮೂರ್ತಿವೆತ್ತವರಂತೆ ಕಾಣುತ್ತಾರೆ. ಅವರ[illegible] ಭಾಷಣಗಳಲ್ಲಿ "ಸೇವೆ" ಮತ್ತು "ವಿಮೋಚನೆ"ಗೆಂದ[illegible] ಆ ಭಗವಂತನಿಂದಲೇ ಕಳಿಸಲ್ಪಟ್ಟವರೆಂಬಂತೆ ಕಾಣಿಸಿ[illegible] ಕೊಳ್ಳುತ್ತಾರೆ. ಅವರು ಸ್ಕೂಲ್ ಮತ್ತು ಕಾಲೇಜುಗಳನ್ನು[illegible] ಅನಾಥಾಲಯಗಳನ್ನು ನಡೆಸುತ್ತಾರೆ. ಆದರೆ ಈ ಚಟುವಟಿ[illegible] ಗಳಿಗಾಗಿ ಕೋಟ್ಯಾಂತರ ರುಪಾಯಿ ಸುರಿಯುತ್ತಿರುವ[illegible] ಈ ಕ್ರಿಶ್ಚಿಯನ್ನರ ನಿಜವಾದ ಉದ್ದೇಶ ಮತ್ತು ಕುತಂತ್ರವೇನು[illegible]

ನಮ್ಮ ನೆಲದಲ್ಲಿ ನೆಲೆಸಿರುವ ಈ ಕ್ರಿಶ್ಚಿಯನ್ ಸಜ್ಜನ[illegible] ನಿಜವಾದ ಉದ್ದೇಶವೇನೆಂದರೆ ನಮ್ಮ ಜೀವನದ ಸಾಮಾಜಿ[illegible] ಮತ್ತು ಧಾರ್ಮಿಕ ಹಂದರವನ್ನು ಹಾಳುಗೆಡುವುದೇ ಅಲ್ಲದ[illegible] ದೇಶದ ಹಲವು ಭಾಗಗಳಲ್ಲಿ ಮತ್ತು ಅವಕಾಶವಿದ್ದಲ್ಲಿ[illegible] ದೇಶದೆಲ್ಲೆಡೆ ರಾಜಕೀಯ ಅಧಿಪತ್ಯವನ್ನೂ ಸ್ಥಾಪಿಸುವುದೇ[illegible] ಆಗಿದೆ."

("Bunch Of Thoughts" ಪುಸ್ತಕದಿಂದ)

ಅಲ್ಪಸಂಖ್ಯಾತರ ಕುರಿತು:

"ಹಿಂದೂಸ್ಥಾನದೊಳಗಿರುವ ವಿದೇಶಿ ಜನಾಂಗದವರು[illegible] ಒಂದೋ ಹಿಂದೂ ಸಂಸ್ಕೃತಿಯನ್ನು ಮತ್ತು ಭಾಷೆಯನ್ನು[illegible] ಅಳವಡಿಸಿಕೊಳ್ಳಬೇಕು, ಹಿಂದೂ ಧರ್ಮವನ್ನು ಅತೀವ[illegible] ಗೌರವದಿಂದ ಕಾಣುವುದನ್ನು ಕಲಿಯಬೇಕು. ಹಿಂದೂ[illegible] ಜನಾಂಗ ಮತ್ತು ಸಂಸ್ಕೃತಿಯನ್ನು ಅಂದರೆ ಹಿಂದೂ[illegible] ರಾಷ್ಟ್ರದ ಹಿರಿಮೆಯನ್ನು ಹೊರತುಪಡಿಸಿ ಇನ್ಯಾವ[illegible] ಯೋಚನೆಯನ್ನೂ ಮಾಡಬಾರದು ಮತ್ತು ಪ್ರತ್ಯೇಕ[illegible] ಅಸ್ತಿತ್ವವನ್ನೇ ಕಳೆದುಕೊಂಡು ಹಿಂದೂ ಜನಾಂಗದೊಳಗೆ[illegible] ಬೆರೆತುಹೋಗಬೇಕು. ಅಥವಾ ಏನನ್ನೂ ಆಗ್ರಹಿಸದೇ[illegible] ಯಾವುದೇ ಬಗೆಯ ವಿಶೇಷ ಮಾನ್ಯತೆಯನ್ನಿರಲಿ[illegible] ಯಾವುದೇ ಸೌಲಭ್ಯವನ್ನೂ ಕೇಳದೆ – ಕೊನೆಗೆ ನಾಗರಿಕತ್ವ[illegible] ವನ್ನೂ ಕೇಳದೆ – ಸಂಪೂರ್ಣವಾಗಿ ಹಿಂದೂ ರಾಷ್ಟ್ರಕ್ಕೆ[illegible] ಅಡಿಯಾಳಾಗಿ ಇರಬೇಕು. ಅವರಿಗೆ ಇನ್ಯಾವ ದಾರಿಯೂ[illegible] ಇಲ್ಲ, ಇರಲೂ ಬಾರದು. ನಮ್ಮದು ಒಂದು ಸನಾತನ[illegible] ರಾಷ್ಟ್ರವಾಗಿದ್ದು ನಮ್ಮ ದೇಶದೊಳಗೆ ವಾಸಿಸಬಯಸುವ[illegible] ವಿದೇಶಿ ಜನಾಂಗೀಯರೊಂದಿಗೆ ಒಂದು ಸನಾತನ ದೇಶ[illegible] ಹೇಗೆ ವ್ಯವಹರಿಸಬೇಕೋ ಹಾಗೆ ವ್ಯವಹರಿಸೋಣ."

("We or our Nationhood Defined" ಪುಸ್ತಕದಿಂದ)

ಹುಟ್ಟಿನಿಂದಲೇ ಹಿಂದುಗಳು!

"ಜಗತ್ತಿನಲ್ಲಿ ಯಾರೂ ಮೊದಲೇ ಹಿಂದು, ಮುಸ್ಲಿ[illegible] ಅಥವಾ ಕ್ರಿಶ್ಚಿಯನ್ನರಾಗಿ ಹುಟುವುದಿಲ್ಲ, ಬದಲಿಗೆ ಸಾಮಾನ್ಯ[illegible] ಮನುಷ್ಯರಾಗಿ ಹುಟ್ಟುತ್ತಾರೆಂದು ಕೆಲವು ಬುದ್ಧಿವಂತರು[illegible] ಹೇಳುತ್ತಾರೆ. ಆದರೆ ಒಬ್ಬ ಹಿಂದು ತನ್ನ ಮೊದಲ[illegible] ಸಂಸ್ಕಾರವನ್ನು ತಾಯಿಯ ಗರ್ಭದಲ್ಲಿರುವಾಗಲೇ ಪಡೆಯು[illegible] ತ್ತಾನೆ ಮತ್ತು ತನ್ನ ಕೊನೆಯ ಸಂಸ್ಕಾರವನ್ನು ಅಂತಿಮವಾ[illegible] ಚಿತೆಯ ಮೇಲೆ ಆತನ ದೇಹ ಅಗ್ನಿಗೆ ಆಹುತಿಯಾಗು[illegible] ವಾಗ ಪಡೆಯುತ್ತಾನೆ. ಒಟ್ಟು ಹದಿನಾರು ಸಂಸ್ಕಾರಗಳು[illegible] ಒಬ್ಬ ಹಿಂದೂವನ್ನು ಹಿಂದೂವನ್ನಾಗಿ ಮಾಡುತ್ತವೆ[illegible] ವಾಸ್ತವವಾಗಿ ನಾವು ಹಿಂದೂಗಳು ತಾಯಿಯ ಗರ್ಭದಿಂದ[illegible] ಅವತರಿಸುವ ಮುಂಚಿನಿಂದಲೇ ಹಿಂದೂಗಳಾಗಿರುತ್ತೇವೆ[illegible] ಮಿಕ್ಕವರು ಈ ಜಗತ್ತಿನಲ್ಲಿ ಅನಾಮಿಕರಾಗಿ ಜನ್ಮ ತಾಳುತ್ತಾರೆ[illegible] ಮತ್ತು ಆ ನಂತರ ಧರ್ಮ ದೀಕ್ಷೆ ಇತ್ಯಾದಿಗಳಿಂದ[illegible] ಮುಸ್ಲಿಮ್ ಅಥವಾ ಕ್ರಿಶ್ಚಿಯನ್ನರಾಗುತ್ತಾರೆ."

("We or our Nationhood Defined" ಪುಸ್ತಕದಿಂದ)

ಹಿಟ್ಲರ್ ನಡೆಸಿದ ಹತ್ಯಾಕಾಂಡದ ಕುರಿತು::

"ತನ್ನ ಜನಾಂಗದ ಮತ್ತು ಸಂಸ್ಕೃತಿಯ ಶ್ರೇಷ್ಠತೆ[illegible] ಮತ್ತು ಪರಿಶುದ್ಧತೆಯನ್ನು ಎತ್ತಿ ಹಿಡಿಯಲು ಇದೀ[illegible] ಜ್ಯೂ ಜನಾಂಗವನ್ನು ಹೊಡೆದೋಡಿಸುವ ಮೂಲಕ[illegible] ಜಗತ್ತಿಗೇ ದಿಗ್ಭ್ರಮೆ ಉಂಟು ಮಾಡಿದರು. ಜನಾಂಗೀಯ[illegible] ಶ್ರೇಷ್ಠತೆಯ ಅತ್ಯುತ್ಕೃಷ್ಟತೆ ಇಲ್ಲಿ ಅಭಿವ್ಯಕ್ತಗೊಂಡಿದೆ. ಅಲ್ಲದ[illegible] ಮೂಲಭೂತವಾಗಿಯೇ ಭಿನ್ನವಾಗಿರುವ ಎರಡು ಭಿನ್ನ[illegible] ಜನಾಂಗಗಳು ಮತ್ತು ಸಂಸ್ಕೃತಿಗಳು ಒಂದಾಗಿ ಬೆರೆದುಕೊಳ್ಳು[illegible] ವುದು ಸಾಧ್ಯವೇ ಇಲ್ಲವೆಂಬುದನ್ನು ಇದು ಎತ್ತಿ[illegible] ತೋರಿಸುತ್ತದೆ. ಇದು ಹಿಂದೂಸ್ಥಾನಕ್ಕೂ ಒಂದು ಒಳ್ಳೆಯ[illegible] ಪಾಠವಾಗಿದೆ."

("We or our Nationhood Defined" ಪುಸ್ತಕದಿಂದ).

-ಶಿವಸುಂದರ್

ವಿಜಯ್ ಟೈಮ್ಸ್ ಪಿನಿಷ್!

ಕರ್ನಾಟಕದ ಎರಡನೇ ಶ್ರೇಣಿಯ ಇಂಗ್ಲಿಷ್ ದಿನ ಪತ್ರಿಕೆ ವಿಜಯ ಟೈಮ್ಸ್ ಮುಚ್ಚಿ ಹೋಗಲಿದೆ. ಅದರ ಜಾಗದಲ್ಲಿ 'Bangalore Mirror' ಎಂಬ ಹೊಸ ಪತ್ರಿಕೆ ಲಾಂಚ್ ಆಗುತ್ತಿದೆ!

ಈ ಟೈಮ್ಸ್ ಮಾರವಾಡಿಗಳ ಲೆಕ್ಕಾಚಾರಗಳನ್ನು ಹೀಗೆ ಎಂದು ಖಚಿತವಾಗಿ ಹೇಳಲಿಕ್ಕೆ ಅಸಾಧ್ಯ. ನಾವೂ ನೀವೂ ಚಾಪೆ ಮೇಲೆ ಕೂತು ಏನೋ ಮಾತಾಡುತ್ತಿರುವಾಗ ಅವರು ಸದ್ದಿಲ್ಲದೆ ರಂಗೋಲಿ ಕೆಳಗೆ ತೂರಿ ಚುಕ್ಕಿ-ಚಿತ್ರ-ಬಣ್ಣ ಎಲ್ಲಾ ಬದಲಾಯಿಸಿಬಿಟ್ಟಿರುತ್ತಾರೆ.

ಕರ್ನಾಟಕದಲ್ಲೇ ಈಗ ಏನಾಗುತ್ತಿದೆ ನೋಡಿ....

ಸಂಕೇಶ್ವರರಿಂದ ಕಳೆದ ಜೂನ್‌ನಲ್ಲಿ ಮೂರು ದಿನಪತ್ರಿಕೆ ಖರೀದಿಸಿದ್ದ ಟೈಮ್ಸ್‌ನವರು ಅದಾದ ಮೂರೇ ತಿಂಗಳಲ್ಲಿ ಉಪಾಕರಣವನ್ನು ಎನ್‌ಕೌಂಟರ್ ಮಾಡಿ ಮುಗಿಸಿಬಿಟ್ಟರು.

ಆಶ್ಚರ್ಯವೆಂದರೆ ಇಂಗ್ಲಿಷಿನ ಟೈಮ್ಸ್ ಆಫ್ ಇಂಡಿಯಾಗೇ ಈಗ ಪ್ಲಾಸ್ಟಿಕ್ ಸರ್ಜರಿ ಮಾಡಿ ಕನ್ನಡ ಟೈಮ್ಸ್ ಆಫ್ ಇಂಡಿಯಾ ಆಗಿಸಿ ಪ್ರಿಂಟಿಸುತ್ತಿದ್ದಾರೆ. ಅದೂ ಬೆಂಗಳೂರು ಜನರಿಗೆ ಮಾತ್ರ. ಇದರಲ್ಲಿ ಮುಂದೆ ಬೆಂಗಳೂರ್ ಟೈಮ್ಸ್‌ನಲ್ಲಿರುವಂತೆ ನಾಯಿ ಮರಿ, ಮನೆ, ವಾಸ್ತು, ಹೋಟೆಲ್ ಮೆನುಕಾರ್ಡ್‌ಗಳೆಲ್ಲಾ ಪ್ರಕಟವಾದರೆ ಏನೂ ಆಶ್ಚರ್ಯವಿಲ್ಲ, ಜೊತೆಗೆ ಬೆಂಗಳೂರಿನ ಹೈ ಸೊಸೈಟಿಯ ದಡ್ಡ ಗಂಡಸರೂ, ಕುಂಡೆ ತೋರಿಸಿಕೊಂಡು ತಿರುಗುವ ಪೋಲಿ ಹೆಂಗಸರ ಪಾರ್ಟಿಗಳ ಫೋಟೋಗಳನ್ನು ಹಾಕಿ ಧನ್ಯರಾಗುವುದೂ ಗ್ಯಾರಂಟಿ.

ಅವರಿಗೆ ಒಂದು ಪತ್ರಿಕೆಯ ಸರ್ಕ್ಯುಲೇಷನ್‌ಗಿಂತಾ ಜಾಹೀರಾತು ದುಡ್ಡು ಎಷ್ಟು ಹುಟ್ಟುತ್ತದೆ ಎಂಬುದೇ ಮುಖ್ಯ.

ಆ ಲೆಕ್ಕಾಚಾರದ ಮೇಲೆಯೇ ಈಗ ಟೈಮ್ಸ್ ಧಣಿಗಳು ವಿಜಯ ಟೈಮ್ಸ್‌ಗೆ ನೇಣು ಹಗ್ಗ ರೆಡಿ ಮಾಡುತ್ತಿದ್ದಾರೆ.

VIJAY TIMES

ಕೃಷ್ಣಪ್ರಸಾದ್ ಎಡಿಟರ್ ಆಗಿ ಬರುವ ಮೊದಲು 63 ಸಾವಿರವಿದ್ದ ವಿಜಯ ಟೈಮ್ಸ್ ಈಗ ಒಂದು ಲಕ್ಷ ದಾಟಿದೆ. ಆದರೂ ವಿಜಯ್ ಟೈಮ್ಸ್ ನಿಲ್ಲಿಸಿ ಅದರ ಬದಲು ಬೆಂಗಳೂರು ಮಿರರ್ ಎಂಬ ಹೊಸ ಪತ್ರಿಕೆ ಲಾಂಚ್ ಮಾಡುತ್ತಿದ್ದಾರೆ. ಮುಂಬೈ ಮಿರರ್ ತರದ್ದೇ ಇನ್ನೊಂದು ಮಿರರ್ ಇದು. ಆದರೆ ಅದರಲ್ಲಿ ಪ್ರತಿಫಲಿಸುವುದೂ ಕೂಡಾ ಬೆಂಗಳೂರಿನ ಹೈ ಸೊಸೈಟಿಯ ಜನರ, ಐಟಿ ಬಿಟಿ ಯಂತ್ರ ಮಾನವರ ಜೀವನ ಶೈಲಿ, ಚಿಲ್ಲರೆ ಗ್ಯಾದರಿಂಗ್‌ಗಳು, ಪಾರ್ಟಿಗಳೆಂಬ ಅಮೋದ ಪ್ರಮೋದಗಳಷ್ಟೇ.


ಸೆನ್ಸೇಷನಲಿಸಂ ಅದರ ಮುಖ್ಯ ಸೂತ್ರವಾಗಿರುತ್ತದೆ.

ಕಾರ್ಪೋರೇಟ್ ಜಗತ್ತು ಕಾರ್ಪೋರೇಟ್ ಸಂಸ್ಕೃತಿಯೇ ಈ ಜಗತ್ತಿನ ಅಂತಿಮ ಸತ್ಯವೆಂಬಂತೆ ಇಂತಾ ಪತ್ರಿಕೆಗಳ ದಡ್ಡ ವರದಿಗಾರರು ತಮ್ಮ ಬಾಲಿಷ ಚಿಂತನೆಗಳನ್ನು ವಿಸರ್ಜಿಸಿಕೊಳ್ಳುತ್ತಿರುತ್ತಾರೆ.

ಥೇಟ್ ಟೈಮ್ಸ್ ಆಫ್ ಇಂಡಿಯಾ ತರ!

ಹಾಗೆ ಹೇಳಬೇಕೆಂದರೆ ಕೃಷ್ಣಪ್ರಸಾದ್ ಬಂದ ಮೇಲೆ, ಈವನ್ ಅದಕ್ಕೂ ಮುಂಚಿನಿಂದಲೂ ವಿಜಯ ಟೈಮ್ಸ್ ವಿಕದಂತೆ ಪಕ್ಕಾ ಚಡ್ಡಿ ಪತ್ರಿಕೆಯಂತಿರಲಿಲ್ಲ, ಜನ ಅದನ್ನು ಪೂರ ಮೆಚ್ಚಿಕೊಂಡಿರದಿದ್ದರೂ ತೀರಾ ತಿರಸ್ಕರಿಸಿರಲಿಲ್ಲ. ಈಗ 9 ಎಡಿಷನ್‌ಗಳ ಎಲ್ಲಾ ಬ್ಯೂರೋಗಳ ಸಿಬ್ಬಂದಿ, ಬೆಂಗಳೂರು ಕಚೇರಿಯ ಜನ ಸೇರಿದಂತೆ ನೂರೈವತ್ತು ಪತ್ರಕರ್ತರಿಗೆ ಮುಂದೇನು ಎಂಬ ಚಿಂತೆ ಶುರುವಾಗಿದೆ.

ಸಂಪಾದಕ ಕೃಷ್ಣಪ್ರಸಾದ್ ಈ ಬಗ್ಗೆ ಮುಗುಂ ಆಗಿದ್ದರೂ ಹಿರಿಯ ಉಪ ಸಂಪಾದಕ ಕಾರ್ನಿಕ್ ಹೊರಹೋಗಲು ಈಗಲೇ ಮಾನಸಿಕವಾಗಿ ರೆಡಿಯಾಗಿರುವಂತೆ ಎಲ್ಲರಿಗೂ ಹೇಳಿಬಿಟ್ಟಿದ್ದಾರಂತೆ.



ವಿಶ್ವೇಶ್ವರ ಭಟ್

ಟೈಮ್ಸ್ ಮಾಲೀಕರು ಯಾಕೆ ವಿಜಯ್ ಟೈಮ್ಸ್ ನಿಲ್ಲಿಸುವ ತೀರ್ಮಾನ ಮಾಡಿದ್ದಾರೆಂದು ಚೆಕ್ ಮಾಡುತ್ತಾ ಹೋದರೆ ಕೆಲವು ತಮಾಷೆ ವಿವರಗಳು ಸಿಗುತ್ತವೆ.

ಕರ್ನಾಟಕದಲ್ಲಿ ಭದ್ರವಾಗಿ ಬೇರು ಬಿಟ್ಟಿರುವ ಡೆಕ್ಕನ್ ಹೆರಾಲ್ಡ್ ಮತ್ತು ದಿ ಹಿಂದೂ ಹಾಗೂ ಆಟ ಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿರುವ ಇಂಡಿಯನ್ ಎಕ್ಸ್‌ಪ್ರೆಸ್‌ಗಳ ಸರ್ಕುಲೇಷನ್ನು ಹಾಗೂ ಜಾಹೀರಾತು ಆದಾಯಗಳನ್ನೆಲ್ಲಾ ವಿಜಯ್ ಟೈಮ್ಸ್ ಕೀಳುತ್ತದೆ ಎಂದು ಈ ಮಾರ್ವಾಡಿಗಳು ಕಾದಿದ್ದರು. ಆದರೆ ಸಂಕೇಶ್ವರ್‌ರಿಂದ ಪತ್ರಿಕೆ ಖರೀದಿಸಿದ ಆರು ತಿಂಗಳ ನಂತರ ಏನೇನಾಗಿದೆ ಎಂದು ಇಣುಕಿ ನೋಡಿದರೆ....

ವಿಜಯ್ ಟೈಮ್ಸ್‌ನ ಪ್ರಸಾರವೇನೊ ಏರಿತ್ತು. ಆದರೆ ಅದು ಹೆರಾಲ್ಡ್, ಹಿಂದೂ, ಎಕ್ಸ್‌ಪ್ರೆಸ್‌ನಿಂದ ಕಿತ್ತುಕೊಂಡಿರಲಿಲ್ಲ, ಬದಲಾಗಿ ಸ್ವಂತ ಸೋದರ ಟೈಮ್ಸ್ ಆಫ್ ಇಂಡಿಯಾದ ಸರ್ಕುಲೇಷನನ್ನು ಅದು ಕಸಿದಿತ್ತು!!

ಅವತ್ತೆ ಟೈಮ್ಸ್ ಧಣಿಗಳು 'ಇನ್ನು ವಿಜಯ್ ಟೈಮ್ಸ್ ಅನ್ನು ಉಳಿಸತಕ್ಕದ್ದಲ್ಲ' ಎಂಬ ತೀರ್ಮಾನ ಮಾಡಿಬಿಟ್ಟರು. ಬೇರೆಯವರ ತಲೆ ಮೇಲೆ ಕಲ್ಲು ಎತ್ತಿ ಹಾಕು ಎಂದು ಕಳಿಸಿದರೆ ವಿಜಯ್ ಟೈಮ್ಸ್ ತನ್ನ ಮಾಲೀಕನ ಕಾಲು ಮೇಲೇ ಕಲ್ಲು ಹಾಕಿತ್ತು!

ವಿಜಯ್ ಟೈಮ್ಸ್ ನಿಲ್ಲಿಸುವುದರ ಜೊತೆಗೆ ಬೆಂಗಳೂರ್ ಮಿರರ್ ಮಾಡಬೇಕೆಂಬ ಅವರ ಯೋಚನೆಗೆ ಮುಂಬೈ ಪತ್ರಿಕೋದ್ಯಮವೇ ಪ್ರೇರಣೆ. ಅಲ್ಲಿ ಪ್ರಖ್ಯಾತವಾಗಿದ್ದ Sunday-Mid day ಯನ್ನು ಮಣಿಸಲು ಟೈಮ್ಸ್‌ನವರು ಮುಂಬೈ ಮಿರರ್ ಲಾಂಚ್ ಮಾಡಿದ್ದರು. ಆದರೆ ಎಷ್ಟು ಪಂಪ್ ಹೊಡೆದರೂ ಅದು ಚೇತರಿಸಿಕೊಳ್ಳಲಿಲ್ಲ, ಕೊನೆಕೊನೆಗೆ ಮುಂಬೈ ಮಿರರ್‌ಗೆ ಯಾವ ದುಃಸ್ಥಿತಿ ಬಂತೆಂದರೆ ಟೈಮ್ಸ್ ಆಫ್ ಇಂಡಿಯಾದ ಜೊತೆ ಮಿರರ್ ಅನ್ನು ಕೆಲದಿನ ಫ್ರಿಯಾಗಿ ಓದುಗರಿಗೆ ನೀಡಲಾಯಿತು. ಆದರೇನು ಜನ ಮಿರರ್‌ನೊಳಗೆ ಇಣುಕಿಯೂ ನೋಡಲಿಲ್ಲ, ಈ ಎಲ್ಲಾ ಕದನ ಸರ್ಕಸ್‌ಗಳಲ್ಲಿ ಟೈಮ್ಸ್ ನವರು ಮಾಡಿಕೊಂಡ ನಷ್ಟ ಬರೀ 120 ಕೋಟಿ ರೂಪಾಯಿಗಳು ಎಂದರೆ ನೀವು ನಂಬುತ್ತೀರಾ!

ದಿ ಟೈಮ್ಸ್ ಆಫ್ ಇಂಡಿಯಾ

THE TIMES OF INDIA

ಹೀಗೆ ಮುಂಬೈನಲ್ಲಿ ವಿಫಲವಾದ ಮಿರರ್ ಪ್ರಯೋಗ ಬೆಂಗಳೂರಿನಲ್ಲಿ ಸಕ್ಸಸ್ ಆಗಲು ಸಾಧ್ಯನಾ?

'ಸಾಧ್ಯವಿಲ್ಲ ಇನ್ನೊಮ್ಮೆ ಯೋಚಿಸಿ' ಅಂತಾ ವಿಜಯ್ ಟೈಮ್ಸ್‌ನ ಕೆಲ ಹಿರಿಯ ಪತ್ರಕರ್ತರೇ ಟೈಮ್ಸ್ ಮಾಲೀಕರಿಗೆ ಬುದ್ಧಿಮಾತು ಹೇಳಿದ್ದಾರಂತೆ. ಅವರು ಹೇಳಿರುವ ಇನ್ನೊಂದು ಕಿವಿಮಾತೆಂದರೆ ಬೆಂಗಳೂರಿನಲ್ಲಿ ಆ ತರದ ಮಿರರ್ ಓದುವಂತಾ ವೇಗದ ಬದುಕು, ಕಾಸ್ಮೋಪಾಲಿಟನ್ ಕಲ್ಚರ್ ಇಲ್ಲ ಎಂಬುದು.

ಇದು ನಿಜ ಕೂಡ.

ವಿಜಯ್ ಟೈಮ್ಸ್ ಸಾವಿಗೀಡಾಗಬೇಕಾದ ಪತ್ರಿಕೆಯಲ್ಲ, ಅದರ ಇವತ್ತಿನ ಮಾಲೀಕರು ಯಾರೇ ಆಗಿರಬಹುದು ಆದರೆ ಪತ್ರಿಕೆಯ ಓದುಗರು, ಬರೆಯುವ ಪತ್ರಕರ್ತರೆಲ್ಲಾ ಇಲ್ಲಿಯವರೇ ಆಗಿದ್ದರು. ಬಹುತೇಕ ಸುದ್ದಿಗಳೂ ನಮ್ಮದೇ ಆಗಿರುತ್ತಿದ್ದವು. ಈ ಎಲ್ಲಾ ಕಾರಣಗಳಿಂದಾಗಿ ಪತ್ರಿಕೆಯ ಬೇರುಗಳು ಇಲ್ಲಿಯೇ ಹರಡಿಕೊಂಡಿತ್ತು.

ಆದರೆ ಪತ್ರಿಕೆಗಳನ್ನು ವ್ಯಾಪಾರ ಮಾತ್ರವೆಂಬಂತೆ ನೋಡುವವರಿಗೆ ಈ ಸೂಕ್ಷ್ಮಗಳಿರುವುದಿಲ್ಲ, ಅಂತಹ ದೊಡ್ಡ ಕಂಪನಿಗಳ ಮಾಲೀಕರು ತಣ್ಣಗೆ ಬಂದು local voice ಗಳ ಕತ್ತು ಹಿಸುಕಿಬಿಡುತ್ತಾರೆ.

ಟೈಮ್ಸ್‌ನ ಮಾರ್ವಾಡಿಗಳಿಗೆ ಒಂದು ವಿಚಾರ ಗೊತ್ತಿರುವಂತಿಲ್ಲ.

ಡೆಕ್ಕನ್ ಹೆರಾಲ್ಡ್‌ನೊಂದಿಗೆ ನಮ್ಮ ಓದುಗರ ಸಂಬಂಧ ದಶಕಗಳ ಕಾಲದ್ದು. ಯಾರು ಏನೇ ಲಾಗ ಹಾಕಿದರೂ ಆ ಓದುಗ ಹೆರಾಲ್ಡ್ ಬಿಡುವುದಿಲ್ಲ, ಇನ್ನೂ ದಿ ಹಿಂದೂ ಓದುಗನ ನಿಷ್ಠೆ ಕದಲಿಸಲು ಯಾರಿಂದಲೂ ಆಗಲ್ಲ. ಎಕ್ಸ್‌ಪ್ರೆಸ್‌ನ ಪ್ರಸಾರ ಕರ್ನಾಟಕದಲ್ಲಿ ಸ್ವಲ್ಪ ಕಡಿಮೆ ಇದೆ.

ವಿಜಯ್ ಟೈಮ್ಸ್ ಇವರ್ಯಾರನ್ನೂ ಅಲ್ಲಾಡಿಸಲು ಆಗದಿದ್ದುದು ಏಕೆಂದರೆ ಈ ಪತ್ರಿಕೆಗಳಿಗೂ ಓದುಗರಿಗೂ ಒಂದು ರೀತಿಯ ಆಪ್ತ ಭಾವುಕ ಸಂಬಂಧವಿದೆ.

ಮತ್ತೊಂದೆಡೆ ವಿಜಯ್ ಟೈಮ್ಸ್ ತನ್ನದೇ ಸಂಸ್ಥೆಯ ಟೈಮ್ಸ್ ಆಫ್ ಇಂಡಿಯಾದ ಸರ್ಕುಲೇಷನ್ ಕಿತ್ತುಕೊಂಡಿದ್ದೇಕೆಂದರೆ TOI ನ ಬೇರುಗಳು ಇಲ್ಲಿಲ್ಲ, ಅದು ಜನಸಾಮಾನ್ಯರ ಪತ್ರಿಕೆಯೂ ಆಗಿರಲಿಲ್ಲ, ಬದಲಾಗಿ ವಿಜಯ್ ಟೈಮ್ಸ್‌ಗೆ ಆ native ಚಹರೆ ಮೈದುಂಬಿಕೊಳ್ಳಲು ಶುರು ವಾಗಿತ್ತು. ಓದುಗ ಅದಕ್ಕೇ TOI ಬಿಟ್ಟು VT ಕೈಗೆತ್ತಿ ಕೊಂಡಿದ್ದು. TOI ನೆಲೆಗೊಳಿಸಲು 14 ವರ್ಷ ಕಾದ ಟೈಮ್ಸ್ ಮಾಲೀಕರು ಈಗ ಚೆನ್ನಾಗೇ ಬೆಳೆಯುತ್ತಿದ್ದ ವಿಜಯ್ ಟೈಮ್ಸ್‌ಗೆ ಆರು ತಿಂಗಳ ಅವಕಾಶವನ್ನು ಕೊಡದೆ ಮುಚ್ಚುವ ನಿರ್ಧಾರ ಮಾಡುತ್ತಿದ್ದಾರೆ.

ಇವರಿಗೆ ಬುದ್ಧಿ ಹೇಳುವವರು ಯಾರಿದ್ದಾರೆ?


ಅದು ಹೋಗಲಿ.

ಬೆಂಗಳೂರು ಮಿರರ್ ನಿಮ್ಮಪ್ಪನಾಣೆ ಸಕ್ಸಸ್ ಆಗಲ್ಲ ಅಂತಾ ಭವಿಷ್ಯ ಹೇಳಿದರೂ ಕೇಳುವವರು ಯಾರಿದ್ದಾರೆ.

–ಈಶ

ಎಂಜಲು ಟೈಮ್ಸ್‌ಗೆ ರಾಷ್ಟ್ರಕವಿ ಛೀಮಾರಿ

'ಟೈಮ್ಸ್ ಆಫ್ ಇಂಡಿಯಾ' ಎಂಬ ಇಂಗ್ಲಿಷ್ ಎಂಜಲಿನ ಕನ್ನಡ ಪತ್ರಿಕೆ ಕಳೆದ ವಾರ ಶುರುವಾಗಿದೆ. ಆದರ ಮೊದಲ ದಿನವೇ ಕವಿ ಜಿ.ಎಸ್. ಶಿವರುದ್ರಪ್ಪ ಟೈಮ್ಸ್ ಮುಖಕ್ಕೆ ಮಂಗಳಾರತಿ ಎತ್ತಿದ್ದಾರೆ. ಈ ಡಬ್ಬಿಂಗ್ ಪೇಪರ್ ಅನ್ನು 'ಎಂಜಲು ಪತ್ರಿಕೆ' ಅಂತಾ ಸಾಹಿತಿ ಯು.ಆರ್. ಅನಂತಮೂರ್ತಿ ಮೈಸೂರಿನಲ್ಲಿ ಗೇಲಿ ಮಾಡಿ ತರಾಟೆಗೆ ತೆಗೆದುಕೊಂಡಿದ್ದರು. ಅಷ್ಟೆ ಅಲ್ಲದೆ ಕನ್ನಡದ ಯಾವ ಲೇಖಕರೂ ಎಂಜಲು ಟೈಮ್ಸ್‌ಗೆ ಬರೆಯದಂತೆ ಮನವಿಯನ್ನು ಮಾಡಿದ್ದರು.



ಆದರೇನು ಕತೆಗಾರ ವಿವೇಕ್ ಶಾನುಭಾಗ್, ಜಯಂತ್ ಕಾಯ್ಕಿಣಿ ಮುಂತಾದವರೆಲ್ಲಾ ಜಾಣ ನಿಸ್ಸಂಕೋಚತನದಿಂದ ಹೊಸ ಕನ್ನಡ ಟೈಮ್ಸ್‌ಗೆ ಶುಭಾಷಯ ಕೋರಿಬಿಟ್ಟರು. ಅದೇ ಹುಮ್ಮಸ್ಸಿನಲ್ಲಿ ಮೊನ್ನೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರಿಗೂ 'ಕನ್ನಡ' ಟೈಮ್ಸ್‌ನವರ್ಯಾರೋ ಫೋನ್ ಮಾಡಿ "ನಮ್ಮ ಕನ್ನಡ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗೆ ನಿಮ್ಮ ಶುಭಾಷಯದ ಮಾತು ಹೇಳಿ" ಎಂದಿದ್ದಾರೆ. ಆದರೆ ಸಿಟ್ಟಿಗೆದ್ದ ಜಿಎಸ್‌ಎಸ್ "ಅಲ್ರೀ ನಿಮ್ಮ ಪತ್ರಿಕೆಗೆ ಸ್ವಂತಿಕೆ ಇರೋ ಒಂದು ಕನ್ನಡ ಹೆಸರೂ ಸಿಗಲಿಲ್ವಾ? ನನ್ನ ಶುಭಾಷಯ ಇರ್ಲಿ, ಮೊದಲು ನೆಟ್ಟಗಿರೊ ಒಂದು ಕನ್ನಡ ಹೆಸರು ಹುಡುಕಿ ಇಡಿ" ಎಂದು ಛೀಮಾರಿ ಹಾಕಿದ್ದಾರೆ.



ಅರವಿಂದ ಚೊಕ್ಕಾಡಿ

ವಿವೇಕ್ ಹಾಗೂ ಕಾಯ್ಕಿಣಿಯೂ ಹೀಗೇ ಹೇಳಿದಿದ್ದರೆ ಎಷ್ಟು ಚೆನ್ನಿರುತ್ತಿತ್ತಲ್ಲವ? ಇವರು ಹೀಗೆ 'ದೇಶಕಾಲ'ದೊಳಗೆ ನಿಂತು ಯೋಚಿಸದಿದ್ದರೆ ಜನ 'ನಮಸ್ಕಾರ' ಮಾಡಿ ದೂರ ಹೋಗಿ ಬಿಡೋಲ್ವಾ.

ಹಾಗೆ ನೋಡಿದರೆ ಲೇಖಕ ಅರವಿಂದ ಚೊಕ್ಕಾಡಿ ಕನ್ನಡ ಟೈಮ್ಸ್‌ನವರೊಂದಿಗೆ ಆಡಿರುವ ಜಗಳ ಅರ್ಥಗರ್ಭಿತವಾಗಿದೆ.

ಅವರ ವಾದ ಇಷ್ಟೆ:

"ನೀವು ಇಂಗ್ಲಿಷ್ ಟೈಮ್ಸ್ ಆಫ್ ಇಂಡಿಯಾವನ್ನು ಯಥಾವತ್ ಅನುವಾದ ಮಾಡಿಸಿ ಕನ್ನಡ ಟೈಮ್ಸ್ ಮಾಡುತ್ತಿದ್ದೀರಿ. ಅದೇ ರೀತಿ ಕನ್ನಡ ಟೈಮ್ಸ್‌ನಲ್ಲಿ ಪ್ರಕಟವಾಗುವ ಸ್ವತಂತ್ರ ಕನ್ನಡ ಲೇಖನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಇಂಗ್ಲಿಷ್ ಟೈಮ್ಸ್‌ನಲ್ಲೂ ಯಾಕೆ ಹಾಕಬಾರದು?" ಎಂಬುದೇ ಚೊಕ್ಕಾಡಿಯವರ ವಾದ.

ಹೊಡೆದಪ್ಪಗಳಿಗಿಂತಾ ಜಗಳಗಂಟರೆ ವಾಸಿ ಅಲ್ಲವೆ?

ವಿಕ-ಚೆಡ್ಡಿ ಬುದ್ಧಿ- ರೋಲ್‌ಕಾಲ್ ವೀರರು

ಈ ಗದ್ದಲದಲ್ಲಿ ಮಾರ್ವಾಡಿಗಳ ಆಡಳಿತದಡಿ ಸಿಕ್ಕಿಬಿದ್ದರೂ ಅದೃಷ್ಟಶಾಲಿಗಳೆಂದರೆ ವಿಜಯ ಕರ್ನಾಟಕದವರು. ಮಾಲೀಕ ಬದಲಾದರೂ ಸಿಬ್ಬಂದಿ ಬದಲಾಗಲಿಲ್ಲ, ಅವರ ಚಡ್ಡಿ ಬುದ್ಧಿಯೂ ಹೋಗಲಿಲ್ಲ.

ಈಗಿನ ಕಾರ್ಯನಿರ್ವಾಹಕ ಸಂಪಾದಕ ವಿಶ್ವೇಶ್ವರ ಭಟ್‌ರ ಒಪ್ಪಂದದ ಅವಧಿ ಕೆಲದಿನಗಳ ಹಿಂದೆ ಮುಗಿದಾಗ ಟೈಮ್ಸ್ ಧಣಿಗಳು ಬೇರೆ ಸಂಪಾದಕರನ್ನು ಆ ಜಾಗಕ್ಕೆ ತರಲು ಯೋಚಿಸಿದ್ದರಂತೆ. ಆದರೆ ಭಟ್ ತಮ್ಮ ಮಿತ್ರ ಅನಂತ್‌ಕುಮಾರರ ಪ್ರಭಾವ ಬಳಸಿ ಬಿಜೆಪಿ ಅಧ್ಯಕ್ಷ ರಾಜನಾಥ್ ಸಿಂಗರಿಂದ ದೆಹಲಿಯ ಟೈಮ್ಸ್ ಮಾಲೀಕರಿಗೆ ಹೇಳಿಸಿ ತಮ್ಮ ಸ್ಥಾನ ಉಳಿಸಿಕೊಂಡರೆಂದು ಹೇಳಲಾಗುತ್ತಿದೆ.

ಅದೇನೆ ಇರಲಿ, ತಮಾಷೆ ಏನೆಂದರೆ ಪ್ರತಾಪ ಸಿಂಹ ಎಂಬ ಅಂಕಣಕಾರನದ್ದು, ಈ ಹಿಂದೂ ಬಾಲಕ ಮೊನ್ನೆ ಹಿಂದೂ ಸಮಾಜೋತ್ಸವ ಹಾಗೂ 'ಗುರೂಜಿ' ಗೊಲ್ವಾಲ್ಕರ್ ಬಗ್ಗೆ ಬರೆಯುತ್ತಾ ಅಂಬೇಡ್ಕರ್ ಎಲೆಕ್ಷನ್‌ಗೆ ನಿಂತಿದ್ದಾಗ RSSನವರೆಲ್ಲಾ ಬಹಳ ಓಡಾಡಿ ಅಂಬೇಡ್ಕರ್‌ಗೆ ಜನ ಓಟು ಹಾಕುವಂತೆ ಮಾಡಿದ್ದರು ಎಂದು ಬರೆದು ಬಿಟ್ಟಿದ್ದಾನೆ.

ಆದರೆ ಕರ್ನಾಟಕದ ಜನ ಇಂತ ಕಾಗಕ್ಕ ಗುಬ್ಬಕ್ಕರ ಕಲ್ಪಿತ ಕತೆಗಳನ್ನು ನಂಬುವಷ್ಟು ದಡ್ಡರಲ್ಲ, ವಿಕ ಸಂಪಾದಕರಾದ ವಿಶ್ವೇಶ್ವರ ಭಟ್ ಇಂತಾದ್ದನ್ನೆಲ್ಲಾ ಪ್ರಕಟಿಸುವ ಮೊದಲು ಒಮ್ಮೆ ಚೆಕ್ ಮಾಡಿಕೊಂಡರೆ ಒಳಿತು, ಇಲ್ಲದಿದ್ದರೆ ವಿಜಯ ಕರ್ನಾಟಕಕ್ಕೂ, ಹೊಸ ದಿಗಂತಕ್ಕೂ ಯಾವ ವ್ಯತ್ಯಾಸವೂ ಇರುವುದಿಲ್ಲ ಅಲ್ಲವೆ?


ಅಂದಹಾಗೆ ಸುದ್ದಿಗಿಂತ ಆದಾಯವೇ ಮುಖ್ಯ ಎನ್ನುವ ವಿಕದ ಮಾರ್ವಾಡಿ ಮಾಲೀಕರ ಪಾಲಿಸಿಯನ್ನು ಅಲ್ಲಿನ ಮಂಡ್ಯ ಮೂಲದ ವರದಿಗಾರನೊಬ್ಬ ಚಾಚೂ ತಪ್ಪದೇ ಪಾಲಿಸಲು ಶುರು ಮಾಡಿಬಿಟ್ಟಿದ್ದಾನೆ.

ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಡಿಗ್ರಿ ಕಾಲೇಜ್ ಲೆಕ್ಚರರ್‌ಗಳ ನೇಮಕಾತಿ ಸಂದರ್ಶನದಲ್ಲಿ ಪಾಸ್ ಮಾಡಿಸಿ ಕೆಲಸ ಕೊಡಿಸುವುದಾಗಿ ಅಭ್ಯರ್ಥಿಗಳನ್ನು ನಂಬಿಸಿ ತಲಾ 5 ಲಕ್ಷದಂತೆ ವಸೂಲಾತಿಗಿಳಿದು ಬಿಟ್ಟಿದ್ದಾನೆ. ಇವನ 'ಪ್ರಕಾಶ'ಮಯವಾದ ಡೀಲ್‌ಗಳ ಬಗ್ಗೆ ಡಜನ್‌ಗಟ್ಟಲೇ ಕತೆಗಳು ಕೇಳಿ ಬರುತ್ತಿವೆ.

ಯಥಾ ರಾಜಾ ತಥಾ ಪ್ರಜಾ!

ಈಗ್ಗೆ ಸರಿಯಾಗಿ ಆರು ತಿಂಗಳ ಹಿಂದೆ ಟೈಮ್ಸ್ ಆಫ್ ಇಂಡಿಯಾದ ಮಾರ್ವಾಡಿಗಳಿಂದ 171 ಕೋಟಿ ಈಸಿಕೊಂಡು ತೆರೆಮರೆಗೆ ಸರಿದ ವಿಜಯ ಸಂಕೇಶ್ವರ್ ಇವತ್ತಿನವರೆಗೂ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಈ ನಡುವೆ ಸಂಕೇಶ್ವರ್‌ಗೆ ಬೇಡದ ಕೂಸುಗಳಾಗಿದ್ದ ವಿಜಯ ಕರ್ನಾಟಕ, ಉಷಾಕಿರಣ ಹಾಗೂ ವಿಜಯ್ ಟೈಮ್ಸ್‌ಗಳನ್ನು ಖರೀದಿಸಿದ್ದ ಟೈಮ್ಸ್ ಧಣಿಗಳು ಉಷಾಕಿರಣವನ್ನು ಮುಗಿಸಿದ್ದಾರೆ. ಇನ್ನೇನು ಇಂದೋ ನಾಳೆಯೋ ವಿಜಯ್ ಟೈಮ್ಸ್ ಕೂಡ mercy killing ಗೆ ಈಡಾಗಲಿದೆ. ಇಲ್ಲೂ ಒಂದು ನೂರೈವತ್ತು ಮಂದಿ ಸಿಬ್ಬಂದಿಯ ಕತೆ ಹರಹರಾ ಶ್ರೀ ಸಂಕೇಶ್ವರಾ....!

ವಿಮಾನಯಾನ ಕಂಪನಿ ಶುರು ಮಾಡ್ತೀನಂತ ಅವತ್ತು ಬೀಸುಗಾಲಾಕಿಕೊಂಡು ಹೋದ ಸಂಕೇಶ್ವರ್ ಆಮೇಲೆ ಏನು ಮಾಡಿದರೆಂಬುದು ಇವತ್ತಿನವರೆಗೂ ಯಾರಿಗೂ ಗೊತ್ತಾಗಲೇ ಇಲ್ಲ. ರಸ್ತೆ ಮೇಲೆ ಅವರ VRL ಬಸ್ಸು-ಲಾರಿಗಳು ಕಂಡವಾಗಲಿ ಗಾಳಿಯಲ್ಲಿ ವಿದ್ಯುತ್ತೂ ಹುಟ್ಟಲಿಲ್ಲ, ಆಕಾಶದಲ್ಲಿ ವಿಮಾನಗಳೂ ಕಾಣಿಸಲಿಲ್ಲ.



ಸಂಕೇಶ್ವರ್ ಎಲ್ಲಿ?

ಹೀಗೆ ಸಂಕೇಶ್ವರರದ ಪತ್ರಿಕೋದ್ಯಮದ venture ನಂಬಿಕೊಂಡು ಇದ್ದ ಕೆಲಸಗಳನ್ನೆಲ್ಲಾ ಬಿಟ್ಟು ಬಂದಿದ್ದ ನೂರಾರು ಪತ್ರಕರ್ತರಿಗೆ ಮೋಕ್ಷ ತೋರಿಸಿ ಗಾಳಿ ವಿದ್ಯುತ್, ವಿಮಾನಯಾನ ಕಂಪನಿ ಶುರು ಮಾಡ್ತೀನಂತ ಅವತ್ತು ಬೀಸುಗಾಲಾಕಿಕೊಂಡು ಹೋದ ಸಂಕೇಶ್ವರ್ ಆಮೇಲೆ ಏನು ಮಾಡಿದರೆಂಬುದು ಇವತ್ತಿನವರೆಗೂ ಯಾರಿಗೂ ಗೊತ್ತಾಗಲೇ ಇಲ್ಲ. ರಸ್ತೆ ಮೇಲೆ ಅವರ VRL ಬಸ್ಸು-ಲಾರಿಗಳು ಕಂಡವಾಗಲಿ ಗಾಳಿಯಲ್ಲಿ ವಿದ್ಯುತ್ತೂ ಹುಟ್ಟಲಿಲ್ಲ, ಆಕಾಶದಲ್ಲಿ ವಿಮಾನಗಳೂ ಕಾಣಿಸಲಿಲ್ಲ. ಈ ಮಧ್ಯೆ ಸಂಕೇಶ್ವರರ ಮಗ ಯಂಗ್ ಆನಂದ್ ಸಂಕೇಶ್ವರ್ ಪದೇ ಪದೇ ಮುಂಬೈಗೆ ಓಡಾಡುತ್ತಿರುವುದನ್ನು ಕಂಡು ಕೆಲವು ಕುಹಕಿಗಳು "ಅದು ಜಾಹೀರಾತು ಏಜನ್ಸಿ, ಮಾಡೆಲ್‌ಗಳ ಜಗತ್ತಿನ ಲೀಲೆ ಐತ್ರಿ" ಎಂದು ತಮಾಷೆ ಮಾಡುತ್ತಿದ್ದಾರೆ. ಈ 'ಸೈಡ್' ಬ್ಯುಸಿನೆಸ್ ವ್ಯವಹಾರದಲ್ಲಿ ಆನಂದ್ ಹಲವು ಹತ್ತುಲಕ್ಷ ಕರಗಿಸಿದ್ದಾರೆಂಬ ಪುಕಾರೂ ಈಗ ಜಗಜ್ಜಾಹೀರಾದ ವಿಚಾರ.



ಆನಂದ್ ಸಂಕೇಶ್ವರ್

NRI ಸಾಲ- ಸಂಕಟ

ಕೈಲಿ ಯಥೇಚ್ಛ ದುಡ್ಡಿದ್ದರೂ ಹೊಸ ಸಾಲ ಸಿಗುತ್ತದೆಂದರೆ ಅದಕ್ಕೆ ಕೈ ಒಡ್ಡಲು ಸಂಕೇಶ್ವರ ಸದಾ ರೆಡಿ. ಇದು ಅವರು ಕಟ್ಟಿರುವ ಬ್ಯುಸಿನೆಸ್ ಸಾಮ್ರಾಜ್ಯದ ಜಾಯಮಾನವೂ ಹೌದು, ಕಂಪನಿಯ ಹಸಿವೂ ಹೌದು. ಆ ಜಾಯಮಾನಕ್ಕೆ ತಕ್ಕಂತೆ ಸಂಕೇಶ್ವರ ಸದ್ಯಕ್ಕೆ ತಮ್ಮ ಗಾಳಿ, ವಿದ್ಯುತ್, ವಿಮಾನಗಳನ್ನು ಎಲ್ಲಿವೆಯೋ ಹೇಗಿದ್ದವೋ ಹಾಗೆ ನಿಲ್ಲಿಸಿ ಈಗ ತಾವೇ ಮುಂಬೈಗೆ ಹಾರಿ ಹೋಗಿದ್ದಾರೆ. ಅಲ್ಲವರು ಆಸ್ಟ್ರೇಲಿಯಾದಲ್ಲಿರುವ NRI ಲಿಂಗಾಯತ ಸ್ಥಿತಿವಂತರನ್ನು ಭೇಟಿ ಮಾಡುತ್ತಿದ್ದಾರೆ. ಈ NRI ಲಿಂಗಾಯತರ ಪಾಲಿಗೆ ಇನ್‌ವೆಸ್ಟ್‌ಮೆಂಟ್‌ನಂತೆ ಭಾಸವಾಗುವ ಆದರೆ ಸಂಕೇಶ್ವರ ಪಾಲಿಗೆ ಸಾಲದ ರೂಪದಲ್ಲಿರುವ ಹಣಕಾಸಿನ ವ್ಯವಹಾರವನ್ನೂ ಅಲ್ಲಿ ಕುದುರಿಸುವ ಪ್ರಯತ್ನ ನಡೆದಿದೆ.

ಉತ್ತರ ಕರ್ನಾಟಕದಿಂದ ವಿದೇಶಗಳಿಗೆ ಹೋಗಿ ನೆಲೆಸಿರುವ ಪೈಕಿ ಬಹುತೇಕರು ಲಿಂಗಾಯತರೇ. ಇಂಗ್ಲೆಂಡ್, ಅಮೆರಿಕಾ, ಆಸ್ಟ್ರೇಲಿಯಾ ಸೇರಿ ಭಾರಿ ದುಡ್ಡು ಸಂಪಾದಿಸಿರುವ ಈ NRIಗಳಿಗೆ ತಮ್ಮ ಬಳಿ ರಾಶಿ ಬಿದ್ದಿರುವ ಹಣದಿಂದ ಬೇಗ ಬೇಗ ಮರಿ ಹಾಕಿಸುವ ತವಕ. ಹೀಗೆ ಹಣ ಇದ್ದೂ ಅದನ್ನು ತಾವೇ ಸ್ವತಃ ಲಾಭದಾಯಕವಾಗಿ ನಿರ್ವಹಿಸಲಾಗದಂತವರನ್ನು ಹಿಡಿದು ಆ ಹಣವನ್ನು ಸಾಲದ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆ ವಿಜಯ ಸಂಕೇಶ್ವರ್. ಇವತ್ತು ಯಾವುದೇ ವಿದೇಶಿ ಬ್ಯಾಂಕುಗಳಲ್ಲಿ ಒಂದು ಪರ್ಸೆಂಟ್ ನಷ್ಟೂ ಬಡ್ಡಿ ಗಿಟ್ಟುವುದಿಲ್ಲ. ಅದರ ಬದಲು ಯಶಸ್ವಿ ಉದ್ದಿಮೆದಾರನೊಬ್ಬನಿಗೆ ಕೊಟ್ಟಲ್ಲಿ ಆತನಿಂದ ಬೇಗನೆ ಹಣ ಮರಿ ಹಾಕಿಸಿ ಜಾಸ್ತಿ ಲಾಭ ಪಡೆಯುವ ತವಕ ಅವರಿಗೆ. ಸಂಕೇಶ್ವರ ಅದಕ್ಕೆ ಸರಿಯಾದ ಜಾಣ ವ್ಯವಹಾರಸ್ಥ ಎಂಬ ನಂಬಿಕೆ ಅವರದ್ದು. ಅಂತಾ ನಂಬಿಕೆಗೆ ಚ್ಯುತಿ ಬರುವಂತೆ ಸಂಕೇಶ್ವರ ನಡೆದುಕೊಂಡೂ ಇಲ್ಲ ಎಂಬುದೂ ಸತ್ಯ. ಸಂಕೇಶ್ವರ ಕೈ ಹಾಕುವ ಯಾವುದೇ ಹೊಸ ಬ್ಯುಸಿನೆಸ್ಸೇ ಆಗಲಿ ಅದು ಈಗಿನ ವ್ಯವಹಾರದ ಸಪೋರ್ಟ್ ಪಡೆದುಕೊಂಡೇ ಇನ್ನೊಂದರತ್ತ ಕೈಚಾಚಿರುತ್ತದೆ. ಅವರು VRLಬಸ್ ಶುರು ಮಾಡಿದರು. ಅದಕ್ಕೆ ಪೂರಕವಾದಂತೆ ಓಂಕಾರ್ ಮಿನರಲ್ ವಾಟರ್ ಲಾಂಚ್ ಆಯಿತು. ನಿತ್ಯ ಅವರ ಬಸ್ ಹತ್ತುವ ಪ್ರಯಾಣಿಕರಿಗೆ ಓಂಕಾರ್ ನೀರು ಕೊಟ್ಟರು. ಅಲ್ಲಿಗೆ ಮಿನಿಮಂ ಗ್ಯಾರಂಟಿ ಸೇಲ್ಸ್ ಆದಂತಾಯ್ತಲ್ಲ, ಹೀಗಿದೆ ಅವರ ಜಾಣಾಕ್ಷತನ. ಈಗಿನ NRI ಸಾಲದ ವ್ಯವಹಾರವೂ ಅಷ್ಟೇ.

ಸಾಲದ ಹಣ ಕೊಟ್ಟ NRIಗಳಿಗೆ ಸಮಯಕ್ಕೆ ಸರಿಯಾಗಿ ಬಡ್ಡಿ ಮತ್ತೊಂದನ್ನು ಹೇಗಾದರೂ ಮಾಡಿ, ಕೊನೆಗೆ ಹೊಸ ಸಾಲ ಮಾಡಿಯಾದರೂ ಪಾವತಿಸುತ್ತಾರೆ ಸಂಕೇಶ್ವರ. ಅಷ್ಟೇ ಅಲ್ಲ NRIಗಳು ಭಾರತಕ್ಕೆ ಅಥವಾ ಕರ್ನಾಟಕಕ್ಕೆ ಬಂದಾಗ ಅವರ ಓಡಾಟವೆಲ್ಲಾ ತಮ್ಮ VRL ಬಸ್‌ಗಳ ಮೂಲಕವೇ ಆಗುವಂತೆ ಮಾಡಿಕೊಂಡಿದ್ದಾರೆ. ಹೀಗೆ ವ್ಯಾಪಾರದೊಳಗೊಂದು ವ್ಯಾಪಾರ, ಅದರೊಳಗೊಂದು ಉಪವ್ಯಾಪಾರ ಅದಕ್ಕೊಂದು ಸಹ ವ್ಯಾಪಾರ.... ಹೀಗೆ ಸಾಗುತ್ತಿದೆ ಅವರ ಜೀವನ ವ್ಯಾಪಾರ.

ವಿಮಾನ ಹಾರಲಿಲ್ಲ ಯಾಕೆ?

ತಮ್ಮದೊಂದು ವಿಮಾನಯಾನ ಕಂಪನಿ ಮಾಡಬೇಕೆಂಬ ಆಸೆ ಸಂಕೇಶ್ವರಗೆ ಬಹಳ ಇತ್ತು. 'ಅದು ನನ್ನ ಜೀವಮಾನದ ಆಸೆ' ಅಂತಲೂ ಅವರು ಖಾಸಗಿಯಾಗಿ ಹೇಳಿಕೊಂಡಿದ್ದುಂಟು. ಆದರೆ ಅಂತಾದ್ದೊಂದು ಸಾಧ್ಯತೆ ಈಗ ಕ್ಷೀಣಿಸುತ್ತಿದೆ. ಬಿಜೆಪಿ ನಾಯಕ ಅನಂತಕುಮಾರ್

ಬಳಿದಾಳೆ ಈಶ

ಹಾಗೂ ಸಂಕೇಶ್ವರ ಮಧ್ಯೆ ಜಗಳ ಬರಲಿಕ್ಕೂ ಇದೇ ಕಾರಣ ಅಂತಾ ಬಲ್ಲವರ ಅಂಬೋಣ. ವಿಷಯವೇನೆಂದರೆ ಅನಂತಕುಮಾರ್ ಎನ್‌ಡಿಎ ಸರ್ಕಾರದಲ್ಲಿ ನಾಗರಿಕ ವಿಮಾನಯಾನ ಸಚಿವರಾಗಿದ್ದಾಗಲೇ ಸಂಕೇಶ್ವರ್‌ಗೆ ಈ ಯೋಚನೆ ಬಂದಿತ್ತು. ವಿಮಾನ ಕ್ಷೇತ್ರಕ್ಕೂ ಖಾಸಗಿಯವರಿಗೆ ಅವಕಾಶಗಳು ತೆರೆದುಕೊಂಡಿದ್ದ ಕಾಲ ಅದು. ಆಗಲೇ ತಾವೂ ಕೂಡಾ ಬಿಜೆಪಿ ಸರ್ಕಾರದಿಂದ ಸಾಧ್ಯವಾದಷ್ಟು ನೆರವು, ಪರ್ಮಿಷನ್ನೂ ಎಲ್ಲಾ ಪಡೆದುಕೊಂಡು ಬಿಡಬೇಕೆಂದು ಸಂಕೇಶ್ವರ ಬಯಸಿದ್ದರು.

ಆದರೆ ಅನಂತ್ ಬೆಂಗಳೂರಿನ ಇನ್ನೊಂದು ಖಾಸಗಿ ವಿಮಾನ ಕಂಪೆನಿ ಡೆಕ್ಕನ್ ಏವಿಯೇಷನ್‌ಗೆ ಕೃಪೆ ತೋರಿದರೆ ವಿನಃ ಸಂಕೇಶ್ವರ ಕಡೆ ತಿರುಗಿಯೂ ನೋಡಲಿಲ್ಲ. ಇವರಿಬ್ಬರ ಜಗಳದ ಬೇರುಗಳಿರುವುದೇ ಇಲ್ಲಿ ಎನ್ನಲಾಗುತ್ತಿದೆ. ಅದಿರಲಿ ಕ್ಯಾಪ್ಟನ್ ಗೋಪಿನಾಥರ ಡೆಕ್ಕನ್ ವಿಮಾನಗಳು ಈಗ ನಿತ್ಯ ಗದ್ದೆ ಬಯಲು, ಕೆರೆ, ಕುಂಟೆಗಳಲ್ಲಿ ಲ್ಯಾಂಡ್ ಆಗುತ್ತಾ ಸೇಫ್ಟಿಯಲ್ಲಿ VRL ಲಾರಿಗಳೇ ವಾಸಿ ಎಂಬ ಭಾವನೆ ಮೂಡಿಸಿಬಿಟ್ಟಿವೆ ಬಿಡಿ.

ಇವತ್ತು ಒಂದು ಹೊಸ ವಿಮಾನಯಾನ ಸಂಸ್ಥೆ ಶುರು ಮಾಡುವುದೆಂದು ಹುಡುಗಾಟದ ಮಾತಲ್ಲ, ಕನಿಷ್ಠ 5 ಸಾವಿರ ಕೋಟಿ ಬಂಡವಾಳ ಕೇಳುವ ವ್ಯವಹಾರ ಅದು. ಅಷ್ಟು ಹಣ ಸಾಲ ಎತ್ತಿ ವಿಮಾನ ಓಡಿಸುವ ದಡ್ಡ ನಿರ್ಧಾರ ಮಾಡಲಾರರೇನೋ ಸಂಕೇಶ್ವರ. ಜೊತೆಗೆ ಅವ[...] ಬಿಜೆಪಿ-ಕಾಂಗ್ರೆಸ್ ಎರಡರಲ್ಲೂ ಇಲ್ಲ, ಗತಿಗೆಟ್ಟ [...] ಪಾರ್ಟಿ ಜೆಡಿಎಸ್‌ನಲ್ಲಿದ್ದಾರೆ. ಅಪ್ಪಿತಪ್ಪಿ ದೇವೇಗೌ[...] ಹತ್ತಿರ ಹೋಗಿ ವಿಮಾನ ಸಂಸ್ಥೆ ಮಾಡ್ತೀನಿ ಪರ್ಮಿ[...] ಕೊಡಿಸಿ ಎಂದು ಕೇಳಿ ಬಿಟ್ಟರೆ ಗೌಡರು 'ನ[...] ನಿಖಿಲ್‌ಗೌಡನಿಗೇ ಕೊಡಿಸಿದ್ರೆ ಹೇಗೆ' ಎಂದು ಕೇ[...] ತ್ತಾರೆಯೇ ವಿನಃ ಸಂಕೇಶ್ವರಗೆ ನೆರವಾಗುವುದ[...] ಸುಳ್ಳು.

ಇನ್ನು ಗಾಳಿ ವಿದ್ಯುತ್ ಯೋಜನೆ. ಗದಗ್ ಜಿ[...] ನರಗುಂದ ಬಳಿ ಈ ಯೋಜನೆಗೆಂದು ಜಾಗ ಗುರು[...] ಕೆಲಸ ಶುರು ಮಾಡಬೇಕೆಂಬಷ್ಟರಲ್ಲಿ ಕಳೆದ ತಿಂ[...] ಅಲ್ಲೊಂದು ಗಲಾಟೆ ಆಗಿದೆ.

ಪ್ರಾಚೀನ ಅವಶೇಷಗಳಿರುವ ಸ್ಥಳವೊಂದಕ್ಕೆ [...] ಆಗಿದೆ ಎಂದು ಕೆಲ ಪರಿಸರವಾದಿಗಳು ಸಂಕೇ[...] ಗಾಳಿ ವಿದ್ಯುತ್ ಯೋಜನೆ ವಿರುದ್ಧ ಪ್ರತಿಭಟ[...] ದ್ದಾರೆ.

ಕರೆಂಟು ಉತ್ಪಾದನೆ ಶುರುವಾಗುವ ಮೊ[...] ಈ ಯೋಜನೆಗೆ ಜನ ಕರೆಂಟ್ ಹೊಡಿಸಿಬಿಟ್ಟಿದ[...]

ರಾಜಕೀಯ ನಿರಾಶ್ರಿತ

ಕಳೆದ 10 ವರ್ಷಗಳು ಸಂಕೇಶ್ವರ ಪಾ[...] ಮುಟ್ಟಿದ್ದೆಲ್ಲಾ ಚಿನ್ನ. VRL ಲಾರಿ, ಕೊರಿಯ[...] ಸರ್ವೀಸ್, ಬಸ್ಸು, ಕೊನೆಗೆ ಪತ್ರಿಕೆಗಳು, ಜೆ[...] ರಾಜಕೀಯ ಇವೆಲ್ಲದರಲ್ಲೂ ಯಶಸ್ವಿಯಾಗಿದ್ದ[...] ಸಂಕೇಶ್ವರ್.

ಆದರೆ ಈಗ ಅವರ ಜೊತೆ ಉಳಿದಿರು[...] ಬಸ್ಸು-ಲಾರಿ ಎರಡೇ. ಪತ್ರಿಕೆಗಳಿಂದ ತಾವೇ ದೂರ[...] ಸಂಕೇಶ್ವರ ಕನ್ನಡ ನಾಡು ಪಾರ್ಟಿ ಉಳಿಸಿಕೊಂಡರಾ[...] ಜನ ಹತ್ತಿರ ಬರಲಿಲ್ಲ, ಈಗ ಜೆಡಿಎಸ್ ಅವರ ಪಾ[...] ಆದರೆ ಕೈಲಿ ಮೊದಲಿದ್ದಂತೆ ಪ್ರಭಾವಶಾಲಿ ಪತ್ರಿಕೆ[...] ಜನಬೆಂಬಲ, ದುಡ್ಡು ಪ್ರಭಾವ ಇಲ್ಲದ ಯಾ[...] ದೇವೇಗೌಡ ಬೆಲೆ ಕೊಡುವುದಿಲ್ಲ ಎಂಬುದು ಎಲ್ಲ[...] ಗೊತ್ತು.

ಹಾಗಾಗಿ ಸಂಕೇಶ್ವರ್‌ಗೆ ಈಗ ಜೆಡಿಎಸ್‌ನಲ್ಲಿ[...] ಆಟಕ್ಕುಂಟು ಲೆಕ್ಕಕ್ಕಿಲ್ಲವೆಂಬ ಸ್ಥಿತಿ!

ದೊಡ್ಡ ಉದ್ಯಮ ಸಾಮ್ರಾಜ್ಯವಿದ್ದರೂ [...] ಮಾಡದೇ ಮುಂದುವರೆಯಲಾಗದ ದುಃಸ್ಥಿತಿ!

ಕೊನೆಯದಾಗಿ,...

ಸಂಕೇಶ್ವರ್ ಈಗ ವಿದೇಶಿ ಕನ್ನಡಿಗರ ಹತ್ತಿರ [...] ಸಾಲ ಎತ್ತುತ್ತಿದ್ದಾರೆಂದರೆ ಸ್ವದೇಶಿ ಕನ್ನಡಿಗರಿಂ[...] ಈಗಾಗಲೇ ಸಾಲ ಮಾಡಿ ಮುಗಿದಿದೆ ಅದಕ್ಕೆ [...] ತಮಾಷೆಯಾಗಿ ಹೇಳಲಾಗುತ್ತಿದೆ.

ತಮಾಷೆಯ ಮಾತು ಪಕ್ಕಕ್ಕಿಟ್ಟು ಹೇಳಬೇಕ[...] ಇಂತದ್ದನ್ನೆಲ್ಲಾ ಚತುರತೆಯಿಂದ ನಿಭಾಯಿಸುವಷ್ಟು[...] ಅವರಿಗಿದೆ. ಅವರ ಬಗ್ಗೆ ಕನ್ನಡದ ಜಾಣ ಓದು[...] ಆಕ್ಷೇಪಣೆ ಒಂದೇ: ಅದು ಸುಳ್ಳು ಬುರುಕರೂ, ರೋ[...] ಕೋಮುವಾದಿ ಮನಸ್ಸಿನವರನ್ನೆಲ್ಲಾ ಕರೆ[...] ಪತ್ರಕರ್ತರನ್ನಾಗಿಸಿ ಕನ್ನಡಿಗರ ಮೇಲೆ ಹೇರಿ ಹ[...] ರೆಂಬುದಷ್ಟೆ.

ಆನಂದ್-ಏಕಾಂಗಿ ಸಂಚಾರಿ

ವಿಜಯ ಕರ್ನಾಟಕವನ್ನು ಮಾರಿದ ಮೇಲೂ ಸಂಕೇಶ್ವರ್ ಮಗ ಆನಂದ್ ಸಂಕೇಶ್ವರ್ ಈಗಲೂ ಈ ಪತ್ರಿಕಾ ಸಮೂಹದ ಡೈರೆಕ್ಟರ್‌ಗಳಲ್ಲಿ ಒಬ್ಬರಾಗಿದ್ದಾರೆ. ಆದರೆ ಕಾನೂನುಬದ್ಧವಾದ ಯಾವ ಹಕ್ಕುಗಳೂ ಆನಂದ್‌ಗಿದ್ದಂತೆ ಕಾಣೆ. ತೀರಾ ಇತ್ತೀಚೆಗೆ ಟೈಮ್ಸ್ ಗ್ರೂಪಿನ ದೆಹಲಿ ಆಫೀಸಿನಿಂದ ಕೆಲವು ಮಾರ್ಕೆಟಿಂಗ್ ತಜ್ಞರು ಬೆಂಗಳೂರಿಗೆ ಬಂದು ವಿಟ್ರಿಯಾ ಹೋಟೆಲ್‌ನಲ್ಲಿ ಕನ್ನಡ ಟೈಮ್ಸ್ ಆಫ್ ಇಂಡಿಯಾ ಸಿಬ್ಬಂದಿಗೆ ಪಾಠ ಮಾಡಿ ಹೋಗಿದ್ದಾರೆ. ಆವತ್ತಿನ ಸಭೆಯಲ್ಲಿ ಆನಂದ್ ಕೂಡ ಇದ್ದರಾದರೂ ಆತನದೇನೂ ಪಾತ್ರವಿರಲಿಲ್ಲ, ಟೈಮ್ಸ್ ಅಧಿಕಾರಿಗಳು ಕಾಟಾಚಾರಕ್ಕೆ ಆನಂದ್‌ರನ್ನು ಪರಿಚಯಿಸಿ ನಂತರ ಕರೆದೊಯ್ದು ಒಂದು ಮೂಲೆಯಲ್ಲಿ ಕೂರಿಸಿದ್ದಾರೆ. ಕೊನೆಗೆ ಲಂಚ್ ಸಮಯದಲ್ಲೂ ಆನಂದ್ ಒಬ್ಬರೆ ಊಟ ಮಾಡಬೇಕಾಗಿ ಬಂದಿದೆಯೇ ವಿನಃ ಅವರೊಂದಿಗೆ ಟೈಮ್ಸ್ ಎಗ್ಸಿಕ್ಯೂಟಿವ್ಸ್‌ಗಳಾಗಲಿ ಕೊನೆಗೆ ಟೈಮ್ಸ್‌ನ ಕನ್ನಡ ಪತ್ರಕರ್ತರಾಗಲಿ ಮಾತೂ ಆಡಿಲ್ಲ.

ಟೈಮ್ಸ್ ಗ್ರೂಪ್‌ನೊಳಗೆ ಆನಂದ್ ಸಂಕೇಶ್ವರ್‌ಗಿರುವ ಪ್ರಾಮುಖ್ಯತೆ ಇದು. ಹಾಗಾದರೆ ಆನಂದ್ ಸಂಕೇಶ್ವರ್‌ರನ್ನು ಟೈಮ್ಸ್‌ನವರು ತಮ್ಮ ನಿರ್ದೇಶಕರುಗಳಲ್ಲಿ ಒಬ್ಬರೆಂದು ಒಪ್ಪಿಕೊಂಡಿದ್ದಾದರೂ ಏಕೆ?

ಟೈಮ್ಸ್ ಮಾರ್ವಾಡಿಗಳು ಚೋಟಾ ಮೋಟಾಗಳನ್ನೆಂದೂ ಪಾಲುದಾರಿಕೆಗೆ ಆಹ್ವಾನಿಸುವುದಿಲ್ಲ, ಬಹುಶಃ ಏಕದ outright ಮಾರಾಟ ಮಾಡುವಾಗ ವಿಜಯ ಸಂಕೇಶ್ವರ್ ಏನಾದರೂ, ಹಣದೊಂದಿಗೆ ತಮ್ಮ ಮಗನಿಗೂ ನಿರ್ದೇಶಕ ಸ್ಥಾನ ಬೇಕೆಂದು bargain ಮಾಡಿದ್ದಿರಬಹುದಾ?

ಬೇರಿನ್ನೆತಕ್ಕಲ್ಲವಾದರೂ ಆನಂದ್‌ರದ್ದು ಮುಂಬೈನಲ್ಲಿ ಮಾಡೆಲಿಂಗ್ ಮತ್ತು ಆಡ್ ಏಜನ್ಸಿಗಳೆಂಬ ಸಾಂಸ್ಕೃತಿಕ ಚಟುವಟಿಕೆಗಳಿವೆಯಲ್ಲ, ಅದನ್ನಾದರೂ ಬೆಳೆಸಲೆಂಬ ಮುಂದಾಲೋಚನೆಯೂ ಇರಬಹುದಾ!

ಕ್ರೈಂ ಸ್ಟೋರಿಯ ಬಾಲಕೃಷ್ಣ ಕಾಕತ್ಕರ್‌ರವರ ...ಜೀವನದ ಬದುಕಿನಲ್ಲಿ ಸಂಕಟಮಯ ದುರಂತ ...ವೆ. ಅವರ ಪತ್ನಿ ರಶ್ಮಿ ಯಾನೆ ಮನೋರಮಾ ...ನಾಗುತ್ತ ಘೋರ ವಿಷ ಸೇವಿಸಿ ಸಾವಿಗೆ ಶರಣಾಗಿ ... ದಾಂಪತ್ಯದಲ್ಲಿನ ಮುನಿಸು-ಮನಸ್ತಾಪ ...ವಾಗಿ ಅವರು ಹೀಗೆ ...ಹತ್ಯೆ ಮಾಡಿಕೊಂಡರಾ ... ಭಾವಿಸು ವಷ್ಟರಲ್ಲೇ ...ನೋರಮಾರ ಸಾವಿನ ಸುದ್ದಿ ... ಅವರ ... ...ದೂಶೇಖರ ಭಿಡೆ ...ಬುವರು ಅಂತದ್ದೇ ವಿಷ ...ವಿಸಿದ್ದಾರೆ. ಮಾಗಡಿ ಹತ್ತಿರದ ...ವರೆಕೆರೆಯಲ್ಲಿ ವಾಸವಿದ್ದ ...ದೂಶೇಖರ್ ಓರ್ವ ಪುಟ್ಟ ...ದ್ಯಮಿ. ಕಾಕತ್ಕರ್ ಪತ್ನಿ ...ನೋರಮಾರೊಂದಿಗೆ ...ಪಾರ್ಟನರ್‌ಶಿಪ್‌ನಲ್ಲಿ ಬ್ಯುಸಿನೆಸ್ ...ವನ್ನು ನಡೆಸುತ್ತಿದ್ದಾತ. ಹೀಗೆ ...ರ್ಧ ಗಂಟೆ ಅಂತರದಲ್ಲಿ ...ಬ್ಬರೂ ಜೀವ ತೊರೆದ ಮೇಲೆ ಅವರ ಸಾವಿನ ...ಣಗಳೂ ಮತ್ತಷ್ಟು ನಿಗೂಢವಾಗಿ ಹೋದವು.

ವಿಎಚ್‌ಎಸ್ ಕ್ಯಾಸೆಟ್ ಹಾಗೂ ಸಿಡಿಗಳನ್ನು ...ಡಿಯಾಗಿ ಪರಿವರ್ತಿಸುವ ಬ್ಯುಸಿನೆಸ್ ಒಂದನ್ನು ...ನೋರಮಾ ಹಾಗೂ ಇಂದೂಶೇಖರ್ ಆರಂಭಿಸಿದ್ದರು.


ಪತ್ನಿ ರಶ್ಮಿ(ಮನೋರಮಾ)


ಇನ್ಸ್‌ಪೆಕ್ಟರ್ ಚಂದ್ರಪ್ಪ

ಅದರಲ್ಲಿ ಉಂಟಾದ ಭಾರಿ ನಷ್ಟವೇ ಆತ್ಮಹತ್ಯೆಗೆ ಕಾರಣ ಎನ್ನಲಾಗುತ್ತಿದೆ.

ಆದರೆ ಗಾಂಧಿಬಜಾರಿನ ಡಿವಿಜಿ ರಸ್ತೆಯಲ್ಲಿದ್ದ IT pacific ಎಂಬ ಈ ಸಂಸ್ಥೆ ಲಾಭ ಮಾಡುತ್ತಿತ್ತು. ಮನೋರಮಾ ತಮ್ಮದೇ ಉಳಿತಾಯದ ಒಂದಷ್ಟು ಹಣ ಇದರಲ್ಲಿ ಹೂಡಿದ್ದರು. ಇಂದೂಶೇಖರ್ ಆರಂಭಿಸಿದ್ದ ಈ ಉದ್ಯಮಕ್ಕೆ ತಾವೊಂದಿಷ್ಟು ಬಂಡವಾಳ ಹೂಡಿ ಮನೋರಮಾ ಪಾಲುದಾರಿಕೆ ಪಡೆದುಕೊಂಡಿದ್ದರು.

ಈ ವ್ಯವಹಾರದಲ್ಲಿ ನಷ್ಟವಾಗಿತ್ತು ಎಂಬ ಕಾರಣಕ್ಕೆ ಮತ್ತು ಅದನ್ನು ಭರಿಸಲಾಗದ್ದಕ್ಕೆ ಮನೋರಮಾ ಜೀವ ತೊರೆದರು ಎನ್ನುವುದಾದರೆ ಅದು ಅಷ್ಟು ನಿಜವಿರಲಾರದು ಎನಿಸುತ್ತದೆ. ಏಕೆಂದರೆ ಕಾಕತ್ಕರ್ ಇವತ್ತು ಅಂತದ್ದನ್ನು ಭರಿಸುವಷ್ಟು ಆರ್ಥಿಕ ಚೈತನ್ಯ ಹೊಂದಿದ್ದರು ಹಾಗೂ ಅದೊಂದೇ ಕಾರಣಕ್ಕೆ ಮನೋರಮಾರನ್ನು ಕಾಕತ್ಕರ್ ಅಸಹಾಯಕರನ್ನಾಗಿ ಬಿಡಲೂ ಬಾರದಿತ್ತಲ್ಲವೇ?


ಅವರ ಹದಿನಾರು ವರ್ಷಗಳ ದಾಂಪತ್ಯ ಜೀವನದಲ್ಲಿ ಸಮೃದ್ಧಿ-ಸುಖ ಎಂಬುದೇನಿದ್ದರೂ ಕಳೆದ ಮೂರ್ನಾಲ್ಕು ವರ್ಷಗಳ ಮಾತಷ್ಟೆ. ಅದಕ್ಕೂ ಮುಂಚಿನ ಕಾಕತ್ಕರ್‌ರ ಎಲ್ಲಾ ಕಷ್ಟಗಳಲ್ಲೂ ಜೊತೆ ನಿಂತು ಅತೀವ ಸಂಯಮ ಹಾಗೂ ಧೈರ್ಯದಿಂದ ಬದುಕಿನ ಹೋರಾಟ ನಡೆಸಿದ್ದ ಹೆಣ್ಣುಮಗಳು ಮನೋರಮಾ. ಆರು ನೂರು ರೂಪಾಯಿಗಳ ಬಾಡಿಗೆಯ ಶೀಟ್ ಮನೆಯಿಂದ ಶುರುವಾಗಿದ್ದ ಅವರ ದಾಂಪತ್ಯ ಜೀವನ ಈಗ ಕೋಟಿ ರೂಪಾಯಿ ಸ್ವಂತ ಬಂಗಲೆಗೆ ತಲುಪಿ ನೆಲೆಗೊಳ್ಳುವಷ್ಟರ ಮಟ್ಟಿಗೆ ಬೆಳೆದಿತ್ತು. ಆದರೆ ಚೆಂದದ ದಾಂಪತ್ಯ ಜೀವನಕ್ಕೆ ಅಷ್ಟೇ ಸಾಕಾಗುವುದಿಲ್ಲವಲ್ಲ. ಪರಸ್ಪರ ಪ್ರೀತಿ ನಂಬಿಕೆ ಹಾಗೂ ಗೌರವಗಳ ಪೋಷಣೆಯೂ ಅದಕ್ಕೆ ಬೇಕಾಗುತ್ತದೆ.

ಮಹಾ ಅಶಿಸ್ತಿನವರಾದರೂ ಕಾಕತ್ಕರ್ ಹೃದಯವಂತ ಮನುಷ್ಯ ಎಂದು ಎಲ್ಲರೂ ನಂಬಿದ್ದರು. ಅದೀಗ ಸುಳ್ಳಾಗಿದೆ. ಅಕಸ್ಮಾತ್ ಇದ್ದರೂ ಅದಕ್ಕೆ ತಕ್ಕಷ್ಟು ವಿವೇಚನಾ ಶಕ್ತಿ ಹಾಗೂ ಸಹನೆ ಅವರಿಗಿತ್ತಾ ಎಂಬುದೇ ಪ್ರಶ್ನೆ. ಕುಡಿತ ಅವರ ಪಾಲಿನ ಅತಿದೊಡ್ಡ ದೌರ್ಬಲ್ಯವಾಗಿದೆ. ಇವತ್ತಿಗೂ ಕೂಡಾ.... ಈ ವಿಚಾರ ಏಕೆಂದರೆ ಈಗ್ಗೆ ಹದಿನಾಲ್ಕು ತಿಂಗಳ ಹಿಂದೆ ಅಂದರೆ 2005ರ ನವೆಂಬರ್‌ನಲ್ಲೂ ಕಾಕತ್ಕರ್ ತಮ್ಮ ಡ್ರೈವರ್ ವೀರೇಶನ ಮೇಲೆ ಗುಂಡು ಹಾರಿಸಿ ಗಾಯಗೊಳಿಸಿದ್ದರು. 2005 ರ ನವೆಂಬರ್ 24 ರ ರಾತ್ರಿ ಯಾವುದೋ ಒಂದು ಸಣ್ಣ ಕಾರಣಕ್ಕೆ ಪ್ರಚೋದನೆಗೊಳಗಾದ ಕಾಕತ್ಕರ್ ಏಕಾಏಕಿ ತಮ್ಮ ಕಿಸೆಯಿಂದ .22 ಗನ್ ತೆಗೆದು ವೀರೇಶನತ್ತ ಗುಂಡು ಹಾರಿಸಿಬಿಟ್ಟಿದ್ದರು. ಬುಲೆಟ್ ವೀರೇಶನ ಕಿವಿ ಕತ್ತರಿಸಿಕೊಂಡು ಪಾಸ್ ಆಯಿತು. ಅವತ್ತು ವೀರೇಶನೊಂದಿಗೆ ಇನ್ನೊಬ್ಬ ಡ್ರೈವರ್ ರಾಜಶೇಖರ, ಆರ್‌ಟಿಓ ಏಜಂಟ್ ಬಾಬು ಮತ್ತಿತರರೂ ಇದ್ದರೆನ್ನಲಾಗಿದೆ. ಇವರೆಲ್ಲಾ ತಮ್ಮ ಮನೆಗೆ ನುಗ್ಗಿ ಹಲ್ಲೆ ಮಾಡಲು ಬಂದಿದ್ದರು. ಅದಕ್ಕೆ ಫೈರ್ ಮಾಡಿಬಿಟ್ಟೆ ಎಂದಿದ್ದರು ಕಾಕತ್ಕರ್. ಆದರೆ ಗುಂಡು ತಾಕಿ ವೀರೇಶ ಸತ್ತೇ ಹೋಗಿದ್ದರೆ ತಮ್ಮ ಸ್ಥಿತಿ ಏನಾಗುತ್ತಿತ್ತೆಂಬ ಬಗ್ಗೆ ಕಾಕತ್ಕರ್ ಯೋಚಿಸಿದಂತೆ ಕಾಣಲಿಲ್ಲ. ಬದಲಾಗಿ ಪೊಲೀಸರು ಅರೆಸ್ಟ್ ಮಾಡಿ 307 ಕೇಸ್ ಮಾಡಿದಾಗ ಹುಷಾರಿಲ್ಲವೆಂದು ವಿಕ್ಟೋರಿಯಾ ಆಸ್ಪತ್ರೆ ಸೇರಿದ್ದರು.

ಅವತ್ತೂ ಕೂಡ ಕಾಕ ಜೊತೆ ನಿಂತು ಸ್ಥೈರ್ಯ ನೀಡಿ ಉಪಚರಿಸಿದ್ದು ಇದೇ ಮನೋರಮಾರವರೇನೆ. ಎಚ್ಚೆತ್ತುಕೊಳ್ಳುವವರಾಗಿದ್ದರೆ ಅವತ್ತೇ ಎಚ್ಚರಾಗುತ್ತಿದ್ದರು. ದಕ್ಕಿದ್ದ ಯಶಸ್ಸು, ಕೀರ್ತಿ ಹಾಗೂ ಹಣವನ್ನು ಜಾಣತನದಿಂದ ಕಾಪಾಡಿಕೊಂಡು ಇನ್ನಷ್ಟು ಎತ್ತರಕ್ಕೇರುವ ಸಾಧ್ಯತೆ ಹುಡುಕಿರುತ್ತಿದ್ದರು. ಆದರೆ ಕಾಕತ್ಕರ್ ಗಮನ ಎಲ್ಲೂ ಕೇಂದ್ರಿಕೃತವಾಗಲಿಲ್ಲ, ಅವರ ಕ್ರೈಂಸ್ಟೋರಿಯಲ್ಲಿ ದೈನಂದಿನ ಎಪಿಸೋಡುಗಳು ಟೆಲಿಕಾಸ್ಟ್ ಆಗುತ್ತಿದ್ದವು. ಕಾಕತ್ಕರ್ ಅಶಿಸ್ತಿನ ದಿನಚರಿಯೂ ಹಿಂದಿನಂತೆ, ಎಂದಿನಂತೆ ಸಾಗೇ ಇತ್ತು. ನಿತ್ಯ ಕುಡಿತ, ಪತ್ನಿಗೆ ಹಿಂಸೆ ಹೀಗೆ..... ಬಹುಶಃ ಮನೋರಮಾರನ್ನು ಘಾಸಿಗೊಳಿಸಿದ್ದು ಇದೇ ಇರಬೇಕು. ರೋಸಿ ಹೋದ ಅವರು ಮನೆಯಿಂದ ಹೊರಗೆ ಕಾಲಿರಿಸಿ ತಮ್ಮದೇ ಸ್ವಂತದ ಪುಟ್ಟದ್ದೇನಾದರೂ ಮಾಡಲು ಹಂಬಲಿಸಿದ್ದಾರೆ. ಅದಕ್ಕೆ ತಕ್ಕಂತೆ ವರಸೆಯಲ್ಲಿ ಅಣ್ಣನಾಗಬೇಕಿದ್ದ ತಾವರೆಕೆರೆಯ ಇಂದೂಶೇಖರ್ ನಡೆಸುತ್ತಿದ್ದ IT Pacific ನಲ್ಲಿ ತಾವೊಂದಿಷ್ಟು ಹಣ ಹೂಡಿ ಪಾಲುದಾರಿಕೆ ಪಡೆದು ಬ್ಯುಸಿನೆಸ್ ಪ್ರಪಂಚಕ್ಕೆ ಕಾಲಿರಿಸಿದ್ದಾರೆ.


ಗುಂಡೇಟು ತಿಂದ ವೀರೇಶ್

ಧರ್ಮಸ್ಥಳ ಹತ್ತಿರದ ಅರಶಿಣಮುಖಿ ಗ್ರಾಮದವರಾದ ಮನೋರಮಾ ಕಾಕತ್ಕರ್‌ರನ್ನು ಮದುವೆಯಾಗಿ ಬೆಂಗಳೂರಿಗೆ ಬಂದ ನಂತರ ಅದೇ ಮೊದಲ ಬಾರಿಗೆ ಸ್ವಂತದನ್ನೇನೊ ಮಾಡಲು ಹೊರಟಿದ್ದರು. ಅದಕ್ಕೂ ಮುನ್ನ ಕಾಕತ್ಕರ್‌ರ ಬನಶಂಕರಿ ಆಫೀಸ್ ಹಾಗೂ ಉತ್ಪಲ್ ಪ್ರೊಡಕ್ಷನ್ಸ್‌ನ ಉಸ್ತುವಾರಿ ನಿರ್ವಹಿಸಿದ ಅನುಭವ ಅವರಿಗಿತ್ತು. ಸಮಸ್ಯೆ ಬಂದಿದ್ದೇ ಕಾಕತ್ಕರ್‌ಗೆ ಮನೋರಮಾ ಬಗ್ಗೆ ಇದ್ದ ಅನುಮಾನದಿಂದ. ಮನೋರಮಾ ನಿತ್ಯ ಮನೆಗೆ ತಡವಾಗಿ ಬರುತ್ತಿದ್ದಾರೆಂದು, ಕಾಕ ಹಾಗೂ ಕಾಕ ತನ್ನನ್ನು ನಿರ್ಲಕ್ಷಿಸುತ್ತಿದ್ದಾರೆಂಬ ಕೊರಗೂ ಮನೋರಮಾರಿಗಿತ್ತು. ಇಂತದ್ದೆಲ್ಲಾ ಎಲ್ಲಾ ಕುಟುಂಬಗಳಲ್ಲೂ ಬರುತ್ತವೆ. ಬುದ್ಧಿ-ವಿವೇಚನೆ ಇರುವವರು ಕೂತು ಮಾತಾಡಿಕೊಂಡು ಪರಿಹರಿಸಿಕೊಳ್ಳ ಬಹುದಾದ ಸಮಸ್ಯೆಗಳಷ್ಟೆ. ಆದರೆ ಕಾಕತ್ಕರ್‌ಗೆ ಅದರದ್ದೇ ಕೊರತೆ. ಹಾಗಾಗಿ ಈ ಸಮಸ್ಯೆ ಬೆಳೆಯುತ್ತಾ ಇನ್ನಷ್ಟು ಸಂಕೀರ್ಣವಾಗಿ ಅಸಹನೆ ಮೂಡಿಸಿ ಅದು ಅಗೌರವ ಬೆಳೆಸಿ ಕೊನೆಗೆ ನಂಬಿಕೆಯು ತಳಹದಿಯನ್ನೇ ಛಿದ್ರಗೊಳಿಸಿತ್ತು. ಇನ್ನು ಜೊತೆಗಿರಲು ಸಾಧ್ಯವಿಲ್ಲವೆಂಬ ಹಂತ ತಲುಪಿ ಅದೇ ಸರಿಯಾದ ಪರಿಹಾರವೆಂಬ ನಿರ್ಧಾರಕ್ಕೂ ದಂಪತಿ ಬಂದಿದ್ದರು. ಇವೆಲ್ಲಾ ಒಂದು ಹಂತ ತಲುಪಿತು ಎನ್ನುವಷ್ಟರಲ್ಲೇ ಕಳೆದ ಜನವರಿ 6 ನೇ ತಾರೀಖು ಮನೋರಮಾ ಇಂದೂಶೇಖರ್‌ರೊಂದಿಗೆ ದೆಹಲಿಗೆ ಹೋಗಿದ್ದಾರೆ. ಈ ಅಣ್ಣ ತಂಗಿ ಗಂಗಾ ನದಿಯಲ್ಲಿ ಮಿಂದು ಒಟ್ಟಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಅಲ್ಲಿಗೆ ಹೋಗಿದ್ದಾರೆ. ಆದರೆ ಇದು ಯಾರಿಗೂ ಗೊತ್ತಿರಲಿಲ್ಲ, ಸಿಟ್ಟಿಗೆದ್ದ ಕಾಕ ಇವರೆಲ್ಲಿದ್ದಾರೆಂದು ಹುಡುಕಿಸುತ್ತಿದ್ದಾಗಲೇ ಪರಿಚಿತ ಶೈಲಜಾ ಎಂಬುವರಿಂದ (ಟಿವಿ ಧಾರವಾಹಿ ನಿರ್ಮಾಪಕ ಬಿ. ಸುರೇಶ್‌ರ ಪತ್ನಿ) ಮನೋರಮಾ ದೆಹಲಿಯಲ್ಲಿದ್ದಾರೆಂಬುದು ಗೊತ್ತಾಗಿದೆ. ನಿಂತ ಹೆಜ್ಜೆಯಲ್ಲೇ ದೆಹಲಿಗೆ ಹೋದ ಕಾಕ, ಮನೋರಮಾರ ತಾಯಿ ರಾಧಾ ಗೋಖಲೆ ಹಾಗೂ ಮಾವ ನರಹರಿಯವರು ಜನವರಿ 17 ರಂದು ಮನೋರಮರನ್ನು ಬೆಂಗಳೂರಿಗೆ ವಾಪಸ್ ಕರೆ ತಂದಿದ್ದಾರೆ.



ಕಾಕತ್ಕರ್ ಪತ್ನಿ ಆತ್ಮ'ಹತ್ಯೆ'

ಬಿಳಿದಾಳೆ ಈಶ


ಗಾಂಧಿಬಜಾರ್‌ನಲ್ಲಿರುವ ಇಂದೂಶೇಖರ್ ... ಪಾಲುದಾರಿಕೆಯ ಐಟಿ ಪೆಸಿಫಿಕ್ ಆಫೀಸ್

ತಮ್ಮ ಮೇಲೆ ಅನ್ಯಾಯದ ಆರೋಪಗಳನ್ನು ಮಾಡಲಾಗಿದೆ ಎಂದು ತೀರಾ ನೊಂದುಕೊಂಡಿದ್ದ ಮನೋರಮಾರಿಗೆ ಯಾರ ಸಮಾಧಾನದ ಮಾತುಗಳಾಗಲಿ, ಯಾವುದೇ ಸಾಂತ್ವನಗಳಾಗಲಿ ತಟ್ಟಲ್ಲ. ಪತ್ರಕರ್ತ ಶಶಿಧರ್ ಭಟ್‌ರ ಮನೆಯಲ್ಲಿ ರಾತ್ರಿಯಿಡೀ ಮಾತುಕತೆಗಳಾಗಿ ದಂಪತಿ ಬೇರ್ಪಡಲು ತೀರ್ಮಾನವಾಗಿದೆ. ಪತ್ನಿ ಹೆಸರಿನಲ್ಲಿ ಮಾಡಿಕೊಟ್ಟಿದ್ದ ಆಸ್ತಿಯೊಂದನ್ನು ಹಿಂತಿರುಗಿಸುವಂತೆ ಕಾಕತ್ಕರ್ ಒತ್ತಾಯಿಸಿದ್ದಾರೆ. ಬೇರ್ಪಟ್ಟ ನಂತರ ಮನೋರಮಾಗೆ ಸೂಕ್ತ ಪರಿಹಾರ ನೀಡುವುದಾಗಿಯೂ ಕಾಕತ್ಕರ್ ಒಪ್ಪಿಕೊಂಡಿದ್ದಾರೆ. ಇವೆಲ್ಲಾ ಮುಗಿಯುವಷ್ಟರಲ್ಲಿ 17ರ ರಾತ್ರಿ 3 ಗಂಟೆ. ಅದಾದ ಕೇವಲ ನಾಲ್ಕು ಗಂಟೆಗಳಲ್ಲಿ ಮನೋರಮಾ ಸಾವಿಗೆ ಶರಣಾಗಿದ್ದಾರೆ. ಹಿಂದೆಯೇ ಇಂದೂಶೇಖರ್‌ರ ಸಾವಿನ ಸುದ್ದಿಯೂ ಬಂದಿದೆ.

ಕಾಕತ್ಕರ್ ಸಣ್ಣತನದಿಂದ ಶುರುವಾದ ಒಂದು ವಿವೇಚನಾರಹಿತ ಜಗಳ, ಕೈಹಿಡಿದಾಕೆಯ ಘನತೆ, ಆತ್ಮಗೌರವಕ್ಕೆ ಧಕ್ಕೆ ತರುವಂತ ಅನೈತಿಕ ಸಂಬಂಧದ ದುಡುಕಿನ ಆರೋಪ, hurt ಮಾಡುವಷ್ಟು ಅಪ್ರಬುದ್ಧತೆಗಳೇ ಈ ಸಾವು ಹಾಗೂ ಸಂಕಟಗಳನ್ನು ಉಂಟು ಮಾಡಿವೆ. ಕಾಕತ್ಕರ್ ಇನ್ನಷ್ಟು ಸಹನೆ, ಪ್ರಬುದ್ಧತೆ ತೋರಿಸಬೇಕಿತ್ತು. ಮನೋರಮಾರಲ್ಲಿ ವಿಶ್ವಾಸ ನಂಬಿಕೆಯ ಭಾವನೆ ಮೂಡಿಸುವ ಯತ್ನ ಮಾಡಬೇಕಿತ್ತು......

ಅದೇ ರೀತಿ ಮನೋರಮಾರು ತಮ್ಮ ಎಲ್ಲಾ ಬೇಸರ, ವ್ಯಥೆಗಳನ್ನು ಕನಿಷ್ಠ ಕುಟುಂಬದವರೊಂದಿಗಾದರೂ ಮುಕ್ತವಾಗಿ ಮಾತಾಡಬೇಕಿತ್ತು. ಅವರು ಜೀವ ತೊರೆಯುವಂತ ರೊಚ್ಚಿನ ಅಥವಾ ಹತಾಶೆಯ ನಿರ್ಧಾರಕ್ಕೆ ಬರಕೂಡದಿತ್ತು....

-ಹೀಗೆ ಈಗ ನೋಡಿದವರಿಗೆಲ್ಲಾ ಅನ್ನಿಸುತ್ತಿದೆ. ಆದರೆ ದುರಂತ ನಡೆದು ಹೋಗಿದೆ.

ಮನೋರಮಾರವರಲ್ಲಿ ಇಲ್ಲದ ತಪ್ಪು ಹುಡುಕಲು ಹೋದ ಕಾಕತ್ಕರ್ ಜೀವನಪೂರ್ತಿ ಪಶ್ಚಾತ್ತಾಪ ಪಡುತ್ತಲೇ ಇರಬೇಕಾಗುತ್ತದೆ.

ಅದು ಸೈನೆಡ್ಡಾ.... ಸಿಕ್ಕಿತೆಲ್ಲಿಂದ!

ಮನೋರಮಾ ಸಾವನ್ನು ಆಹ್ವಾನಿಸಿಕೊಂಡಿರುವುದು ಸೈನೆಡ್ ತಿಂದು ಎನ್ನಲಾಗುತ್ತಿದೆ. ಆದರೆ ಅದಿನ್ನೂ ಖಚಿತವಾಗಿಲ್ಲ, ಪೋಸ್ಟ್‌ಮಾರ್ಟಂ ವರದಿ ಹಾಗೂ ಫೋರೆನ್ಸಿಕ್ ಲ್ಯಾಬ್ ರಿಪೋರ್ಟ್ ಬಂದ ಮೇಲಷ್ಟೇ ಅದು ಗೊತ್ತಾಗಲು ಸಾಧ್ಯ. ಈ ಪ್ರಕರಣದ ತನಿಖೆ ನಡೆಸುತ್ತಿರುವ ಜ್ಞಾನಭಾರತಿ ಪೊಲೀಸ್ ಠಾಣಾ ಇನ್ಸ್‌ಪೆಕ್ಟರ್ ಚಂದ್ರಪ್ಪನವರಿಗೂ ಈ ಬಗ್ಗೆ ಇನ್ನೂ ನಿಖರ ವರ್ತಮಾನ ಸಿಕ್ಕಿಲ್ಲ.

ಒಂದು ವೇಳೆ ಅದು ಸೈನೆಡ್ಡೇ ಆಗಿದ್ದರೆ ಮನೋರಮಾರಂತಹ ಸಾಮಾನ್ಯ ಗೃಹಿಣಿಯರಿಗೆ ಸಿಗಲು ಸಾಧ್ಯ, ಅಕಸ್ಮಾತ್ ಸಿಕ್ಕಿದ್ದರೆ ಅದು ಅಕ್ಕಸಾಲಿಗರ ಸಹಾಯದಿಂದ ಸುಲಭ ಸಾಧ್ಯ.

ಆದರೆ ಪೊಲೀಸರು ಇನ್ನೂ ಆ ದಿಕ್ಕಿನಲ್ಲಿ ಯೋಚಿಸಿದಂತಿಲ್ಲ, ಈ ಸಾಧ್ಯತೆ ಇಲ್ಲವೆಂದಾದರೆ ... ಈ ಭಯಾನಕ ಸಾವಿನ ದೂತನನ್ನು ಹುಡುಕಿ ತಂದಿರಿಸಿದ್ದನಾ? ಈ ತಕ್ಷಣಕ್ಕಂತೂ ಯಾರಿಗೂ ವಿವರ ಗೊತ್ತಿಲ್ಲ.

ಇದೇ ಠಾಣೆಯ ಮಹಿಳಾ ಕಾನ್ಸ್‌ಟೇಬಲ್ ಮಂಜುಳಾ ಅವತ್ತು ಸರ್ವೋದಯ ನರ್ಸಿಂಗ್ ಹೋಂ ಹತ್ತಿರ ಹೋಗುವಷ್ಟರಲ್ಲಿ ಮನೋರಮಾರ ಜೀವ ತೊರೆದಿದ್ದರು. ಶೋಧಿಸಿ ನೋಡಿದಾಗ ಮನೋರಮರ ಬಟ್ಟೆಯಲ್ಲಿ ಚಿಕ್ಕದೊಂದು ಪೇಪರ್ ಪೊಟ್ಟಣ ಸಿಕ್ಕಿದೆ. ಅದರೊಳಗೆ ಸ್ವಲ್ಪ ಬಿಳೀ ಬಣ್ಣದ ಪುಡಿ ಸಿಕ್ಕಿದೆ. ಅತ್ತ ಇಂದೂಶೇಖರ್ ಸೇವಿಸಿದ್ದೂ ಇಂತದ್ದೇ ಪುಡಿಯನ್ನು. ಅಂದರೆ ಜನವರಿ 6 ರಿಂದ 16 ರವರೆಗೂ ದೆಹಲಿಯಲ್ಲಿದ್ದ ಇವರಿಬ್ಬರೂ ವಾಪಸ್ ಬರುವಾಗ ಸತ್ತರೆ ಒಮ್ಮೆಗೇ ಸಾಯೋಣ ಎಂದು ನಿರ್ಧರಿಸಿಕೊಂಡಿದ್ದರಾ ಎಂಬ ಪ್ರಶ್ನೆ ಏಳುತ್ತದೆ.

ಜನವರಿ 16 ರಂದು ದೆಹಲಿಯ ಕರೋಲ್‌ಬಾಗ್ ಏರಿಯಾದ ಹೋಟೆಲ್ ಒಂದರಲ್ಲಿ ಅಕಸ್ಮಾತಾಗಿ ಕಾಕತ್ಕರ್ ಕುಟುಂಬದ ಹಿತೈಷಿ ಶೈಲಜಾರಿಗೆ ಮನೋರಮಾ ಹಾಗೂ ಇಂದೂಶೇಖರ್ ಸಿಕ್ಕಿದ್ದಾರೆ. ಇವರಿಬ್ಬರೂ ಅದೇ ಹೋಟೆಲ್‌ನಲ್ಲಿ ಕಳೆದ 10 ದಿನದಿಂದ ಉಳಿದು ಕೊಂಡಿದ್ದರು. ಶೈಲಜಾರವರು ಕೂಡಲೇ ಕಾಕತ್ಕರ್‌ಗೆ ವಿಷಯ ತಿಳಿಸಿದಾಗ ಕಾಕ ದೆಹಲಿಗೂ ಹೋಗಿದ್ದಾರೆ.

ಅವತ್ತು ರಾತ್ರಿಯಿಡೀ ಮಾತುಕತೆಗಳಾಗಿವೆ. ಯಾರು ಏನೇ ಕೇಳಿದರೂ ಮನೋರಮಾರ ಉತ್ತರ ಒಂದೇ 'ನನಗಿನ್ನೂ ಬದುಕುವ ಇಚ್ಛೆ ಇಲ್ಲ, ನನ್ನನ್ನು ಸುಮ್ಮನೆ ಬಿಟ್ಟುಬಿಡಿ' ಎಂಬ ಮಾತು. ಕೊನೆಗೆ ಹೇಗೋ ಒಪ್ಪಿಸಿ 17ರ ಬೆಳಿಗ್ಗೆ ಬೆಂಗಳೂರಿಗೆ ಕರೆತಂದು ಬಂಧು ನರಹರಿ ಕರೆ ಮನೆಗೆ ಕರೆದೊಯ್ದು ಬಿಡಲಾಗಿದೆ. ಅವತ್ತೇ ರಾತ್ರಿ ಪತ್ರಕರ್ತ ಶಶಿಧರ್ ಭಟ್ ಮನೆಯಲ್ಲೂ ಮತ್ತೆ ಮಾತುಕತೆ ಆಗಿವೆ. ತನ್ನ ಮನೆ, ಮಗ ಅಪ್ಪ-ಅಮ್ಮ ತಮ್ಮ ಜ್ಞಾನೇಶ್ ಎಂದರೆ ಅಷ್ಟೊಂದು ಪ್ರೀತಿ ತೋರಿಸುತ್ತಿದ್ದ ಮನೋರಮಾರು ಬರುಬರುತ್ತಾ ಮಗ ಉತ್ಪಲನ ಫೋನ್ ಕೂಡ ರಿಸೀವ್ ಮಾಡದಂತಾಗಿದ್ದರೆಂಬುದು ವಿಚಿತ್ರ ಎನಿಸುತ್ತದೆ. ವಿಪರೀತ hurt ಆದಂತೆ ಕಂಡುಬಂದ ಮನೋರಮಾರವರು ಪದೇಪದೇ ನಾನು ಯಾಕೆ ಬದುಕಬೇಕು ಎಂದು ನೋವಿನ ಮಾತಾಡಿದ್ದಾರೆ.

"ನೀನು ಇಂತಾ ಕಾರಣಕ್ಕೆ ಬದುಕಿರಲೇಬೇಕು. ನಮಗೆಲ್ಲಾ ಇರೋದು ಒಂದೇ ಬದುಕು, ಅದನ್ನು ಪೂರ್ತಿ ಬದುಕಲೇ ಬೇಕು' ಅಂತ ಮನೋರಮಾರವರಿಗೆ ಹೇಳುವಷ್ಟು ನೈತಿಕತೆ ಕಾಕತ್ಕರ್‌ಗೆ ಅವತ್ತು ಉಳಿದಿರಲಿಲ್ಲ ಬಿಡಿ.

ಗೋವಿಂದನ ಗ್ಯಾಂಗ್ ಲೇಔಟ್ ಮಂಜನ ದೇಹವನ್ನು ಅದ್ಯಾವ ಪರಿ ಸೀಳಿಹಾಕಿತ್ತೆಂದರೆ, ಚುಚ್ಚಿದ ಏಟಿಗೆ ಮಂಜನ ಹೃದಯವೇ ಕಿತ್ತು ಈಚೆಗೆ ಬಂದಿತ್ತು. ಹೃದಯದ ತುಂಡುಗಳು ರಸ್ತೆಯಲ್ಲಿ ಚದುರಿ ಬಿದ್ದಿದ್ದವು. ಚಾಕುವಿನ ಹಿಡಿಕೆ ಹೊರಕ್ಕೆಳೆದರೆ ಬಾರದೇ ಎದೆಯಲ್ಲೇ ಉಳಿದುಬಿಟ್ಟಿತ್ತು. ಅಲ್ಲಿಗೆ ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಧೂಮಕೇತುವೊಂದು ಉರಿದು ಮಣ್ಣುಗೂಡಿತ್ತು.



ಲೇಔಟ್ ಮಂಜನ ಬೇಟೆಯಲ್ಲಿ ಗೋವಿಂದನ ಗ್ಯಾಂಗ್

ಉರಿದು ಬಿತ್ತು ಧೂಮಕೇತು



ರಿವೇಂಜ್ ಕಿಲ್ಲಿಂಗ್ಸ್ 14

ರಾ. ಸೋಮನಾಥ್

ಜೇಡರಹಳ್ಳಿ ಕೃಷ್ಣಪ್ಪನನ್ನು ಹತ್ತಿರದಿಂದ ಬಲ್ಲ ಪತ್ರಿಯೊಬ್ಬರೂ ಆತನನ್ನು ಮೆಚ್ಚುವುದು ಒಂದು ವಿಷಯಕ್ಕೆ. ತನ್ನ ಜೊತೆಗಿದ್ದು ಸಿಡಿದು ದೂರಾದವರ ಬಗ್ಗೆ ಆತ ಅಷ್ಟೊಂದು ತಲೆ ಕೆಡಿಸಿಕೊಳ್ಳುವುದಿಲ್ಲ. ಅಂಥವರೇನಾದರೂ ಪ್ರತ್ಯೇಕ ಗ್ಯಾಂಗ್ ಕಟ್ಟುತ್ತಿದ್ದಾರೆಂದರೆ ಮಾತ್ರ ಹುಷಾರಾಗುತ್ತಾನೆ. ಈ ಹಂತದಲ್ಲೂ ಆತ ದುಡುಕಲಾರ. ಬಹುಶಃ ತನ್ನ ರಕ್ಷಣೆಗೆಂದು ಒಂದಷ್ಟು ಹುಡುಗರನ್ನು ಜೊತೆಗಿಟ್ಟುಕೊಂಡಿರಬೇಕೆಂದೇ ಲೆಕ್ಕ ಹಾಕುತ್ತಾನೆ. ಆದರೆ ಆ ದಂಡು ತನ್ನ ವಿರುದ್ಧ ಫೀಲ್ಡಿಗಿಳಿದಿದೆ ಎಂದೇನಾದರೂ ಗ್ಯಾರಂಟಿಯಾಯಿತೆಂದರೆ, ಅಂಥವರ ಪಾಲಿಗೆ ಜೇಕೆ ಪರಮ ಡೇಂಜರ್.

ಜೇಕೆ ಪಡೆಯಲ್ಲಿ ಹತ್ತಾರು ವರ್ಷ ಪಳಗಿದ್ದ ಲೇಔಟ್ ಮಂಜನಿಗೆ ಇದು ಚೆನ್ನಾಗಿ ಗೊತ್ತಿತ್ತು. ಗೊತ್ತಿದ್ದೂ ದುಸ್ಸಾಹಸಕ್ಕೆ ಕೈಹಾಕಿದ್ದನೆಂದಲ್ಲ-ಲಾಭ ದೊಡ್ಡದಿತ್ತು. ಅದು ಲ್ಯಾಂಡ್ ಡೀಲು!



ಮದ್ದೂರು ಮಂಜುಳಾ

ವಿಜಯನಗರದ ಗುಂಡ, ಬಸವೇಶ್ವರನಗರದ ಕಾಂತ, ಲಗ್ಗೆರೆಯ ಮುಲಾಮು, ತಿಮ್ಮೇನಹಳ್ಳಿ ತಮ್ಮಯ್ಯ, ಯಶವಂತಪುರದ ಜನಾಗೌಡ, ಮಹಾಲಕ್ಷ್ಮಿ ಲೇಔಟಿನ ಕಾಟ್‌ರವಿ, ಎಸ್ಕಿಡಿ ರಮೇಶ್ ದಾಸರಹಳ್ಳಿಯ ರಾಗಿಮಿಷಿನ್ ಕಿಟ್ಟಿ; ಹೀಗೆ ಯಾರೆಲ್ಲ ಜೇಕೆ ವಿರುದ್ಧ ಕತ್ತಿ ಮಸೆಯುತ್ತಿದ್ದರೋ ಅಂಥವರನ್ನೇ ಹುಡುಹುಡುಕಿ ಮಂಜ ಜೊತೆಹಾಕಿ ಕೊಂಡ. ಅದಕ್ಕೆ ಜೇಕೆ ಸಂಬಂಧಿ ಚಂದ್ರನ ಕುಮ್ಮಕ್ಕಿತ್ತು. ಜೇಕೆಯಲ್ಲಿಗೆ ಹೋಗುತ್ತಿದ್ದವರನ್ನು ತನ್ನಲ್ಲಿಗೆ ಕರೆಸಿಕೊಂಡು ತಾನೇ ಸ್ವತಂತ್ರ ಡೀಲುಗಳನ್ನು ಮಾಡತೊಡಗಿದ ಮಂಜ ಜೇಕೆಯ ಹಳೇ ವೈರಿ ನಂಜುಂಡನ ಜೊತೆ ಕೈಜೋಡಿಸಿದ್ದಾನೆಂಬ ಸುದ್ದಿ ಹುಟ್ಟಿಕೊಂಡಿತು. ಅದಕ್ಕೆ ತಕ್ಕಂಥೆ ಜೇಕೆಯ ಏರಿಯಾದೊಳಕ್ಕೆ ನುಗ್ಗಿ ಬಂದ ನಂಜುಂಡ 'ಕೃಷ್ಣಪ್ಪ ಎಲ್ಲಿ ಸಿಗ್ತಾನೆ?' ಎಂದು ವಿಚಾರಿಸತೊಡಗಿದ. ಇದೇ ನಂಜುಂಡನನ್ನು ಹಿಂದೊಮ್ಮೆ ಮಲ್ಲೇಶ್ವರದಲ್ಲಿ ಮಚ್ಚೆತ್ತಿಕೊಂಡು ಜೇಕೆ ಅಟ್ಟಾಡಿಸಿದ್ದ.

ಕೈಕಾಲಿನ ನರವೇ ತುಂಡಾಗುವಂತೆ ಕತ್ತರಿಸಿ ಎಸೆದಾಗಲೂ ಮಣಿಪಾಲ ಆಸ್ಪತ್ರೆ ಸೇರಿ ತಿಂಗಳಲ್ಲೇ ಮತ್ತೆ ರೆಡಿಯಾಗಿ ಆಸ್ಪತ್ರೆಯಿಂದ ಹೊರಟಿದ್ದ ಮಂಜ ಮತ್ತೆ ಹಿಂದಿನಷ್ಟೇ ಆವೇಶದ ರೌಂಡಿಂಗ್ ಶುರುಹಚ್ಚಿಕೊಂಡ. ಪ್ರಾರಂಭದಲ್ಲಿ ಜೇಕೆ ಪ್ರಭಾವದಲ್ಲಿದ್ದ ಮಹಾಲಕ್ಷ್ಮಿ ಲೇಔಟ್, ಬಸವೇಶ್ವರ ನಗರ, ಶಿವನಹಳ್ಳಿ, ದಾಸರಹಳ್ಳಿ, ವಿಜಯನಗರ, ಕಾಮಾಕ್ಷಿಪಾಳ್ಯ, ಕುರುಬರಹಳ್ಳಿ, ಕಮಲಾನಗರ ಮುಂತಾದ ಕನ್ನಡಿಗರ ಏರಿಯಾಗಳಲ್ಲಿ ಚಿಕ್ಕಪುಟ್ಟ ಲ್ಯಾಂಡ್ ಡೀಲುಗಳಿಗೆ ಕೈಯಿಟ್ಟ. ಬಂದ ದುಡ್ಡಿನಲ್ಲಿ ಬಿಳೀ ಬಣ್ಣದ ಮಾರುತಿ 800 ಕಾರೊಂದನ್ನು ಕೊಂಡು ರಾಗಿಮಿಷಿನ್ ಕಿಟ್ಟಿ, ಹರೀಶ, ಲೋಕಿ, ಗುಂಡ, ರೈಲ್ವೇ ನಾರಾಯಣ, ಇಂಡಸ್ಟ್ರಿಯಲ್‌ಟೌನ್ ಗಂಗ, ಕೃಷ್ಣಪ್ಪನ ತಮ್ಮ ಚಂದ್ರು ಮುಂತಾದ ಪಂಟರುಗಳನ್ನು ಹಾಕಿಕೊಂಡು ಎಲ್ಲೆಂದರಲ್ಲಿ ಪೋಜು ಕೊಟ್ಟ.

ಇದಿಷ್ಟೇ ಆಗಿದ್ದರೆ ಜೇಕೆ ಅದನ್ನು ಹುಡುಗಾಟಿಕೆ ಎಂದುಕೊಂಡು ಸುಮ್ಮನಿದ್ದು ಬಿಡುತ್ತಿದ್ದ. ಆದರೆ ಮಂಜ ಹೇಗೋ ರಿವಾಲ್ವರ್ ಒಂದನ್ನು ಹೊಂಚಿಕೊಂಡು ಅದನ್ನು ಕಂಡಕಂಡಲ್ಲಿ ತೋರಿಸಿಕೊಂಡು 'ಮಗಾ ನೋಡ್ತಾ ಇರು, ಇಷ್ಟರಲ್ಲೇ ಕೃಷ್ಣಪ್ಪನ್ನ ಮುಗಿಸಿಬಿಡ್ತೀನಿ' ಎನ್ನುತ್ತಿದ್ದ!

ಇದನ್ನೇ ಜೇಕೆ ಕಾಯುತ್ತಿದ್ದ. ಈ ಹೊತ್ತಿಗಾಗಲೇ ಘಾತಕ ಬದುಕಿಗೆ ಗುಡ್‌ಬೈ ಹೇಳಿ ಹುಟ್ಟೂರು ಮಾಗಡಿಯ ಹುಚ್ಚ ಹನುಮೇಗೌಡನ ಪಾಳ್ಯದಲ್ಲಿ ದೇವಸ್ಥಾನವೊಂದನ್ನು ಕಟ್ಟಿಸುತ್ತಿದ್ದ ಜೇಕೆಗೆ ಪೊಲೀಸ್ ಕಾಟ ಬೇರೆ ವಿಪರೀತವಾಗಿತ್ತು. ವಿಜಯನಗರದ ಅತ್ಯಂತ ಕಾರ್ಯದಕ್ಷ ಸಬ್‌ಇನ್ಸ್‌ಪೆಕ್ಟರ್ ವೆಂಕಟರಮಣ ನಿದ್ದೆಗೆಟ್ಟು ಆತನ ಬೆನ್ನಿಗೆ ಬಿದ್ದಿದ್ದರು. ಕೊನೆಗೆ ರೋಸತ್ತು ನ್ಯಾಯಾಲಯಕ್ಕೆ ಹೋಗಿ ಶರಣಾದ ಜೇಕೆ ಮೈಸೂರು ಜೈಲು ಸೇರಿಕೊಂಡ. ಅಲ್ಲಿಗೆ ಜೇಕೆಯ ಹಿಮ್ಮತ್ತೇ ಇಂಗಿ ಹೋಯಿತೆಂದು ಮಂಜ ಲೆಕ್ಕ ಹಾಕಿದ. ಮೊದಲಿಗಿಂತ ಬಿಂದಾಸ್ ಆಗಿ ರೌಂಡಿಂಗ್‌ಗಿಳಿದ.

ಅದೇ ಹೊತ್ತಿಗೆ ಉಪ್ಪಿಯ 'ಎ' ಸಿನಿಮಾ ಕೂಡ ಬಿಡುಗಡೆಯಾಗಿತ್ತು. ಉಪೇಂದ್ರನಂತೆ ಕುರುಚಲು ಗಡ್ಡಬಿಟ್ಟು, ಕತ್ತಿನ ತನಕ ಜುಟ್ಟು ಬಿಟ್ಟಿದ್ದ ಮಂಜನನ್ನು 'ನೀನು ಉಪೇಂದ್ರನಿಗಿಂತ ಸ್ಮಾರ್ಟ್ ಆಗಿದ್ದೀಯಾ' ಎಂದು ಕೆಲ ತಲೆತಿರುಕ ಹುಡುಗರು ಅಟ್ಟಕ್ಕೇರಿಸಿಬಿಟ್ಟರು. ಅದೇ ಜೋಷಿಗೆ ಬಿದ್ದ ಮಂಜನಿಗೆ ಕನ್ನಡ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರ ಮಾಡಿಕೊಂಡಿದ್ದ ಮದ್ದೂರು ಮಂಜುಳಾ ಎಂಬ ನಟಿಯೊಬ್ಬಳು ಹೇಗೋ ಗಂಟುಬಿದ್ದಳು. ಕೆಲ ಟೀವಿ ಸೀರಿಯಲ್ಲುಗಳ ನಿರ್ಮಾಪಕಿಯೂ ಆಗಿದ್ದ ಮಂಜುಳಾ ಬಡ್ಡಿಗೆ ಹಣ ಬಿಡುತ್ತಿದ್ದಳು. ಈಕೆಗೆ ಅನೇಕ ರೌಡಿಗಳ ಸಹವಾಸವಿತ್ತು. ಈ ಪೈಕಿ ಜೇಕೆಯ ಪರಮಾಪ್ತ ಅಂಕಲ್ ಆಲಿಯಾಸ್ ನಾಯ್ಡು ಕೂಡ ಇದ್ದನೆ? ಗೊತ್ತಿಲ್ಲ. ಮಂಜನ ಕೊಲೆಯಾಗುವ ಕೊನೆ ಗಳಿಗೆಯ ತನಕ ಜೊತೆಗಿದ್ದವಳೇ ಈ ಮದ್ದೂರು ಮಂಜುಳಾ.

ಮಂಜನ ಆರ್ಭಟ ಹೆಚ್ಚಾದಂತೆಲ್ಲ ಇತ್ತ ತಿಮ್ಮೇನಹಳ್ಳಿಯ ಗೋವಿಂದನ ಪಡೆಯಲ್ಲಿ ವಿಲಕ್ಷಣ ಮೌನವೊಂದು ಕವಿದಿತ್ತು. ಆ ಹೊತ್ತಿಗಾಗಲೇ ಗೋವಿಂದ ತಿಮ್ಮೇನಹಳ್ಳಿ ಬಿಟ್ಟು ಭೂಗತನಾಗಿದ್ದ. ಸೂರಿ, ಕಬಡ್ಡಿ ನರಸಿಂಹ, ಮೊಬೈಲ್ ರವಿ, ನೀರಾನೆ ಹರೀಶ, ಎಸ್ಕಿಡಿ ಮಹೇಶ, ಬಿಎನ್ ರವಿ, ಲಕ್ಷ್ಮೀಶ; ಹೀಗೆ ಗೋವಿಂದನ ಯಾರೇ ಹುಡುಗರು ಕಣ್ಣಿಗೆ ಬಿದ್ದರೂ ತಮ್ಮಯ್ಯನ ಗ್ಯಾಂಗ್ ಚಮಕಾಯಿಸುತ್ತಿತ್ತು. ತಮ್ಮಯ್ಯನನ್ನು ತೆಗೆಯಬೇಕೆಂದರೆ ಅದಕ್ಕೆ ಜೇಕೆಯಂಥ ಘಟಾನುಘಟಿ ರೌಡಿಯ ನೆರಳಿರಬೇಕು. ಮತ್ತು ಜೇಕೆಯ ಬೆಂಬಲಗಿಟ್ಟಿಸಲು ಮೊದಲು ಲೇಔಟ್ ಮಂಜನನ್ನು ತೆಗೆಯಲೇಬೇಕು!

ಇದು ಗೋವಿಂದನ ಲೆಕ್ಕಾಚಾರವಾದರೆ ಅದೇ ವೇಳೆಗೆ ಮಂಜ ಪದೇಪದೇ ಲಗ್ಗೆರೆಯ ಶಿವಾನಂದನ ರಿಯಲ್ ಎಸ್ಟೇಟ್ ಆಫೀಸಿಗೆ ಬರಲಾರಂಭಿಸಿದ. ಪಕ್ಕದ ಇಸ್ಪೀಟ್ ಅಡ್ಡೆಗೂ ಪದೇಪದೇ ಹೋಗುತ್ತಿದ್ದ. ಈ ಶಿವಾನಂದ ಪ್ರಾರಂಭದಲ್ಲಿ ಜೇಕೆ ಜೊತೆಗಿದ್ದು ಬಹು ಹಿಂದೆಯೇ ದೂರವಾಗಿದ್ದ. ಇತ್ತೀಚೆಗೆ ಮತ್ತೆ ರಾಜಿಯಾಗಿತ್ತೋ ಏನೋ. ಅವನ ರಿಯಲ್ ಎಸ್ಟೇಟ್ ಅಡ್ಡೆಗೆ ಬರುತ್ತಿದ್ದ ಮಂಜನಿಗೆ ನಟ ಮದ್ದೂರು ಮಂಜುಳಾ ಪರಿಚಯವಾಗಿದ್ದೂ ಅಲ್ಲೇ!



ಜೇಕೆ



ಕಬಡ್ಡಿ ನರಸಿಂಹ

ಮೇಲುನೋಟಕ್ಕೆ ಇದೆಲ್ಲವೂ ಒಂದಕ್ಕೊಂದು ಸಂಬಂಧವಿಲ್ಲದ ಘಟನೆಗಳಾದರೂ ಮಂಜನ ಕೇಡುಗಾಲಕ್ಕೆ ಪರಸ್ಪರ ಹೇಳಿ ಮಾಡಿಸಿದಂತಿದ್ದವು. 1998 ರ ಅಕ್ಟೋಬರ್ 12ರ ಸಂಜೆಯಿಂದಲೇ ಗೋವಿಂದನ ಪಡೆ ಆತನ ಶಿಕಾರಿಗಿಳಿದಿತ್ತು. ಒಂದು ಮೆಟಡೋರ್ ತುಂಬ ಗೋವಿಂದನ ಹುಡುಗರು, ಜೊತೆಗೆರಡು ಬೈಕ್‌ಗಳು ಆತನನ್ನು ಕುರುಬರಹಳ್ಳಿಯ ನಾರಾಯಣನ ರಿಯಲ್ ಎಸ್ಟೇಟ್ ಅಡ್ಡೆಯಿಂದ ಹಿಂಬಾಲಿಸಿಕೊಂಡು ಬಂದವು. ಅದಕ್ಕೂ ಮುನ್ನ ಲಗ್ಗೆರೆಯಿಂದ ನಟಿ ಮದ್ದೂರು ಮಂಜುಳಾಳ ಫೋನ್ ಬಂದಿತ್ತು. ತಾನು ಮೈಸೂರು ರಸ್ತೆಯ ಗಾಳಿಆಂಜನೇಯ ಸ್ವಾಮಿ ಗುಡಿಗೆ ವಿಶೇಷ ಪೂಜೆ ಸಲ್ಲಿಸಬೇಕೆಂದೂ, ಅಲ್ಲಿಗೆ ನೀನೇ ನನ್ನನ್ನು ಕಾರಲ್ಲಿ ಕರೆದೊಯ್ಯಬೇಕೆಂದೂ ಮಂಜುಳಾ ಗಂಟುಬಿದ್ದಳು. ಆಕೆಯನ್ನು ಕುರುಬರಹಳ್ಳಿ ಸರ್ಕಲ್‌ನ ನಾರಾಯಣನ ಅಡ್ಡೆಗೆ ಕರೆತಂದು ಅಲ್ಲಿಂದ ಬಸವೇಶ್ವರನಗರ ಸರ್ಕಲ್ಲಿಗೆ ಬಂದಿದ್ದಾನೆ ಲೇಔಟ್ ಮಂಜ.

ಈ ವೇಳೆಗಾಗಲೇ ರಾಜಾಜಿನಗರದ ಇಸ್ಕಾನ್ ದೇವಸ್ಥಾನದ ಬಳಿ ಹೊಂಚಿ ಕೂತಿದ್ದ ಗೋವಿಂದನ ಪಡೆಗೆ ಬಸವೇಶ್ವರನಗರ ಸರ್ಕಲ್ಲಿಗೆ ಬರುವಂತೆ ಪೇಜರ್ ಮೆಸೇಜು ಬಂತು. ಅಲ್ಲಿಯ ತನಕ ತಾನೇ ಡ್ರೈವ್ ಮಾಡುತ್ತಿದ್ದ ಮಂಜ ಬಸವೇಶ್ವರನಗರ ಸರ್ಕಲ್ಲಿಗೆ ಬರುತ್ತಿದ್ದಂತೆ ರಾಗಿಮಿಷಿನ್ ಕಿಟ್ಟಿಯನ್ನು ಕರೆಸಿಕೊಂಡಿದ್ದ. ಆತನ ಕೈಗೆ ಕಾರಿನ ಡ್ರೈವಿಂಗ್ ಒಪ್ಪಿಸಿದವನು ತಾನು ಪಕ್ಕದ ಸೀಟಿನಲ್ಲಿ ಕೂತು ಮಂಜುಳಾಳನ್ನು ಹಿಂಭಾಗದಲ್ಲಿ ಕೂರಿಸಿದ್ದ. ಕಾರು ನೇರವಾಗಿ ದಾಸರಹಳ್ಳಿ, ಕೆರೆದಾಟಿ ಸೊಣ್ಣಪ್ಪನಪಾಳ್ಯಕ್ಕೆ ಬರುತ್ತಿದ್ದಂತೆ ಮಂಜುಳಾ ಇದ್ದಕ್ಕಿದ್ದಂತೆ ಕಾರು ನಿಲ್ಲಿಸಿದ್ದಾಳೆ. ಆಕೆ ಫೋನ್ ಮಾಡಬೇಕು ಎಂದಿದ್ದಕ್ಕೆ, ಮಂಜ ತನ್ನ ಮೊಬೈಲಿನಿಂದಲೇ ಮಾಡು ಎಂದಿದ್ದಾನೆ.

ಬೇಡ ಅತ್ತ ಕಡೆಯವರಿಗೆ ನಿನ್ನ ನಂಬರ್... ಬಿಡುತ್ತೆ ಪಕ್ಕದ ಎಸ್ಟಿಡಿಯಿಂದ ಮಾಡ್ತೀ... ಮಂಜುಳಾ ಕಾರಿಳಿಯುತ್ತಿದ್ದಂತೆ ಸರಿಸುಮಾರು... ಮಂದಿಯಿದ್ದ ತಂಡ ಕಾರಿನ ಮೇಲೆರಗಿದೆ...

ಡ್ರೈವಿಂಗ್ ಸೀಟಿನಲ್ಲಿದ್ದ ಕಿಟ್ಟಿಯು... ಮಚ್ಚಿನೇಟು ಬಿದ್ದಿದೆ. ತಕ್ಷಣ ಅವನು ಕಾರಿ... ಹೋಗಿದ್ದಾನೆ. ಬಹುಶಃ ಮುಂದಿನ... ಕೂತಿದ್ದಂತೆಯೇ ಮಂಜನಿಗೆ... ಮಚ್ಚಿನೇಟು ಬಿದ್ದಿರಬೇಕು. ಆನಂತ... ಕಾರಿಂದ ಎಳೆದುಕೊಂಡಿದ್ದಾರೆ... ಮೊದಲೇ ಏಟುಬಿದ್ದು ಆಪರೇಷನ್... ರಿಂದ ಅವನು ಓಡಿರಲಾರ. ಸುಮಾರು 20 ಅಡಿ ದೂರಕ್ಕೆ ಎಳೆ... ಅವನನ್ನು ನಡುರಸ್ತೆಯಲ್ಲೇ ಛಿ... ಕತ್ತರಿಸಲಾಗಿತ್ತು. ಚುಚ್ಚಿದ ಏಟಿಗೆ... ಹೃದಯವೇ ಕಿತ್ತು ಈಚೆಗೆ... ಹೃದಯದ ತುಂಡುಗಳು ರಸ್ತೆಯ... ಬಿದ್ದಿದ್ದವು. ಚಾಕುವಿನ ಹಿಡಿಕೆ ಹೊ... ಬಾರದೇ ಎದೆಯಲ್ಲೇ ಉಳಿದುಬಿ...

ಅಲ್ಲಿಗೆ ಬೆಂಗಳೂರು ಅಂಡರ್‌ವರ್ಲ್ಡ್‌ನ... ಕೇತುವೊಂದು ಉರಿದು ಮಣ್ಣುಗೂಡಿತ್ತು.

ಗೋವಿಂದನ ಪಡೆಯಲ್ಲಿದ್ದ ಕರಿನರಸಿ... ಯಾಸ್ ಕಬಡ್ಡಿ ನರಸಿಂಹ ಪಕ್ಕಾ ಫೈಟರ್. ಷ... ಕಾರಿನಿಂದ ಎಳಕೊಂಡು ಮೊದಲ ಏಟು ಕೆ... ಆತ. ಹಾಗೇ ಮಂಜನ ಎದೆಗೆ ಹೊರಬರ... ರಭಸದಿಂದ ಡ್ಯಾಗರ್ ಚುಚ್ಚಿದ್ದು ತಿಮ್ಮೇನಹ... ಜೊತೆಗೆ ಗೋವಿಂದನೂ ಇದ್ದ. ರಸ್ತೆಯಲ್ಲಿ... ಕಾರಿನ ಗಾಜುಗಳು ಪುಡಿಪುಡಿಯಾಗಿತ್ತು... ಹೆಡ್‌ಲೈಟು... ಯುತ್ತಲೇ... ಕಾರಿನ ಮೆ... ಹಾಕಿದ ಸ್ಪೆ... ಹಾಕಿ ಸ್ಟಿಕ್ಕು... ಮತ್ತೊಂದು... ಕಾರಿನ ... ಬಿದ್ದಿದ್ದವು. ಹಿಂದಲೆ... ಹೋಗಿತ್ತು. ತಲವಾರ್... ಮುಖವೇ ಕತ್ತರಿಸಿ ಹೋಗಿತ್ತು.

ಅತ್ತ ಮೈಸೂರು ಜೈಲಿನ ಏಕಾಂಗಿ... ಮೈಚಾಚಿ ಮಲಗಿದ್ದ ಜೇಕೆಗೆ ಸುದ್ದಿ ಮ... ಮಂಜ ಮುಗಿದು ಎಷ್ಟು ಹೊತ್ತಾಗಿತ್ತೋ... ಮಾರ್ಮಿಕವಾಗಿ ನಕ್ಕಿರಬೇಕು. ಕೃಷ್ಣಪ್ಪನ ಜಾತ... ತಂತ್ರಗಾರಿಕೆ, ಆತ ಮಾಡುವ ಹತ್ಯೆಗಳಲ್ಲಿನ ಕಸು... ಮತ್ತು ಅಂಥಾದ್ದೊಂದು ನಿರ್ದಯತೆಯನ್ನು... ಇದು ಜೇಕೆಯದೇ ಕೆಲಸ ಎಂಬ ಬಗ್ಗೆ ಅನು... ಇರಲಿಲ್ಲ. ಆತ ಕೋರ್ಟಿಗೆ ಸರೆಂಡರ್ ಆ... ಹೊಕ್ಕಿ ಕೂತಾಗಲೇ ಆತನನ್ನು ಅನೇಕ ದಿ... ಹತ್ತಿರದಿಂದ ಬಲ್ಲ ಮಂಜ ಹುಷಾರಾಗಬೇಕಿ... ತಾಕತ್ತಿನ ದುರಹಂಕಾರಕ್ಕೆ ಬಿದ್ದು ಮಂಜ ಅನಾ... ಬೀದಿ ಹೆಣವಾದ. ಆಗ ಬಸವೇಶ್ವರ ನಗರಕ್ಕೆ ಇ... ಆಗಿದ್ದ ಶಿವಣ್ಣ ಗೋವಿಂದ, ಕಬಡ್ಡಿ ನರಸಿಂಹ, ... ರವಿ, ತಿಮ್ಮೇನಹಳ್ಳಿ ಸೂರಿ, ಎಸ್ಕಿಡಿ ಮಹೇಶ... ಹರೀಶ, ಲಕ್ಷ್ಮೀಶ ಮುಂತಾದವರನ್ನೆಲ್ಲ ಹಿಡಿ... ಕೇಸಿಗೆ ಫಿಟ್ ಮಾಡಿದ್ದರು. ಜೊತೆಗೆ ಜೇ... ಪಿತೂರಿದಾರನೆಂದು ಕೇಸಿಗೆ ಸಿಲುಕಿಸಲಾಯಿ... ಇಡೀ ಬೆಂಗಳೂರು ಅಂಡರ್‌ವರ್ಲ್ಡ್‌ಗೆ ಒ... ಸ್ಪಷ್ಟವಾಗಿತ್ತು; ಜೇಕೆ ಮಚ್ಚು ಕೆಳಗಿಟ್ಟಿದ್ದಾನೆ... ಶುದ್ಧ ಸುಳ್ಳು ಮತ್ತು ತಿಮ್ಮೇನಹಳ್ಳಿಯ ಗೋ... ಬೆನ್ನಿಗೆ ಜೇಕೆ ನಿಂತಿದ್ದಾನಾದ್ದರಿಂದ ಅಲ್ಲಿನ ... ಕಲಹ ಮತ್ತಷ್ಟು ಉಲ್ಬಣಿಸುತ್ತದೆಯೇ ಹೊರತು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ!

(ಮುಂದುವರಿ...)

ಕ್ಷೇತ್ರದ ನಸೀಬೇ ಅಂತಹದಿರುತ್ತದೆ. "ಜಾಡಿಸಿ ಒದ್ದ ತೋಳಗೆ ಪುಟ್ಟಿಯಲ್ಲಿ ಬಿದ್ದ" ಎಂಬಂತಹ ಅನುಭವದ ವ್ಯಕ್ತಿ ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕೃಷಿ ಮಾರುಕಟ್ಟೆ ಮಂತ್ರಿಗಿರಿ ಹೊಣೆ ಹೊತ್ತಿರುವ ಶರಣಬಸಪ್ಪ ದರ್ಶನಾಪುರ ...

ಈಗ್ಗೆ 18 ವರ್ಷಗಳ ಹಿಂದೆ ತಮ್ಮ ತಂದೆ ಬಾಪೂಗೌಡ ದರ್ಶನಾಪುರ ತೀರಿಹೋದ ನಂತರ ಇಂಜಿನಿಯರ್ ಪದವಿಧರನಾಗಿದ್ದ ಶರಣಬಸಪ್ಪ ಅನುಕಂಪದ ಅಲೆಯಿಂದಾಗಿ ಕಾಂಗ್ರೆಸ್‌ನ ಶೇಖರಪ್ಪಗೌಡ ಶಿರವಾಳರನ್ನು ಸೋಲಿಸಿ ಅನಾಯಾಸ ಶಾಸಕನಾದ. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಪದ ಕಳಕೊಂಡ ಸಂದರ್ಭ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾದರು. ದರ್ಶನಾಪುರಗೆ ಶುಕ್ರದೆಸೆ ಶುರುವಾಯ್ತು!

ಆಗ ಯುವಕನೂ, ಪದವಿಧರನೂ ಆಗಿದ್ದ ದರ್ಶನಾಪುರ ಇಂಧನ ಸಚಿವನಾದ. ಆ ಅವಧಿಯಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದರೂ ಮುಂದೆ ನಡೆದ ಚುನಾವಣೆಯಲ್ಲಿ ಸೋಲನ್ನು ಅನುಭವಿಸ ಬೇಕಾಯ್ತು. ಐದು ವರ್ಷಗಳ ಕಾಲ ಮನೆಯಲ್ಲಿ ಕುಳಿತ ದರ್ಶನಾಪುರ 2004 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸುಮಾರು 21 ಸಾವಿರ ಭಾರಿ ಮತಗಳ ಅಂತರದಿಂದ ಶಿರವಾಳರ ವಿರುದ್ಧ ಗೆಲುವು ಸಾಧಿಸಿದರು.

ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂತು. ಮಂತ್ರಿ ಪದವಿಗಾಗಿ ಹಾತೊರೆಯುತ್ತಿದ್ದ ದರ್ಶನಾಪುರಿಗೆ ಖರ್ಗೆ, ಧರ್ಮಸಿಂಗ್ ಕಂಟಕ ರಾದರು. ಆದರೆ ಆನಂತರ ನಡೆದ ಅನಿರೀಕ್ಷಿತ ಬೆಳವಣಿಗೆಗಳಿಂದಾಗಿ 'ಕೋ-ಜಾ' ಸರ್ಕಾರ ರಚನೆ ಯಾಯಿತು. ಈ ಸರ್ಕಾರದ ನೇತೃತ್ವ ವಹಿಸಿದ ಕುಮಾರಸ್ವಾಮಿಗೆ ಸುಮಾರು ಆರು ಕೋಟಿ ಕಪ್ಪ ನೀಡಿ, ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತು ಮತ್ತೆ ಮಂತ್ರಿಯಾಗಿ ಅವತರಿಸಿದ ಈ ದರ್ಶನಾಪುರ.

ರಾಜಕೀಯದಲ್ಲಿ ತಮ್ಮ ತಂದೆಯನ್ನೇ ಮೀರಿಸಿ ಬೆಳೆದ ದರ್ಶನಾಪುರ ಈಗ ತಂದೆಗಿಂತಲೂ ಹೆಚ್ಚು ಅಪಾಯಕಾರಿಯಾಗಿ ಗೋಚರಿಸುತ್ತಿದ್ದಾರೆ. ಸಂಭಾವಿತನಂತೆ ಕಂಡುಬರುವ ಈತನ ಒಳಪೆಟ್ಟುಗಳು ಗೊತ್ತಿದ್ದವರಿಗೆ ಈತನ ಅನಾಹುತಕಾರಿ ಗುಣ ಗೊತ್ತಾಗಿದೆ. ಈತನ ಎಡಬಿಡಂಗಿತನ ಹಾಗೂ ಬದ್ಧತೆಯಿಲ್ಲದ ರಾಜಕಾರಣ ಇಡೀ ಜಿಲ್ಲೆಯಾದ್ಯಂತ ಅರಾಜಕತೆ ಹುಟ್ಟುಹಾಕುತ್ತಿದೆ.

ದರ್ಶನಾಪುರ ಕ್ಷೇತ್ರದಲ್ಲಿ ಅರಾಜಕತೆ

ಒಮ್ಮೆ ಅಧಿಕಾರಿಗಳ ವರ್ಗಾವಣೆಗೆ ಶಿಫಾರಸ್ಸು ಮಾಡಿ, ಆನಂತರ ಹಣದ ಥೈಲಿ ಹರಿದು ಬಂದ ಕೂಡಲೇ ಮತ್ತೆ ಅದನ್ನು ರದ್ದುಗೊಳಿಸುವ ದರ್ಶನಾಪುರರ ಕೃಪೆಯಿಂದಾಗಿ ಹಲವು ವರ್ಷಗಳಿಂದ ಬೇರುಬಿಟ್ಟಿರುವ ಅಧಿಕಾರಿ ವರ್ಗ ಅದೇ ಸ್ಥಾನಗಳಲ್ಲಿ ಮುಂದುವರೆದಿದೆ. ಇಂಥವರ ಪೈಕಿ ಜಿಲ್ಲಾಧಿಕಾರಿ ಪಂಕಜ್ ಕುಮಾರ ಪಾಂಡೆ, ಪೊಲೀಸ್ ಇನ್ಸ್‌ಪೆಕ್ಟರ್ ಜೇಮ್ಸ್ ಮಿನೇಜಸ್, ನಗರ ಪಾಲಿಕೆ ಆಯುಕ್ತ ಮುಧೋಳ್ ಪ್ರಮುಖರು.

ಈ ಹಿಂದೆ ಜಿಲ್ಲಾ ಪಂಚಾಯತಿಯ ಮುಖ್ಯ ಇಂಜಿನಿಯರ್ ಆಗಿದ್ದ ಪಂಕಜ್ ಕುಮಾರ್ ಡಿಸಿಯಾಗಿ ಬಡ್ತಿ ಹೊಂದಿದರೆ, ... ನಗರ ಪೊಲೀಸ್ ಠಾಣೆಯ ಜೇಮ್ಸ್ ಮತ್ತು ... ಮುಧೋಳ್ ಮತ್ತದೆ ಸ್ಥಾನಕ್ಕೆ ಬಂದು ... ಆಗಿದೆ. ಇದಲ್ಲದೆ ಜಿಲ್ಲೆಯಾದ್ಯಂತ ಮುಖ್ಯಸ್ಥಾನ ... ಅಧಿಕಾರಿಗಳೆಲ್ಲರಿಗೆ ದರ್ಶನಾಪುರರ ... ವಿರುವುದನ್ನು ಯಾರೂ ಅಲ್ಲಗಳೆಯಲಾರರು. ... ಲಂಚ ನೀಡುವಂತೆ ಅಧಿಕಾರಿಗಳು ಮತ್ತು ದರ್ಶನಾಪುರ ನಡುವಿನ ಕತ್ತಲೆ ವ್ಯವಹಾರಗಳು ಸಾಕ್ಷಿ ... ನುಡಿಯುತ್ತವೆ.

ಈ ಹಿಂದೆ ಪ್ರಮೋದ್ ರೆಡ್ಡಿ ಎಂಬಾತ ಬೆಣ್ಣೆ ... ಯೋಜನೆಯಲ್ಲಿ ನಡೆಸಿದ್ದ ಅವ್ಯವಹಾರದ ... ಮೇಲೆ, ಜಲಸಂಪನ್ಮೂಲ ಸಚಿವ ಕೆ.ಎಚ್. ... ಮುಂದ್ಯಾಗಿ ಬಂದು ಪ್ರಮೋದ ರೆಡ್ಡಿ ಸಹಿತ ... ಅಧಿಕಾರಿಗಳನ್ನು ಅಮಾನತ್ತು ಮಾಡಿದ್ದರು. ... ದರ್ಶನಾಪುರ, ಮುಖ್ಯಮಂತ್ರಿ ಮೇಲೆ ... ಫೈಲನ್ನು ರೀಓಪನ್ ಮಾಡಿಸಿದ. ... ರೆಡ್ಡಿಯು ಅಮಾನತ್ತು ಆಜ್ಞೆಯನ್ನು ರದ್ದು ಮಾಡಿಸಿ ಈಗ ಆತನನ್ನು ಬಿಜಾಪುರ ಸಿ.ಇ. ಯನ್ನಾಗಿ ಮಾಡಲು ಹುನ್ನಾರ ನಡೆಸಿದ್ದಾನೆ. ಇದನ್ನು ಕುರಿತು ಮಂತ್ರಿ ರೇವಣ್ಣ ಹಾಗೂ ದರ್ಶನಾಪುರ ಮಧ್ಯೆ ಬಹುದೊಡ್ಡ ರಾದ್ಧಾಂತ ಉಂಟಾಗಿದೆ.


ಗುಲ್ಬರ್ಗಾ

ಅದೇ ರೀತಿಯಾಗಿ ಈ ಹಿಂದೆ ನೀರಾವರಿ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿದ್ದ ಸದಾಶಿವ ರೆಡ್ಡಿ ಎಂಬಾತನನ್ನು ಮತ್ತದೇ ನೀರಾವರಿ ಇಲಾಖೆಗೆ ತಂದುಕೂಡಿಸಿರುವುದನ್ನು ಯಾರು ಮರೆತಿಲ್ಲ. ಸದಾಶಿವರೆಡ್ಡಿ ಎಂಥ ಭ್ರಷ್ಟ ಎಂಬುದಕ್ಕೆ ಗುಲ್ಬರ್ಗಾದಲ್ಲಿ ಆತ ಕಟ್ಟಿಸಿರುವ ಸುಮಾರು 3 ಕೋಟಿಯ ಮನೆಗಳೇ ಸ್ಪಷ್ಟ ನಿದರ್ಶನ.

ಹಫ್ತಾ ವಸೂಲಿಯ ಅಮರೇಶಗೌಡ ದರ್ಶನಾಪುರ

ಅಣ್ಣ ಮಂತ್ರಿಯಾಗುತ್ತಲೇ ಶಹಾಪುರದಲ್ಲಿದ್ದ ತನ್ನ ಮನೆಯನ್ನು ಗುಲ್ಬರ್ಗಾಕ್ಕೆ ಶಿಫ್ಟ್ ಮಾಡಿರುವ ತಮ್ಮ ಅಮರೇಶ ಗೌಡ ದರ್ಶನಾಪುರ


ರಾಜಕೀಯದಲ್ಲಿ ತಮ್ಮ ತಂದೆಯನ್ನೇ ಮೀರಿಸಿ ಬೆಳೆದ ದರ್ಶನಾಪುರ ಈಗ ತಂದೆಗಿಂತಲೂ ಹೆಚ್ಚು ಅಪಾಯಕಾರಿಯಾಗಿ ಗೋಚರಿಸುತ್ತಿದ್ದಾರೆ. ಸಂಭಾವಿತನಂತೆ ಕಂಡುಬರುವ ಈತನ ಒಳಪೆಟ್ಟುಗಳು ಗೊತ್ತಿದ್ದವರಿಗೆ ಈತನ ಅನಾಹುತಕಾರಿ ಗುಣ ಗೊತ್ತಾಗಿದೆ. ಈತನ ಎಡಬಿಡಂಗಿತನ ಹಾಗೂ ಬದ್ಧತೆಯಿಲ್ಲದ ರಾಜಕಾರಣ ಇಡೀ ಜಿಲ್ಲೆಯಾದ್ಯಂತ ಅರಾಜಕತೆ ಹುಟ್ಟುಹಾಕುತ್ತಿದೆ. ಇಂಥ ದರ್ಶನಾಪುರನ ದಶಾವತಾರದ ಕತೆ ಇಲ್ಲಿದೆ....



ದರ್ಶನಾಪುರನ ದಶಾವತಾರ

ಇದೀಗ ಜಿಲ್ಲಾ ಕೇಂದ್ರದಲ್ಲಿ ಕುಳಿತು ಹಫ್ತಾ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ದಟ್ಟವಾಗುತ್ತಿವೆ. ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆಗಳನ್ನು ಆವರಿಸಿರುವ ಅಮರೇಶಗೌಡ, ಪ್ರತಿ ಇಲಾಖೆಯಿಂದ ತಿಂಗಳಿಗೆ ಇಂತಿಷ್ಟು ಹಣ ತಂದುಕೊಡಬೇಕೆಂಬ ಫರ್ಮಾನು ಹೊರಡಿಸಿರುವುದು ಗುಟ್ಟಾಗಿ ಉಳಿದಿಲ್ಲ.

ಜಿಲ್ಲೆಯಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದ ಸುಮಾರು 90 ಕ್ಕೂ ಹೆಚ್ಚು ಅಂಗನವಾಡಿ ಶಿಕ್ಷಕಿಯರ ನೇಮಕಾತಿಯಲ್ಲಿ ಒಬ್ಬೊಬ್ಬ ಅಭ್ಯರ್ಥಿಗಳಿಂದ ತಲಾ 30 ಸಾವಿರ ಲಂಚ ಸ್ವೀಕರಿಸಿರುವುದು ಜಗಜ್ಜಾಹಿರಾಗಿದೆ.



ಬಾಪುಗೌಡ ದರ್ಶನಾಪುರ

ಅದೇ ರೀತಿಯಾಗಿ ಇಲ್ಲಿನ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಸಂಪೂರ್ಣವಾಗಿ ನುಂಗಿ ನೀರು ಕುಡಿದಿರುವ ಈ ಅಮರೇಶಗೌಡ, ಕಂಟ್ರ್ಯಾಕ್ಟರುಗಳಿಗೆ ತನ್ನ ಅಣತಿ ಮೀರಬಾರದೆಂಬ ಕಟ್ಟಾಜ್ಞೆ ನೀಡಿದ್ದಾನೆ. ಓಬ್ಬೆ ಒಬ್ಬ ಗುತ್ತಿಗೆದಾರನೂ ಅಮರೇಶಗೌಡನ ಗಮನಕ್ಕೆ ಬಾರದೆ ಒಂದೇ ಒಂದು ಕಂಟ್ರಾಕ್ಟು ಪಡೆಯಲಾಗದ ದುಃಸ್ಥಿತಿ ಉದ್ಭವಿಸಿದೆ.

ಇಷ್ಟೇ ಅಲ್ಲದೇ ಸಚಿವರ ಚಿಕ್ಕಪ್ಪ ಬಸವರಾಜಪ್ಪಗೌಡನ ಪಾಲು ಬಲು ಅಗ್ರವಾಗಿದೆ. ಅದೇ ರೀತಿಯಾಗಿ ಸಂಬಂಧಿ ವಿಶ್ವನಾಥರೆಡ್ಡಿಯೂ ಈ ಕೆಲಸಗಳಲ್ಲಿ ಹಿಂದೆಬಿದ್ದಿಲ್ಲ. ಇತ್ತೀಚೆಗೆ ನಡೆದ ಮೊರಾರ್ಜಿ ಶಾಲೆಯ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ತನ್ನ ಹೆಸರಿನ ಎನ್‌ಜಿಒಗೆ ತೆಗೆದುಕೊಂಡು ಅಕ್ರಮ ನೇಮಕಾತಿ ನಡೆಸಿದ್ದೇ ಇದಕ್ಕೆ ಉದಾಹರಣೆಯಾಗಿದೆ.


ಹೀಗೆ ಜಿಲ್ಲೆ ಹಾಗೂ ಶಹಾಪುರ ಕ್ಷೇತ್ರದಾದ್ಯಂತ ತಮ್ಮದೇ ಕಾರುಬಾರು ನಡೆಸುತ್ತಿರುವ ದರ್ಶನಾಪುರ ಮತ್ತವರ ಸಂಬಂಧಿಕರು ವಿವಿಧೆಡೆ 'ಲ್ಯಾಂಡ್ ಗ್ರ್ಯಾಬಿಂಗ್' ಮಾಡುತ್ತಾ ಗೂಂಡಾಗಿರಿ ಮಾಡುತ್ತಿದ್ದಾರೆ. ಇದಕ್ಕೆ ಇಡೀ ಗುಲ್ಬರ್ಗಾದ ಜನತೆ ಮೂಕ ಸಾಕ್ಷಿಯಾಗಿದ್ದಾರೆ!

ದರ್ಶನಾಪುರ ಸುತ್ತ ಪುಂಡರ ದಂಡು

ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತಿರುವ ದರ್ಶನಾಪುರರ ಸುತ್ತ ಇದೀಗ ಬಹುದೊಡ್ಡ ಪುಂಡರ ದಂಡು ಆವರಿಸಿಕೊಂಡಿದೆ. ಜೆಡಿಎಸ್‌ನ ಜನರಲ್ ಸೆಕ್ರೆಟ್ರಿಯಾದ ಸೈಯದ್ ಮಜರ್ ಹುಸೇನ್ ಎಂಬ ಪೆಟ್ರೋಲ್ ಕಳ್ಳ, ರಾಜ್ಯ ಗ್ರಾಹಕರ ಮಹಾ ಮಂಡಳದ ಸೋಮಶೇಖರ ಗೋನಾಯಕ್ ಎಂಬ ನಾಲಾಯಕ್, ಖ್ಯಾತ ಕಂಟ್ರ್ಯಾಕ್ಟರ್ ಆದ ಅಭಿಷಾಳ್ ಪ್ರಭು ಎಂಬ ಕಂಟ್ರಾಕ್ಟ್‌ದಾರ, ಶ್ರೀನಿವಾಸರೆಡ್ಡಿ ಎಂಬ ಭೂಗಳ್ಳರಂತಹ ಪುಂಡರ ದಂಡು ಸಚಿವ ದರ್ಶನಾಪುರರ ಸುತ್ತ ಕೋಟೆ ಕಟ್ಟಿದೆ.

ಹಿಂದೆ ಇಂಜಿನಿಯರ್ ಆಗಿದ್ದ ಸಂದರ್ಭ ಗುಲ್ಬರ್ಗಾ ದಲ್ಲಿ 'ಸರ್.ಎಂ. ವಿಶ್ವೇಶ್ವರಯ್ಯ ಇಂಜಿನಿಯರುಗಳ ಸಹಕಾರ ಸಂಘ' ಕಟ್ಟಿಕೊಂಡಿದ್ದ ದರ್ಶನಾಪುರ ಇದೀಗ ಅದನ್ನೇ ತನ್ನ ಪ್ರಮುಖ ಅಡ್ಡೆಯನ್ನಾಗಿಸಿಕೊಂಡು ಇಸ್ಪೀಟು, ಮೋಜು-ಮಜಾಗಳಲ್ಲಿ ತೊಡಗಿದ್ದಾನೆ. ಇಲ್ಲಿ ಕೆಲವು ಕೆಲಸಕ್ಕೆ ಬಾರದ ಇಂಜಿನಿಯರ್‌ಗಳು ಹಾಗೂ ಪುಡಿ ರಾಜಕಾರಣಿಗಳು ಅತಿಥಿಗಳಾಗಿ ಎಂಟ್ರಿ ಪಡೆಯತೊಡಗಿದ್ದಾರೆ! ಸಾಕಲ್ಲ ಇಷ್ಟು ಗುಲ್ಬರ್ಗಾ ಜಿಲ್ಲೆ ಎಕ್ಕುಟ್ಟಿ ಹೋಗಲು?

ಪಕ್ಷದ ಸುರಪುರದ ಶಾಸಕ ರಾಜೂಗೌಡ, ಯಾದಗಿರಿಯ ವೀರ ಬಸವಂತರೆಡ್ಡಿ ಮುದ್ನಾಳ್, ಅಫಜಲ್‌ಪುರದ ಎಂ.ವೈ. ಪಾಟೀಲ ಮುಂತಾದವರನ್ನು ತನ್ನ ಬೆನ್ನಿಗಿರಿಸಿಕೊಂಡಿರುವ ದರ್ಶನಾಪುರ ಮತ್ತವರ ಪುಂಡರ ಪಡೆ ಇಡೀ ಗುಲ್ಬರ್ಗಾ ಜಿಲ್ಲೆಯನ್ನೇ ಗುಡಿಸಿ ಗುಂಡಾಂತರ ಮಾಡುತ್ತಿದೆ. ಕಲ್ಬುರ್ಗಿಯ ಕರಟಕ ದಮನಕಗಳಾದ ಖರ್ಗೆ- ಧರ್ಮಸಿಂಗ್ ದೆಹಲಿ ಮೇಡಂನ ಮನೆಯತ್ತ ಮುಖ ಮಾಡಿ ನಿಂತಿರುವುದರಿಂದ ಯಾರೂ ಕೇಳದಂತಾಗಿರುವ ಕಲ್ಬುರ್ಗಿಗೆ ಸದ್ಯಕ್ಕೆ ದರ್ಶನಾನುಪುರನೇ ಸರ್ವಾಧಿಕಾರಿ!



ಬಸವರಾಜ ದರ್ಶನಾಪುರ

ಮೊದಲ ಸಲ ಮಂತ್ರಿಯಾಗಿದ್ದಾಗ, ಅಭಿವೃದ್ಧಿಗಾಗಿ ಹಾತೊರೆಯುತ್ತಿದ್ದ ಸಚಿವ ದರ್ಶನಾಪುರ ಈ ಪಾಟ ಸುಲಿಗೆ ನಡೆಸುತ್ತಿರುವುದನ್ನು ಗಮನಿಸಿದರೆ ದರ್ಶನಾಪುರ್ ತಾನೇ ಬೀಳಲು ಗುಂಡಿ ತೋಡುತ್ತಿರುವುದು ಕಾಣಿಸುತ್ತಿದ್ದರೂ ಆತ ಬೀಳುವವರೆಗೂ ಕಾಯಲೇ ಬೇಕಾದ ಸ್ಥಿತಿಗೆ ಗುಲ್ಬರ್ಗಾದ ಜನತೆ ಬಂದಾಗಿದೆ.

-ವರದಿಗಾರ

ಕೋಟಿಗಟ್ಟಲೆ ಹಣ ಕೊಳ್ಳೆ!


ಒಂದು ದಶಕದ ಹಿಂದಷ್ಟೇ ಹುಂಡು ಗುತ್ತಿಗೆ ಹಗರಣದ ಮೂಲಕ ವಿಧಾನಮಂಡಲದ ಅಂದಾಜು ಸಮಿತಿಯ ತೀವ್ರ ಆಕ್ಷೇಪಣೆಗೆ ಗುರಿಯಾಗಿದ್ದ ಬೆಣ್ಣೆತೊರಾ ಯೋಜನೆಯ ಕಾಮಗಾರಿಗಳಲ್ಲಿ ಮತ್ತೆ ಅಕ್ರಮಗಳು ತಲೆ ಎತ್ತುವ ಮೂಲಕ ಭಾರೀ ಹಗರಣಕ್ಕೆ ನಾಂದಿಯಾಗುತ್ತಿದೆ.

ಸಚಿವ ದರ್ಶನಾಪುರರ ಚಿಕ್ಕಪ್ಪ, ಸಹೋದರ ಅಮರೇಶಗೌಡ ದರ್ಶನಾಪುರ, ಮತ್ತವರ ರೆಡ್ಡಿ ಗ್ಯಾಂಗ್ ಅಧಿಕಾರಿಗಳ ನೆರವಿನಿಂದ ಬೋಗಸ್ ಬಿಲ್‌ಗಳನ್ನು ಸೃಷ್ಟಿಸಿ ಕೋಟ್ಯಂತರ ರೂ. ಹಣವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಅಸಮರ್ಪಕ ಆಡಳಿತ, ಅಧಿಕಾರಿಗಳ ಮೌನ, ದರ್ಶನಾಪುರರ ಆರ್ಭಟದಿಂದಾಗಿ ಇಲ್ಲಿನ ಒಟ್ಟು ಪರಿಸ್ಥಿತಿಯೇ ಬದಲಾಗಿದೆ. ಕಾಮಗಾರಿಗಳಲ್ಲಿ ಅವ್ಯವಸ್ಥೆ ಅಕ್ರಮ, ಅವ್ಯವಹಾರ ತಲೆದೂರಿದೆ. ಯಾವುದೂ ಯೋಜನೆಯಂತೆ ನಡೆಯುತ್ತಿಲ್ಲ.

ನಿಯಮ ಉಲ್ಲಂಘಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಗುತ್ತಿಗೆದಾರರು ಆ ಕಾಮಗಾರಿಗಳನ್ನು ಅತ್ಯಂತ ಕಳಪೆಯಾಗಿ ಮಾಡುವುದಷ್ಟೇ ಅಲ್ಲ, ಮಾಡದೆಯೇ ಬಿಲ್ ಎತ್ತುವ ಭೂಪರು ಇಲ್ಲಿದ್ದಾರೆ. ಇತ್ತೀಚೆಗೆ ನಡೆದ ಟೆಂಡರ್ ಕೆಲಸ ದರಪರಿಷ್ಕರಣೆ (revised bill) ಸಂದರ್ಭದಲ್ಲಿ ಸುಮಾರು 25 ರಿಂದ 30 ಕೋಟಿ ರೂ. ಅವ್ಯವಹಾರವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ನೀ ಸತ್ತಂಗ ಮಾಡು ನಾ ಅತ್ತಂಗ ಮಾಡ್ತೀನಿ

ಕ್ಷೇತ್ರದಲ್ಲಿ ಪಕ್ಷದ ಹಿರಿಯ ಮುಖಂಡರಾಗಿರುವ ದರ್ಶನಾಪುರ ಊರು-ಊರುಗಳಲ್ಲಿನ ವ್ಯಕ್ತಿಗಳ ಮಧ್ಯೆ ಜಗಳ ಹುಟ್ಟಿಸಿ 'ನೀ ಸತ್ತಂಗ ಮಾಡು ನಾ ಅತ್ತಂಗ ಮಾಡ್ತೀನಿ' ಎಂಬ ತಂತ್ರವನ್ನು ಬಳಸುತ್ತಾರೆ. ಇದಕ್ಕೆ ತಾಜಾ ಉದಾಹರಣೆಯಾಗಿ ಶಹಾಪುರ ತಾಲ್ಲೂಕಿನ 'ಐಕೂರು' ಗ್ರಾಮದಲ್ಲಿ ಕಾಮಗಾರಿ ವಿಷಯದಲ್ಲಾದ ಜಗಳವನ್ನು ನೀಡಬಹುದು. ಮರ್ಡರ್ ಕೇಸಿನ ಮುಖ್ಯ ಆರೋಪಿ ಆಗಿರುವ ಶರಣಪ್ಪ ಮೇದರ್ ಗೋಳ್ ಎಂಬಾತ ಕಳೆದ ಐದಾರು ತಿಂಗಳಿನಿಂದ ಬೇಲ್ ತೆಗೆದುಕೊಳ್ಳದೆ ಸಚಿವರ ಸುತ್ತಲೇ ತಿರುಗುತ್ತಿದ್ದಾನಾದ್ದರಿಂದ ಪೊಲೀಸರು ಆವನನ್ನು ಬಂಧಿಸಿಲ್ಲ.



ಅಮರೇಶಗೌಡ ದರ್ಶನಾಪುರ

ಗುಲ್ಬರ್ಗಾ ಜಿಲ್ಲಾ ಅಭಿವೃದ್ಧಿಗಾಗಿ ಸುವರ್ಣ ಕರ್ನಾಟಕ ಯೋಜನೆಯಡಿಯಲ್ಲಿ 68 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಎಂದು ಸಭೆ-ಸಮಾರಂಭಗಳಲ್ಲಿ ಹೇಳಿ ಚಪ್ಪಾಳೆ ಗಿಟ್ಟಿಸಿ ಕೊಳ್ಳುವ ಸಚಿವ ದರ್ಶನಾಪುರ ಜಿಲ್ಲೆಯ 75 ಹಳ್ಳಿಗಳನ್ನು ಗುರುತಿಸಲಾಗಿದೆ ಎಂದು ರೀಲು ಬಿಡುತ್ತಿದ್ದಾರೆ. ಆದರೆ ವಾಸ್ತವವಾಗಿ ಈ ಯೋಜನೆ ಇನ್ನೂ ಸಿದ್ಧಗೊಂಡಿಲ್ಲ!

ಕೋಟ್ಯಂತರ ರೂ. ಬೆಲೆಯ ಆಸ್ತಿಯನ್ನು ಮಾಡಿರುವ ದರ್ಶನಾಪುರ ಇದೀಗ ಅಧಿಕಾರದ ಪಿತ್ತ ನೆತ್ತಿಗೇರಿಸಿಕೊಂಡಿರುವಂತೆ ಕಾಣುತ್ತಿದೆ. ಹಣ ಹಾಗೂ ಅಧಿಕಾರ ಏಕಕಾಲಕ್ಕೆ ಒಬ್ಬ ವ್ಯಕ್ತಿಗೆ ಒದಗಿ ಬಂದರೆ ಆ ವ್ಯಕ್ತಿ ಎಷ್ಟು ಹಾಳಾಗಬಲ್ಲನೋ ಅದಕ್ಕಿಂತ ಹೆಚ್ಚಾಗಿ ದರ್ಶನಾಪುರ ತನ್ನ ಪಾಲಿಟಿಕಲ್ ಹಾಗೂ ಪರ್ಸನಲ್ ಇಮೇಜಿಗೆ ದಕ್ಕೆ ತಂದುಕೊಂಡಿದ್ದಾನೆ.

ಹಣ ಹಾಗೂ ಅಧಿಕಾರ ... [illegible] ... ಬರಬಹುದು. ಅಲ್ಲಿಯ ತನಕ ಗುಲ್ಬರ್ಗಾಕ್ಕೆ ಬೇರೆ ... [illegible]

ಪುಂಡುದನಗಳ ಗೋಮಾಳ:

ಭಾರತೀಯ ಕಮ್ಯೂನಿಸ್ಟ್ ಪಕ್ಷ

ಭಾರತೀಯ ಕಮ್ಯೂನಿಸ್ಟ್ ಪಕ್ಷದ ಕಾರ್ಮಿಕರ ಪರವಾದ ಹೋರಾಟಗಳಿಂದಾಗಿ ಒಂದು ಕಾಲಕ್ಕೆ ದಾವಣಗೆರೆಯನ್ನು 'ಮಾಸ್ಕೊ' ಎಂದೂ ಅತ್ಯಧಿಕ ಜವಳಿ ಉತ್ಪಾದನೆಯಿಂದಾಗಿ ಕರ್ನಾಟಕದ 'ಮ್ಯಾಂಚೆಸ್ಟರ್' ಎಂದೂ ಕರೆಯಲಾಗುತ್ತಿತ್ತು. ಪ್ರಾರಂಭದಲ್ಲಿ ಹೋರಾಟವನ್ನೇ ಉಸಿರಾಗಿಸಿಕೊಂಡಿದ್ದ ಕಾಮ್ರೇಡ್ ಪಂಪಾಪತಿಯವರು ಬಲಿಷ್ಠವಾಗಿ ಕಟ್ಟಿ ಬೆಳೆಸಿದ್ದ ಕಾರ್ಮಿಕ ಸಂಘಟನೆಯು ತನ್ನೊಳಗಿನ ಹೀನುಳಿಯ ನಾಯಕತ್ವದಿಂದಾಗಿ ಹೋರಾಟವನ್ನು ಮುಂದುವರೆಸಿಕೊಂಡು ಹೋಗಲಾಗದೆ ರಾಜಿಸೂತ್ರಗಳನ್ನು ಮೈಗೂಡಿಸಿಕೊಂಡಿತ್ತು.

ಇದರಿಂದಾಗಿಯೇ ಒಂದು ಕಡೆ ಅಂದಿನ ದಿನಗಳಲ್ಲಿ ಉತ್ಸಾಹದಿಂದ ಹೋರಾಟಕ್ಕೆ ಹೆಗಲುಕೊಟ್ಟಿದ್ದ ಸಹಸ್ರ ಸಹಸ್ರ ಕಾರ್ಮಿಕರು ಇಂದು ಬೀದಿಗೆ ಬಿದ್ದು ಗತದಿನಗಳನ್ನು ನೆನೆದು ನೊಂದುಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಕಾರ್ಮಿಕರ ವಿಶ್ವಾಸವನ್ನು ದುರ್ಬಳಕೆ ಮಾಡಿಕೊಂಡ ನಾಯಕರು ಸ್ವಂತ ವ್ಯವಹಾರಗಳಲ್ಲಿ ತೊಡಗಿ ಲಕ್ಷಾಧಿಪತಿಗಳಾಗಿದ್ದಾರೆ.

ದಾವಣಗೆರೆ

ಈಗ ದಾವಣಗೆರೆ ಜಿಲ್ಲೆಯ ಭಾರತೀಯ ಕಮ್ಯೂನಿಸ್ಟ್ ಪಕ್ಷದ ಸ್ಥಿತಿ ಯಾವ ಮಟ್ಟಕ್ಕೆ ತಲುಪಿದೆ ಎಂದರೆ ಜನರ ಸಮಸ್ಯೆಗಳನ್ನು ಕುರಿತು ಯಾವುದೇ ನಿರ್ಣಾಯಕ ಹೋರಾಟಗಳನ್ನು ರೂಪಿಸಲಾಗುತ್ತಿಲ್ಲ. ಬದಲಾಗಿ ಮುಂಚೂಣಿಯಲ್ಲಿರುವ ಕಾರ್ಯಕರ್ತ(?)ರಿಗೆ ನಾನಾ ಹೆಸರುಗಳಲ್ಲಿರುವ ಒಂದೊಂದು ಸಂಘದ ಜವಾಬ್ದಾರಿಯನ್ನು ಕೊಟ್ಟು ದುಡಿಯುವ ಜನರಿಂದ ಪಟ್ಟಿ ಎತ್ತುವ ಕಾರ್ಯದಲ್ಲಿ ತೊಡಗಿಸಲಾಗಿದೆ. ಮುಂಚೂಣಿಯಲ್ಲಿರುವ ನಾಯಕರು ಭಾರತೀಯ ಕಮ್ಯೂನಿಸ್ಟ್ ಪಕ್ಷದ ಸದಸ್ಯರೊ ಅಥವಾ ರಿಯಲ್ ಎಸ್ಟೇಟ್ ವ್ಯವಹಾರದ ಬ್ರೋಕರ್‌ಗಳೊ ಎಂಬ ಗೊಂದಲ ಏರ್ಪಡುವಷ್ಟು ದಿವಾಳಿ ಎದ್ದಿದ್ದಾರೆ. ಇಷ್ಟಾದರೂ ಪಕ್ಷದ ಹಾಡುಗಾರರು ಶಾಮನೂರನರು ಶಿವಶಂಕ್ರಪ್ಪನಿಗೆ ಬೆಳ್ಳಿ ಕಿರೀಟ ತೊಡಿಸುವಂತಹ ಕಾರ್ಯಕ್ರಮಗಳಲ್ಲಿ ಕೂಡ "ಕಟ್ಟುತ್ತೇವೆ ನಾವು ಕಟ್ಟುತ್ತೇವೆ... ಕ್ರಾಂತಿ ಕೆಂಡದ ಕುಂಡುಹೊತ್ತು ಮುಳ್ಳ ತುಳಿಯುತ್ತೇವಾ" ಎಂದು ಯಾಂತ್ರಿಕವಾಗಿ ಹಾಡುತ್ತಿದ್ದಾರೆ.


ಕಾರ್ಮಿಕರ ಕದನರಂಗವಾಗಿದ್ದ ಭಾರತೀಯ ಕಮ್ಯೂನಿಸ್ಟ ಪಕ್ಷವು ಪಂಪಾಪತಿಯವರ ಕೊನೆಯ ವರ್ಷಗಳಲ್ಲೇ ಮುಗ್ಗರಿಸಿ ನೆಲಕಚ್ಚಲು ಪ್ರಾರಂಭಿಸಿತ್ತು. ಆದರೆ ಇವರ ನಂತರ ಹುಟ್ಟಿಕೊಂಡ ಮೀರ್ ಸಾಧಿಕ್ ಸಂತತಿಯ ನಾಯಕತ್ವದಿಂದಾಗಿ ಇಲ್ಲಿನ ಭಾ.ಕ.ಪಕ್ಕೆ ಉಳಿಗಾಲವೇ ಇಲ್ಲ ಎಂಬಂತಹ ಭಾವನೆ ಮೂಡುತ್ತಿದೆ. ಭಾ.ಕ.ಪ. ಹೀಗೆ ದಿವಾಳಿ ಎದ್ದಿರುವುದಕ್ಕೆ ಯಾವುದೇ ಒಬ್ಬ ವ್ಯಕ್ತಿ ಕಾರಣವಲ್ಲ. ಹಲವರು ಇಲ್ಲಿದ್ದುಕೊಂಡು ಮಿಂಚುತ್ತಲೇ ಹೊರಗಡೆ ವೇದಿಕೆಗಳನ್ನು ನಿರ್ಮಿಸಿಕೊಂಡು ಕಾಂಗ್ರೆಸ್, ಜನತಾದಳ, ಬಿಜೆಪಿ ಪಕ್ಷಗಳಲ್ಲಿ ಲೀನವಾಗಿದ್ದಾರೆ. ಕೆಲವರು ಇಲ್ಲಿದ್ದು ಪೂಜಾರಿಯಾದ ಕರ್ಮಕ್ಕೆ ಗಂಟೆ ಬಾರಿಸುವಂತೆ ಸಣ್ಣ-ಪುಟ್ಟ ಕೆಲಸಗಳನ್ನು ಮಾಡುತ್ತಿದ್ದಾರೆ. ಆದರೆ ಈ ಕೆಲವರಲ್ಲಿ ಕೆಲವರು ಗಂಟು ಮಾಡಿಕೊಳ್ಳುವುದನ್ನೇ ಕಾರ್ಯಕ್ರಮವನ್ನಾಗಿಸಿಕೊಂಡು ಪಕ್ಷವನ್ನು ಬಲಿಕೊಡುತ್ತಿರುವುದಲ್ಲದೇ ಪಕ್ಷದ ಆಸ್ತಿಯನ್ನು ಸುಣ್ಣಗೆ ಕಬಳಿಸುತ್ತಿದ್ದಾರೆ.

ಈ ಪಂಕ್ತಿಯಲ್ಲಿ ಇಲ್ಲಿದ್ದು ಉಂಡುಕೊಂಡು ಹೋದ ಕೆಲವರಿದ್ದಾರಾದರೂ, ಪಕ್ಷದ ನಾಯಕತ್ವದಲ್ಲಿದ್ದುಕೊಂಡು ಪಕ್ಷದ ಆಸ್ತಿಯನ್ನು ಕಬಳಿಸುತ್ತಿರುವ ಮಹಾನ್ ನಾಯಕನೆಂದರೆ ಕಾಮ್ರೇಡ್ ಎಚ್.ಕೆ. ರಾಮಚಂದ್ರಪ್ಪ,

ಎಚ್.ಕೆ. ರಾಮಚಂದ್ರಪ್ಪನ History ಮತ್ತು Mystery

ದಾವಣಗೆರೆ ಜವಳಿ ಮಿಲ್ಲುಗಳ ಮಾಲೀಕರ ವಿರುದ್ಧ ಕಾರ್ಮಿಕ ಚಳವಳಿಯು ನಿರ್ಣಾಯಕ ಹಂತಕ್ಕೆ ಬೆಳೆದಿದ್ದ ಸಂದರ್ಭದಲ್ಲಿ ದಾವಣಗೆರೆ ಕಾಟನ್‌ಮಿಲ್‌ನ ಮ್ಯಾನೇಜರ್ ಬಿ. ಪದ್ಮನಾಭ ಶೆಟ್ಟಿ 3.8.1972ರಂದು ಕೊಲೆಯಾಗಿದ್ದ. ಈ ಕೊಲೆಯಲ್ಲಿ ತಮ್ಮ ಯಾವುದೇ ಪಾತ್ರವಿಲ್ಲದಿದ್ದರೂ ಎಚ್.ಕೆ. ರಾಮಚಂದ್ರಪ್ಪ, ವೀರಭದ್ರಪ್ಪ ಮತ್ತಿತರು ಈ ಕೊಲೆ ಕೇಸಿನಲ್ಲಿ ಫಿಟ್ ಆಗಿ ಯಾವಾಗ ಜೈಲಿಗೆ ಹೋದರೋ ಆಗಿನಿಂದಲೇ ಇವರಿಗೆ ಶುಕ್ರದೆಸೆ ಆರಂಭವಾಯಿತು. ಈ ಕೇಸಿನಲ್ಲಿ ಐದಾರು ವರ್ಷ ಜೈಲಿನಲ್ಲಿದ್ದು ಹೊರಬರುವ ಹೊತ್ತಿಗೆ ಹಣ-ಆಸ್ತಿಯನ್ನು ಹೇಗೆ ಸಂಪಾದಿಸಿಕೊಳ್ಳಬೇಕೆಂಬ ಸ್ಪಷ್ಟ ಯೋಜನೆ ರೂಪಗೊಂಡಿತ್ತು. ರಾಮರಾವ್ ಎಂಬ ಆಂಧ್ರದ ವ್ಯಕ್ತಿಯ ಸಹಕಾರದಿಂದ ಕಿರಾಣಿ ಅಂಗಡಿಯನ್ನಿಟ್ಟುಕೊಂಡ ಎಚ್.ಕೆ.ಆರ್ ಮತ್ತು ವೀರಭದ್ರಪ್ಪ ಅಕ್ಕಿ ವ್ಯಾಪಾರದೊಂದಿಗೆ ಇತರ ವ್ಯವಹಾರಗಳನ್ನೂ ಶುರು ಹಚ್ಚಿಕೊಂಡರು. ಅಕ್ಕಿ ವೀರಭದ್ರಪ್ಪ ಈಗ ಶ್ರಮಜೀವಿ ಟ್ರಾನ್ಸ್‌ಪೋರ್ಟ್, ಶ್ರಮಜೀವಿ ಇಂಡಸ್ಟ್ರೀಸ್ ಮುಂತಾದವನ್ನು ಮಾಡಿಕೊಂಡು ಭಾ.ಕ.ಪ.ಗೆ ಗುಡ್‌ಬೈ ಹೇಳಿದ್ದರೆ ಎಚ್.ಕೆ.ಆರ್. ಮಾತ್ರ ಆಕ್ಟೋಪಸ್‌ನಂತೆ ಪಕ್ಷವನ್ನು ಹಿಡಿದಿಟ್ಟುಕೊಂಡಿದ್ದಾನೆ.

ಅಂದು ಚಂದ್ರೋದಯ ಮಿಲ್ಲಿನಲ್ಲಿ ಕಸಗುಡಿಸುವ ಕಾರ್ಮಿಕನಾಗಿದ್ದ ಎಚ್.ಕೆ.ರಾಮಚಂದ್ರಪ್ಪ ಇಂದು



ಎಚ್.ಕೆ. ರಾಮಚಂದ್ರಪ್ಪ

ಅಂಗನವಾಡಿ ಸಹಾಯಕಿಯರ ಸಂಘ, ಬಿಸಿಯೂಟ ತಯಾರಕರ ಸಂಘ, ಕಟ್ಟಡ ಕಟ್ಟುವ ಕಲ್ಲು ಹೊಡೆಯುವ ಕಾರ್ಮಿಕರ ಸಂಘ, ಜಾಡಮಾಲಿ ಬಿಲ್‌ಕಲೆಕ್ಟರ್ ನೀರಗಂಟಿ ಜವಾನರ ಸಂಘ ಈ ಎಲ್ಲಾ ಸಂಘಗಳ ರಾಜ್ಯಾಧ್ಯಕ್ಷ! ಭಾ.ಕ.ಪ. ರಾಜ್ಯ ಸಹ ಕಾರ್ಯದರ್ಶಿ ಮತ್ತು ಎ.ಐ.ಟಿ.ಯು.ಸಿ. ಜಿಲ್ಲಾಧ್ಯಕ್ಷ ಜೊತೆಗೆ ಪಾಲಿಟ್‌ಬ್ಯೂರೊ ಮೆಂಬರು ಕೂಡ. ದಾವಣಗೆರೆ ನಗರದಲ್ಲಿ ಎಚ್.ಕೆ. ಆರ್. ನಗರ ಮತ್ತು ಎಚ್.ಕೆ.ಆರ್. ಸರ್ಕಲ್ ಎಂಬುದು ಕೂಡ ಈತನ ಹೆಸರಿನಲ್ಲಿದೆ. ಇರಲಿ! ಕಾರ್ಮಿಕನಾಗಿದ್ದಾತನೊಬ್ಬ ಇಷ್ಟೊಂದು ಪದವಿಗಳನ್ನಲಂಕರಿಸಿರುವುದು ಸಂತೋಷವೇ. ಇಂತವೇ ಇನ್ನೂ ಐವತ್ತು ಸಂಘಗಳಿಗೆ ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಲಿ! ಆದರೆ ಈತ ತನಗೆ ವ್ಯಕ್ತಿತ್ವ ಮತ್ತು ಬದುಕನ್ನು ಕೊಟ್ಟ ಪಕ್ಷದ ಕೊರಳಿಗೇ ಕೈ ಹಾಕಿದ್ದಾನಲ್ಲಾ, ಅದೇ ಇಲ್ಲಿರುವ ಮಿಸ್ಟರಿ!

ಎಚ್.ಕೆ.ಆರ್. ನುಂಗುತ್ತಿರುವ ಕಾಮ್ರೇಡ್ ಲೆನಿನ್ ವಿದ್ಯಾಸಂಸ್ಥೆ

1980ರ ದಶಕದಲ್ಲಿ ಕಾಮ್ರೇಡ್ ಲೆನಿ[ನ್] ವಿದ್ಯಾಸಂಸ್ಥೆಯು ಕಾರ್ಮಿಕರ ಮಕ್ಕಳ ವಿದ್ಯಾಭ್ಯಾ[ಸದ] ದೃಷ್ಟಿಯಿಂದಲೇ ಪಂಪಾಪತಿಯವರ ನೇತೃತ್ವದಲ್ಲಿ ಸ್ಥಾ[ಪನೆ]ಯಾಯಿತು. 1981ರಲ್ಲಿ ಈ ಶಾಲೆಯ ಕಟ್ಟಡವ[ನ್ನು] ಅಂದಿನ ಲೋಕಸಭಾ ಸದಸ್ಯರಾಗಿದ್ದ ಸಿ. ರಾಜೇ[ಶ್ವರ] ರಾವ್‌ರವರೆ ಉದ್ಘಾಟಿಸಿದ್ದರು. 1983ರಲ್ಲಿ ಈ ವಿ[ದ್ಯಾ]ಸಂಸ್ಥೆ ನೊಂದಣಿಯಾಗಿದೆ. ಆಗ ಇದರ ಅಧ್ಯ[ಕ್ಷ]: ಕಾ.ಎಚ್.ಕೆ. ರಾಮಚಂದ್ರಪ್ಪ, ಉಪಾಧ್ಯಕ್ಷ: ಕಾ. ಎಂ.ಜಿ.ತಿಪ್ಪೇಸ್ವಾಮಿ, ಕಾರ್ಯದರ್ಶಿ: ಕಾಂ. ಜಯ... ವರೊಂದಿಗೆ ಎಂಟು ಮಂದಿ ಕಾಮ್ರೇಡ್‌ಗಳು

ಚಂದ್ರಶೇಖರ ತೋರಣಘಟ್ಟ

ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. 198... ವರೆಗೆ ಇದೇ ಕಾಮ್ರೇಡ್‌ಗಳ ಕಾರ್ಯಕಾರಿ ಸಮಿತಿಯೇ ಮುಂದುವರೆದಿದೆ. 1991ರ ನಂತರ ಈ ಹಿಂದೆ ... ಕಾರ್ಯಕಾರಿ ಸಮಿತಿಯ ಎಲ್ಲಾ ಕಾಮ್ರೇಡ್‌ಗಳ ಹೆಸರುಗಳು (ಎಚ್.ಕೆ.ರಾಮಚಂದ್ರಪ್ಪನನ್ನು ಹೊರ[ತು]ಪಡಿಸಿ) ಲೆನಿನ್ ವಿದ್ಯಾಸಂಸ್ಥೆಯ ಗೋಡೆಗೆ ಅಂಟಿಕೊಂಡಿ[ದ್ದ] ಕುಡುಗೋಲು-ಸುತ್ತಿಗೆಯ ಚಿಹ್ನೆಗಳಂತೆಯೇ ಉದು[ರಿ] ಹೋಗಿವೆ!

ವಿದ್ಯಾಸಂಸ್ಥೆ ಕಬಳಿಕೆಗಾಗಿ ಹೊಸ ಸಮಿತಿ

ಲೆನಿನ್ ವಿದ್ಯಾಸಂಸ್ಥೆಯ 1991ರ ನಂತರದ ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷನಾಗಿ ಎಚ್.ಕೆ. ರಾಮಚಂದ್ರಪ್ಪ, ಕಾರ್ಯದರ್ಶಿಯಾಗಿ ಮಲ್ಲಿಕಾದೇವಿ (ರಾಮಚಂದ್ರಪ್ಪನ ಮಗಳು), ನಿರ್ದೇಶಕರಾಗಿ ಸಂಗ... (ಸೊಸೆ), ಶೇಖರ್ ಮತ್ತು ರವೀಂದ್ರನಾಥ್ (ಮಕ್ಕಳು) ಉಳಿದಂತೆ ಮೂರು ಮಂದಿ ತಮ್ಮದೇ ಹತ್ತಿರ[ದ] ಸಂಬಂಧಿಗಳೇ ಇದ್ದು ಚಂದ್ರಮ್ಮ (ಭೋವಿ ಜನಾಂ[ಗ]) ಎಂಬುವವರನ್ನು ಕಾರ್ಯಕಾರಿ ಸಮಿತಿಯಲ್ಲಿ ತುರು...

ಇಲ್ಲಿಗೂ ಹರಡಿದ ಖೋಟಾನೋಟು ಜಾಲ

ರಾಯಚೂರಿನ ಶ್ರೀಮಂತರು ಹಾಗೂ ಮಾಜಿ ಮಂತ್ರಿ ಅಮರೇಶ ನಾಯಕ ಏರಿಯಾದಲ್ಲೇ ಇರುವ ಸಂಸದ ವೆಂಕಟೇಶ ನಾಯಕರ ಮನೆ ಸೇರಿದಂತೆ ಸಾಲುಸಾಲು ಕಳ್ಳತನವಾದಾಗ ಜನ ಜಿಲ್ಲಾಮಂತ್ರಿ ಆಲ್ಕೋಡ್ ಹನುಮಂತಪ್ಪ, ಗೃಹ ಮಂತ್ರಿ ಎಂ.ಪಿ. ಪ್ರಕಾಶ್‌ಗೆ ಉಗಿಯಬೇಕೆನ್ನುತ್ತಿದ್ದರು. ಅಷ್ಟರಲ್ಲಿ ರಾಯಚೂರಿನ ಎ.ಎಸ್.ಪಿ. ಕಿತ್ತಳೆ, ಸಿಪಿಐ ರಮೇಶ ಮೇಟಿ ತಂಡ ಖೋಟಾನೋಟಿನ ಮೂವರು ಖದೀಮರನ್ನು ಹಿಡಿದು ಇಲಾಖೆ ಮಾನ ಉಳಿಸಿದೆ.


ರಾಯಚೂರಿನಲ್ಲಿ ಪತ್ತೆಯಾಗಿರುವ ಈ ದಂಧೆಗೆ ಅತ್ತ ರಾಜಧಾನಿ ಬೆಂಗಳೂರಿಗೂ, ಇತ್ತ ಆಂಧ್ರದ ಮೆಹಬೂಬನಗರ, ಗದ್ವಾಲ್‌ಗಳಿಗೂ ಲಿಂಕು ಇರೋದು ಖಚಿತವಾಗುತ್ತಿದೆ. ಆಂಧ್ರದ ಹಳ್ಳಿಯೊಂದರಲ್ಲಿ ಕಂಪ್ಯೂಟರ್ ಸ್ಕ್ಯಾನರ್ ಮೂಲಕ ಪ್ರಿಂಟ್ ತೆಗೆಯುತ್ತಿದ್ದ ನೋಟುಗಳು ಇಲ್ಲಿ ಚಲಾವಣೆಗೊಳ್ಳುತ್ತಿರುವುದು ಜನರ ಗಾಬರಿಗೆ ಕಾರಣವಾಗಿದೆ.

ರಾಯಚೂರು-ಕೊಪ್ಪಳ


ಎ.ಎಸ್.ಪಿ. ಕಿತ್ತಳೆ ಮಗಳ ಮದುವೆಗೆ, ಡಿವೈಎಸ್‌ಪಿ ಯಂಕಪ್ಪ ಮಗನ ಮದುವೆಗೆ ಹೋದಾಗ ಸಾಲುಸಾಲು ಕಳ್ಳತನಗಳು ನಡೆದರೂ, ಇದ್ದೊಬ್ಬ ಎಸ್.ಪಿ. ಹೀತೆಂದ್ರನನ್ನು ಎತ್ತಿ, ಎರಡು ತಿಂಗಳಾದರೂ ಆ ಜಾಗಕ್ಕೆ ಬೇರೆಯವರನ್ನು ತರಬೇಕೆಂಬ ತಿಳುವಳಿಕೆ ಆಲ್ಕೋಡ್‌ಗೂ ಬರಲಿಲ್ಲ, ಕೊಡಬೇಕು ಅಂತ ಎಂ.ಪಿ. ಪ್ರಕಾಶಗೂ ತಿಳಿದಿಲ್ಲ. ಇವರೆ ಮದುವೆ ಮುಗಿಸಿಕೊಂಡು ಬಂದ ಕಿತ್ತಳೆ, ರಮೇಶ ಮೇಟಿ ತಂಡ ಬೆಂಗಳೂರಿನ ಆನೇಕಲ್‌ನ ರಾಜುಗೌಡ, ರಾಯಚೂರಿನ ಶೈಲೇಶಗೌಡ, ಆಂಧ್ರದ ಗದ್ವಾಲ್ ಬಳಿಯ ಕುಚನೇಕಲಾಹಳ್ಳಿಯ ಕುರುವ ಪಾಂಡುರಂಗನನ್ನು ಹಿಡಿದು 40 ಸಾವಿರ ಬೆಲೆಯ 50, 100, 500ರ ನೋಟುಗಳು, 2 ಸಾವಿರ ರೂಪಾಯಿ ಅಸಲಿ ನೋಟು ವಶಪಡಿಸಿಕೊಂಡಿದ್ದರು.

ರಾಯಚೂರಿಗೆ ಬಾಗಲಕೋಟೆ, ಬಾದಾಮಿಯಿಂದ ಕೊಪ್ಪಳದ ಕುಷ್ಟಗಿ ಮಾರ್ಗವಾಗಿ ಖೋಟಾ ನೋಟು ಬರುತ್ತವೆಯೆಂಬ ಅನಾದಿಕಾಲದ ಮಾಹಿತಿಯನ್ನು ಸಿರಿಯಸ್ಸಾಗಿ ಪರಿಗಣಿಸಿದ ಎಸ್.ಪಿ.ಗಳು ಬಹಳ ಕಮ್ಮಿ. ಆದರೆ ಈಗ ಸಿಕ್ಕಿರುವ ಖದೀಮರಿಂದ ಅಂತರರಾಜ್ಯದ ಜಾಲವೂ ಇದೆ ಎಂಬುದು ಬಯಲಾಗಿದೆ.


ಹಾಗೆ ನೋಡಿದರೆ ಖೋಟಾನೋಟಗಿಂತ ಕಳ್ಳತನದ ಕೇಸನ್ನೇ ಬೆನ್ನುಹತ್ತುತ್ತಿದ್ದರು ಪೊಲೀಸರು. ಸಂಸದನ ಮನೆಯಲ್ಲೇ ಕಳವಾದಾಗ ರಾಯಚೂರು ಪೊಲೀಸರಿಗೆ ನಿದ್ದೆಯೇ ಇಲ್ಲ. ಹೀಗೆ ಬೆನ್ನತ್ತುತ್ತಿದಾಗಲೇ ಜನವರಿ 7ರಂದು ರಾಯಚೂರಿನ ಕಾಳಿಕಾಂಬ ಗುಡಿಬಳಿ ಖೋಟಾನೋಟು ವಿನಿಮಯ ನಡೆಯಲಿದೆ ಎಂಬ ಮಾಹಿತಿ ಸಿಕ್ಕಿದೆ. ಅದರ ಬೆನ್ನತ್ತಿ ಹೋದಾಗ ಸಿಕ್ಕಿಬಿದ್ದಿದ್ದು ರಾಜುಗೌಡ, ಶೈಲೇಶ ಗೌಡ. ಕುರುವಪಾಂಡು ಸ್ವಲ್ಪದರಲ್ಲೇ ತಪ್ಪಿಸಿಕೊಂಡು ಸೀದಾ ಆಂಧ್ರದ ತ... ಹಳ್ಳಿಗೆ ಹೋಗಿ ಅಡಗಿಕೊಂಡಿದ್ದ. ಆದರೆ ಮರುದಿನ... 20 ಸಾವಿರ ರೂ.ಗಳ ಖೋಟಾನೋಟು, ಕಂಪ್ಯೂಟರ್ ಸಾಮಗ್ರಿ ಸಮೇತ ಅವನನ್ನೂ ಹಿಡಿದು ತಂದಿದ್ದಾರೆ.



ಕುರುವ ಪಾಂಡುರಂಗ



ಶೈಲೇಶ ಗೌಡ



ರಾಜುಗೌಡ

...! ಆಶ್ಚರ್ಯಕರವಾದ ಸಂಗತಿಯೇನೆಂದರೆ 1983 ರಿಂದ 1989ರವರೆಗೆ ಕಾಮ್ರೇಡ್ ಲೆನಿನ್ ವಿದ್ಯಾಸಂಸ್ಥೆಯಾಗಿಯೇ ಇದ್ದದ್ದು 2005-2006ರಲ್ಲಿ ದಿಢೀರನೆ ಕಾಮ್ರೇಡ್ ಲೆನಿನ್ ವಿದ್ಯಾಸಂಸ್ಥೆ (ಎಸ್/ಎಸ್‌ಟಿ)ಆಗಿ ಬದಲಾಗಿಬಿಟ್ಟಿದೆ. ಜಾತಿಯ ಹೆಸರಿನಲ್ಲಾದರೂ ಸರಿಯೇ ವಿದ್ಯಾಸಂಸ್ಥೆಯನ್ನು ಕಬಳಿಸುವುದಕ್ಕಾಗಿ ಜಾತಿ ಮೀಸಲಾತಿಯ ಲೇಬಲ್ಲನ್ನು ಪಡೆದುಕೊಂಡು ಎಸ್‌ಸಿ ಜನಾಂಗದ ಚಂದ್ರಮ್ಮನವರನ್ನು ಕಾರ್ಯಕಾರಿ ಸಮಿತಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಲೆನಿನ್ ವಿದ್ಯಾಸಂಸ್ಥೆಗೆ ಈಗ ಎರಡಂತಸ್ತಿನ ಕಟ್ಟಡವಿದೆ. ಈ ಮೊದಲು ಕೆಂಪು ಬಣ್ಣ ಕುಡುಗೋಲು ಸುತ್ತಿಗೆಗಳ ಚಿತ್ರಗಳಿಂದ ತುಂಬ ಚಿಕ್ಕದಾಗಿದ್ದ ಕಟ್ಟಡ ಈಗ ಕಾರ್ಮಿಕರ ಹಣದಿಂದಲೇ ಮೇಲೆದ್ದು ಕೆಂಪು ಬಣ್ಣವನ್ನು ಅಳಿಸಿಕೊಂಡಿರುವುದಲ್ಲದೇ ಕುಡುಗೋಲು ಸುತ್ತಿಗೆಗಳ ಲೇಬಲ್ಲುಗಳನ್ನೂ ಕೆಡವಿಕೊಂಡು ವ್ಯವಹಾರದ ಮೆರಗನ್ನು ಪಡೆದುಕೊಂಡಿದೆ. ಈ ಶಾಲೆ ಇರುವ ಜಾಗದ ರಸ್ತೆಯ ಪಕ್ಕದಲ್ಲೇ ದಾವಣಗೆರೆ ನಗರಸಭೆಯಿಂದ ಲೆನಿನ್ ವಿದ್ಯಾಸಂಸ್ಥೆಗಾಗಿ ಅತೀ ಕಡಿಮೆ ಬೆಲೆಗೆ ನೀಡಿರುವ 60X200 ಅಡಿಗಳ ಜಾಗವಿದೆ.

ಇದೇ ಜಾಗದಲ್ಲಿ ಈಗ ಶಾಲೆಗಾಗಿ ಎಚ್.ಕೆ.ಆರ್. ಹೊಸ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾನೆ. ಲೆನಿನ್ ವಿದ್ಯಾಸಂಸ್ಥೆಯ ಶಾಲೆಯ ಕಟ್ಟಡ ಹಾಗೂ ಜಾಗವನ್ನು ತನ್ನ ಸ್ವಯಾರ್ಜಿತ ಹಕ್ಕೆಂಬಂತೆ ಎಚ್.ಕೆ. ರಾಮಚಂದ್ರಪ್ಪ ಪಥ್ಯ ಅನುಭವಿಸುತ್ತಿದ್ದಾನೆ. 1989ರ ನಂತರ ಲೆನಿನ್ ವಿದ್ಯಾಸಂಸ್ಥೆಯ ಅಡಿಯಲ್ಲಿ ಟ್ರಸ್ಟ್ ಒಂದನ್ನು ಹುಟ್ಟು ಹಾಕಿದ್ದಲ್ಲದೆ 'ಪಕ್ಷದ ಸಂಬಂಧಿ'ಗಳನ್ನೆಲ್ಲಾ ಕಿತ್ತುಹಾಕಿ ತನ್ನ 'ರಕ್ತ ಸಂಬಂಧಿ'ಗಳನ್ನು ಮಾತ್ರ ಈ ಟ್ರಸ್ಟಿನೊಳಗೆ ತೂರಿಸಿಕೊಂಡು ಲೆನಿನ್ ವಿದ್ಯಾಸಂಸ್ಥೆಯ ಸಕಲ ಆಸ್ತಿಯನ್ನು ಎಚ್.ಕೆ.ಆರ್. ಕಬಳಿಸಿದ್ದಾನೆ.

ಆನಗೋಡು ರಾಮಚಂದ್ರಪ್ಪನೆಂಬ ಇನ್ನೊಬ್ಬ ಕಳ್ಳ


ಹಾಗೆ ನೋಡಿದರೆ ಭಾ.ಕ.ಪ.ದ ಆಸ್ತಿಯನ್ನು ಬರೀ ಎಚ್.ಕೆ.ಆರ್. ಮಾತ್ರ ತಿಂದಿಲ್ಲ. ಬಾಡಾ ಮುಖ್ಯ ರಸ್ತೆಯ ಅಂಜನೇಯ ಮಿಲ್ ಎದುರುಗಡೆ ಇದ್ದ 6.37 ಗುಂಟೆ ಖುಷ್ಕಿ ಜಮೀನನ್ನು ಪಕ್ಷದ ಅಂದಿನ ಕಾರ್ಯದರ್ಶಿ ಸೈಯದ್ ಜಕ್ರಿಯಾ ಹೆಸರಿನಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಭಾ.ಕ.ಪ.ವು ಪಡೆದುಕೊಂಡಿತ್ತು. 1991-92ರಲ್ಲಿ ಪಕ್ಷದ ಕಚೇರಿ, ಸ್ಕೂಲು ಮತ್ತು ಪಾರ್ಕಿಗೆಂದು ಸ್ವಲ್ಪ ಭೂಮಿಯನ್ನು ತೆಗೆದು ಇಡೀ ಜಮೀನನ್ನು ಏಕಾಭಿಪ್ರಾಯಯೊಂದಿಗೆ ಒಟ್ಟು 241 ಸೈಟುಗಳನ್ನಾಗಿ ಪರಿವರ್ತಿಸಿ ಮಾರಲು ಶುರುವಿಟ್ಟುಕೊಳ್ಳಲಾಗಿದೆ.

ವಿಶೇಷವೇನೆಂದರೆ ಸೈಟುಮಾರಿ ಬಂದ ಹಣವನ್ನು ಸಂಗ್ರಹಿಸಲು ಅಂದಿನ ಭಾ.ಕ.ಪ. ನಾಯಕ ಆನಗೋಡು ರಾಮಚಂದ್ರಪ್ಪನಿಗೆ ವಹಿಸಲಾಗಿತ್ತು. ಈ ಸೈಟುಗಳನ್ನು ಮಾರಿದ್ದರಿಂದ ಕಾರ್ಮಿಕರ ಕಲ್ಯಾಣವೇನೂ ಆಗದಿದ್ದರೂ ಆನಗೋಡು ರಾಮಚಂದ್ರಪ್ಪ ಮಾತ್ರ ನಾಲ್ಕು ಲಕ್ಷದವರೆಗೆ ಹಣವನ್ನು ಸಂಗ್ರಹಿಸಿದ. ಸಂಗ್ರಹಿಸಿದ ಹಣವನ್ನು ನುಂಗಿ ನೀರು ಕುಡಿಯುತ್ತಿದ್ದ ಸಂದರ್ಭಧಲ್ಲೇ ಭಿನ್ನಾಭಿಪ್ರಾಯಗಳೆದ್ದು, ಹಲವಾರು ಪಂಚಾಯತಿಗಳೂ ನಡೆದು 3.5 ಲಕ್ಷ ರೂ.ಗಳನ್ನು ಪಕ್ಷಕ್ಕೆ ಕೊಡಲು ಆನಗೋಡು ರಾಮಚಂದ್ರಪ್ಪನನ್ನು ಬೇಡಲಾಯಿತಾದರೂ ಈತ ಕೇವಲ 25,000 ರೂ.ಗಳನ್ನು ಪಕ್ಷಕ್ಕೆ ಕೊಟ್ಟು ಉಳಿದುದ್ದನ್ನು ಗುಳುಂ ಮಾಡಿದ. ಇವನು ತಾನು ಮಾಡಿದ ಸ್ವಾಹವನ್ನು ಸಮರ್ಥಿಸಿಕೊಂಡಿದ್ದು ಹೇಗೆ ಗೊತ್ತೆ? 'ಎಚ್.ಕೆ. ರಾಮಚಂದ್ರಪ್ಪ ಕಬಳಿಸುತ್ತಿರುವ ಲೆನಿನ್ ವಿದ್ಯಾಸಂಸ್ಥೆ ಮತ್ತು ಅದರ ಆಸ್ತಿಯನ್ನು ಪಕ್ಷವು ವಾಪಾಸು ಪಡೆಯಲಿ ಆಗ ನಾನು ಸೈಟು ಮಾರಿದ ಹಣವನ್ನು ವಾಪಾಸ್ಸು ಕೊಡುತ್ತೇನೆ' ಎಂದು! ಗಂಟುಗಳ್ಳ ಆನಗೋಡು ರಾಮಚಂದ್ರಪ್ಪ ಭಾ.ಕ.ಪ.ವನ್ನು ಬಿಟ್ಟು ಕಾಂಗ್ರೆಸ್ ಪಕ್ಷವನ್ನು ಸೇರಿಯಾಗಿದೆ. ಆದರೆ ಆತ ಮಾರಿದ ಎಂಟು-ಹತ್ತು ಸೈಟುಗಳು ಇನ್ನೂ ರಿಜಿಸ್ಟರ್ ಆಗದೆ ಹಣಕೊಟ್ಟವರು ಸೈಯದ್ ಜಕ್ರಿಯಾ ಮನೆಗೆ ದಿನನಿತ್ಯ ಸೈಕಲ್ ತುಳಿಯುತ್ತಿದ್ದಾರೆ.

ಈಗ ಕೋಟಿಗಳ ಲೆಕ್ಕದಲ್ಲಿ ಬೆಲೆ ಬಾಳಬಹುದಾದ ಜಮೀನು ಪಕ್ಷದ ಅಂದಿನ ಸಹಕಾರ್ಯದರ್ಶಿಯಾಗಿದ್ದ ಅಬ್ದುಲ್ ರಹೀಂ ಸಾಬ್ ಮುಂತಾದವರ ವಿರೋಧಗಳ ನಡುವೆಯೂ ಆನಗೋಡು ರಾಮಚಂದ್ರಪ್ಪನೆಂಬ ಹದ್ದಿನ ಪಾಲಾಗಿದ್ದು ಮಾತ್ರ ಸತ್ಯ. ಆದರೆ ಭಾ.ಕ.ಪ.ಮಾತ್ರ ಇದೊಂದು ಮಾಮೂಲಿ ಘಟನೆ ಎಂಬಂತೆ ಮೌನ ವಹಿಸಿದೆ!

ದಾವಣಗೆರೆ ಭಾರತೀಯ ಕಮ್ಯೂನಿಸ್ಟ್ ಪಕ್ಷದ ಆಸ್ತಿ ಎಷ್ಟು?

ಸಿ.ಎಸ್.ಐ.ಆಸ್ಪತ್ರೆ ಹಿಂಭಾಗದಲ್ಲಿರುವ 200X400 ಅಡಿ ಜಾಗ, ಆವರಗೆರೆಯ 40X40 ಸೈಟು, ಬೇತೂರು ರಸ್ತೆಯಲ್ಲಿನ 4 ಮಳಿಗೆಗಳ ಕಟ್ಟಡ ಮತ್ತು ಖಾಲಿ ಜಾಗ, ಆಂಜನೇಯ ಮಿಲ್ ಎದುರಿಗಿರುವ 60X120 ಅಡಿ ಸೈಟು, ಕೆ.ಟಿ.ಜೆ. ನಗರ 14ನೇ ಕ್ರಾಸ್ ನಿಟ್ಟುವಳ್ಳಿ ರಸ್ತೆಯಲ್ಲಿನ ಕಾಮ್ರೇಡ್ ಸುರೇಶ್, ಶೇಖರಪ್ಪ ವ್ಯಾಯಾಮ ಶಾಲೆ ಮತ್ತು ಖಾಲಿ ಜಾಗ, ಕಾಮ್ರೇಡ್ ಲೆನಿನ್ ವಿದ್ಯಾಸಂಸ್ಥೆಯ 60X205 ಅಡಿ ಜಾಗ ಮತ್ತು ಲೆನಿನ್ ಸರ್ಕಲ್‌ನಲ್ಲಿರುವ ಎರಡಂತಸ್ತಿನ ಕಟ್ಟಡ, ಅಶೋಕ ರಸ್ತೆಯಲ್ಲಿನ ಎರಡಂತಸ್ತಿನ ಕಟ್ಟಡ ಮತ್ತದರ ಹಿಂದಿರುವ ಇನ್ನೊಂದು ಕಟ್ಟಡ ಸೇರಿ ಒಟ್ಟು ಮೂರು ಕೋಟಿ ರೂ.ಗಳಿಗಿಂತಲೂ ಹೆಚ್ಚು ಆಸ್ತಿ ಭಾರತೀಯ ಕಮ್ಯೂನಿಸ್ಟ ಪಕ್ಷಕ್ಕಿದೆ ಎನ್ನಲಾಗುತ್ತಿದೆ. (ಎಂ.ಸಿ.ಸಿ.'ಎ' ಬ್ಲಾಕ್‌ನಲ್ಲಿದ್ದ ಸೈಟೊಂದು ಯಾರಿಗೂ ತಿಳಿಯದಂತೆ ಮಂಗಮಾಯವಾಗಿದ್ದನ್ನು ಹೊರತುಪಡಿಸಿ!) ಈ ಮೇಲಿನ ಆಸ್ತಿಗಳು ಪಕ್ಷದ ವಿವಿಧ ಶಾಖಾ ನಾಯಕರುಗಳ ಹೆಸರುಗಳಲ್ಲಿವೆ. ಈ ಆಸ್ತಿಯನ್ನು ಉಳಿಸಿಕೊಳ್ಳಲು (?) "ಕಾಮ್ರೇಡ್ ಪಂಪಾಪತಿ, ಸುರೇಶ್, ಶೇಖರಪ್ಪ ಅಭಿವೃದ್ಧಿ ಟ್ರಸ್ಟ್" ಎಂಬುದನ್ನು ಸ್ಥಾಪಿಸಿದ್ದಾರೆ. ಈ ಟ್ರಸ್ಟಿನ ಅಧ್ಯಕ್ಷ ಕೂಡಾ ಎಚ್.ಕೆ. ರಾಮಚಂದ್ರಪ್ಪನೇ. ಮುಂದಿನ ದಿನಗಳಲ್ಲಿ ಭಾ.ಕ.ಪ.ಗೆ ಏನು ಕಾದಿದೆಯೋ?



ಪಕ್ಷದ ಆಸ್ತಿಯಲ್ಲೊಂದಾದ ಸುರೇಶ್ ಶೇಖರಪ್ಪ ವ್ಯಾಯಾಮ ಶಾಲೆ



ಲೆನಿನ್ ವಿದ್ಯಾಸಂಸ್ಥೆಯ ಕಟ್ಟಡ

ಆಸ್ತಿ ಕಬಳಿಕೆಗೆ ಭಾ.ಕ.ಪ. [illegible]

ಹಾಡು ಹಗಲೇ ಲೆನಿನ್ ವಿದ್ಯಾಸಂಸ್ಥೆಯ ಆಸ್ತಿಯನ್ನು ಎಚ್.ಕೆ. ರಾಮಚಂದ್ರಪ್ಪ ಕಬಳಿಸಿದ್ದರೂ ಈ ಬಗ್ಗೆ ಭಾ.ಕ.ಪ. ಇದುವರೆಗೂ ತುಟಿ ಪಿಟಿಕ್ ಎಂದಿಲ್ಲ! ಈ ವಿಷಯವು ಕೇಂದ್ರ ನಾಯಕತ್ವದಿಂದ ಮೊದಲಾಗಿ ಸ್ಥಳೀಯ ಸಕಲ ಕಾರ್ಯಕರ್ತರಿಗೂ ತಿಳಿದಿದೆ. ಎಚ್.ಕೆ.ಆರ್.ನನ್ನು ಎದಿರು ಹಾಕಿಕೊಳ್ಳಬಾರದೆಂಬ ಭಯದಿಂದಲೋ ಅಥವಾ ಎದಿರು ಹಾಕಿಕೊಂಡರೆ ತಮ್ಮ ಹೂರಣವೂ ಹೊರಬರುತ್ತದೆಂಬ ಆತಂಕದಿಂದಲೊ ಎಲ್ಲರೂ ಸುಮ್ಮನಿದ್ದಾರೆ. ಆದರೆ ಎಚ್.ಕೆ. ರಾಮಚಂದ್ರಪ್ಪನಿಂದ ಪಕ್ಷದಲ್ಲೇ ತುಳಿತಕ್ಕೊಳಗಾಗುತ್ತಿರುವ ಕಾರ್ಯಕರ್ತರು ಮಾತ್ರ ಎಚ್.ಕೆ.ಆರ್. ಪಾಳೇಗಾರಿಕೆ ನೀತಿ ಹಾಗೂ ಆಸ್ತಿ ಕಬಳಿಕೆಯನ್ನು ಬೀದಿ ಬೀದಿಗಳಲ್ಲಿ ಸಾರುತ್ತಿದ್ದಾರೆ. ಕನಿಷ್ಠ ಪಕ್ಷ ಪಾರ್ಟಿಯಲ್ಲಿ ನೀತಿ ಸಂಹಿತೆಗಳೇನಾದರೂ ಇದ್ದರೆ ಈ ಬಗ್ಗೆ ಭಾ.ಕ.ಪ. ತಕ್ಷಣ ಕ್ರಮ ಕೈಗೊಳ್ಳಬೇಕಲ್ಲವೇ?

ಅಸಲಿ ನೂರು ರೂಪಾಯಿಗೆ ಮುನ್ನೂರು ರೂಪಾಯಿ ಖೋಟಾನೋಟು ಕೊಡುವ ಜಾಲದ ಮುಖ್ಯಸ್ಥ ಆನೇಕಲ್ ರಾಜುಗೌಡ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ...ಳ. ಬಿ.ಕಾಂ. ಓದಿ, ಒಂದಿಷ್ಟು ಕಂಪ್ಯೂಟರ್ ಕೋರ್ಸ್‌ಗಳನ್ನು ಮುಗಿಸಿರುವ ರಾಜುಗೌಡ ಈ ಹಿಂದೆ ಮಂಗಳೂರಿನ ವ್ಯಕ್ತಿಯೊಬ್ಬ ಕಂಪ್ಯೂಟರ್ ಮೂಲಕ ಖೋಟಾನೋಟು ತಯಾರಿಸುತ್ತಿದ್ದ ಬಗ್ಗೆ ಪ್ರಕಟವಾದ ಪತ್ರಿಕಾ ವರದಿ ...ಯೇ ಈ ದಂಧೆಗೆ ಇಳಿದ. ...ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸರಿಗೆ ಖೋಟಾನೋಟಿನಲ್ಲಿ ಸಿಕ್ಕಿ ಕೃಷ್ಣ ಜನ್ಮಸ್ಥಾನ ಕಂಡು ... ಮೇಲೆ ಬಂದು ಮತ್ತದೇ ದಂಧೆಗೆ ಇಳಿದು ...ಸಿಕ್ಕಿಬಿದ್ದಿದ್ದಾನೆ. ಮೊನ್ನೆ ರಾಯಚೂರು ಪೊಲೀಸರು ...ಕೊಂಡು ಬಂದ ಮೇಲೆ ಪತ್ರಕರ್ತರೆದುರು ತನ್ನ ...ಚಳಕವನ್ನು ತೋರಿಸಿದ.

ಆನೇಕಲ್‌ನ ರಾಜುಗೌಡ ಮತ್ತು ಆಂಧ್ರದ ಕುರುವ ... ತಯಾರಕರಾದರೆ, ಸಿಕ್ಕಿಬಿದ್ದಿರುವ ಸ್ಥಳೀಯ ...ಗೌಡ ವಿತರಕನಾಗಿದ್ದ ಎಂಬುದು ಹೊರನೋಟಕ್ಕೆ ... ಇವರ ಹಿಂದಿರುವ ಜಾಲ ಮಾತ್ರ ದೊಡ್ಡದಿದೆ. ... ಹೂಡದರೂ ಸೇರಿಯೇ ಒಂದು ವರ್ಷದಲ್ಲಿ 3 ... ಕೊಟ್ಟದ ಖೋಟಾನೋಟುಗಳನ್ನು ಚಲಾಯಿಸಿ...ದ್ದಾರೆ. ಅಲ್ಲದೇ ದೇವದುರ್ಗ, ಮುದುಗಲ್, ..., ಕೊಪ್ಪಳದ ಹಳ್ಳಿಗಳಲ್ಲಿ ಖೋಟಾನೋಟಿನ ಹಾವಳಿ ಇದೆ. ಈಗ ಸಿಕ್ಕಿರುವುದು ತುಣುಕು ಮಾತ್ರ. ಇದನ್ನು ಪೊಲೀಸರ ತನಿಖೆಯೇ ಹೊರಹಾಕಬೇಕು. ಆ ಕೆಲಸ ಆಗೇ ಆಗುತ್ತದೆ. ಏಕೆಂದರೆ ಇದೀಗ ರಾಯಚೂರಿನ ಎಸ್ಪಿಯಾಗಿ ದಕ್ಷ ಪದ್ಮನಯನ ಬಂದಿದ್ದಾರೆ.




ರಮೇಶ್ ಮೇಟಿ

ಕೊಪ್ಪಳದಲ್ಲೂ ಹಾವಳಿ ಜೋರು

ಕಳೆದ ಒಂದು ವರ್ಷದಿಂದ ನಿಂತೇ ಹೋಗಿದ್ದ ಖೋಟಾನೋಟಿನ ಹಾವಳಿ ಪದ್ಮನಯನ ವರ್ಗಗೊಂಡ ಬೆನ್ನಲ್ಲೇ ಆರಂಭವಾಗಿದೆ. ಇಲ್ಲಿ ಖೋಟಾ ನೋಟಿಗೆ ಕುಖ್ಯಾತಿಯಾದದ್ದು ಭಾಗ್ಯನಗರ. ಅಂತೆಯೇ ಕುಕನೂರು, ಕುಕನಪಳ್ಳಿ, ಕಾರಟಗಿ, ಬೇವೂರು, ದೋತಿಹಾಳ, ತಾವರಗೇರಿಯಂತಹ ಪಟ್ಟಣಗಳಿಗೂ ಹಬ್ಬಿದ್ದು, ಜಿಲ್ಲೆಯ ಎರಡು ಪ್ರಮುಖ ಜಾನುವಾರು ಸಂತೆಗಳು ಖೋಟಾನೋಟು ಸರಬರಾಜು ಮಾಡಲು ಸರಳ ತಾಣಗಳಾಗಿವೆ. ಗದಗ, ಹುಬ್ಬಳ್ಳಿ, ಬಾಗಲಕೋಟೆ, ಬಿಜಾಪುರ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಿಗೆ ಜಂಕ್ಷನ್‌ನಂತಿರುವ ಕುಷ್ಟಗಿ ಮಾರ್ಗವಾಗಿ ಖೋಟಾನೋಟು ಹಬ್ಬುತ್ತಿದೆ ಎಂಬುದಕ್ಕೆ ಪಕ್ಕದ ತಾವರಗೆರೆಯಲ್ಲಿ ಸಿಕ್ಕಿಬಿದ್ದ ಮಲ್ಲಪ್ಪ, ಶ್ರೀದೇವಿ, ಶಂಕ್ರಯ್ಯರ ಪ್ರಕರಣಗಳೇ ಸಾಕ್ಷಿ. ಭಾಗ್ಯನಗರದ ಹಳ್ಳದ ದಂಡೆಯಲ್ಲಿ ಚೀಲಗಟ್ಟಲೆ ಖೋಟಾನೋಟು ಸುಟ್ಟ ಪ್ರಕರಣ ನಡೆದು ಮೂರು ವರ್ಷ ಆಗಿಲ್ಲ, ಮತ್ತೆ ಅಲ್ಲಿ ಹಾವಳಿ ಎದ್ದಿದೆ. ಈ ಜಾಲದಲ್ಲಿರಬಹುದಾದ ಶ್ರೀಮಂತರ ಮನೆಗಳಿಗೆ ವಾರದ ಒಂದು ನಿಗದಿತ ಮಧ್ಯರಾತ್ರಿ ಬೇರೆ ಊರಿನ ವಾಹನಗಳು ಬಂದು ಅರ್ಧ ಗಂಟೆಯಲ್ಲೇ ಹೊರಟು ಹೋಗುವ ಸಂಶಯಾತ್ಮಕ ನಡುವಳಿಕೆ ಭಾಗ್ಯನಗರದವರ ಆತಂಕಕ್ಕೆ ಕಾರಣವಾಗಿದೆ. ಇಲ್ಲಿನ ಖಾಸಗಿ ಫೈನಾನ್ಸ್‌ಗಳು ಈ ಹಾವಳಿಯಿಂದ ದಂಧೆಯನ್ನೇ ಕೈಬಿಡಲು ಯೋಚಿಸುತ್ತಿದ್ದರೆ, ಇಲ್ಲಿರುವ ಎರಡು ಬ್ಯಾಂಕ್‌ನ ಪಿಗ್ಮಿ ಕಲೆಕ್ಟರ್‌ಗಳು ನೌಕರಿಯೇ ಒಲ್ಲೇ ಅನ್ನುವ ಮಟ್ಟಕ್ಕೆ ರೋಸಿ ಹೋಗಿದ್ದಾರೆ. ತಿಂಗಳಿಡೀ ಪಿಗ್ಮಿ ಎತ್ತಿದರೆ ಸಿಗುವ ಕಮಿಷನ್ ನಾಲ್ಕು ಸಾವಿರ ಅದರಲ್ಲಿ ತಿಂಗಳಿಗೆ ನಾಲ್ಕು ಸಾರಿ 500 ರ ಖೋಟಾ ನೋಟು ಬಂದ್ರೆ ಪಾಪ ಅವರೆಲ್ಲಾ ಏನು ಮಾಡುವುದು?

ಈ ಮುಂಚೆ ಹುಬ್ಬಳ್ಳಿಯಲ್ಲಿ ನಡೆದ ರೂಪಾಳ ಕೊಲೆಯಲ್ಲಿ ಖೋಟಾನೋಟಿನ ಖದೀಮರ ಜಾಲವಿತ್ತು. ಆ ಕೊಲೆಯಲ್ಲಿ ಕೊಪ್ಪಳದ ದಶರಥ ಎಂಬುವವನು ಶಾಮೀಲು ಆಗಿದ್ದು ಹಾಗೂ ಆತ ಶ್ರೀಮಂತನಾದದ್ದರ ಬಗ್ಗೆ 'ಲಂಕೇಶ್' ಹಿಂದೆ ವರದಿ ಮಾಡಿದಾಗ ಕೊಪ್ಪಳವೇ ಹೌಹಾರಿ ಬಿಟ್ಟಿತ್ತು, ಇದಿಷ್ಟರ ಮಧ್ಯೆ ಯಲಬುರ್ಗಾ, ಕುಕನೂರಿನ ಇಬ್ಬರು ಹೂವಿನಹಡಗಲಿಯಲ್ಲಿ ಇದೇ ಜಾಲದಡಿ ಬಂಧಿತರಾಗಿದ್ದರೆ. ಜನವರಿ ಎರಡನೇ ವಾರದಲ್ಲಿ ಭಾಗ್ಯನಗರ, ಕೊಪ್ಪಳದಲ್ಲಿ ಸಿಕ್ಕ ಖೋಟಾನೋಟುಗಳನ್ನು ಎಲ್ಲಿಯ ರಗಳೆ ಅಂತ ಸುಟ್ಟು ಹಾಕಿದ್ದಾರೆ. ಮಧ್ಯಮ ವರ್ಗದ ಅಂಗಡಿಗಳಲ್ಲಿ ಸಾಮಾನು ಖರೀದಿಸುವ ಮೂಲಕ ಈ ಜಾಲ ವಿಸ್ತರಣೆಯಾಗುತ್ತಿರುವುದು ಕ್ರಮೇಣ ಬೆಳಕಿಗೆ ಬರುತ್ತಿದೆ. ಕೊಪ್ಪಳದ ಒಂದು ನಿರ್ದಿಷ್ಟ ಪ್ರದೇಶದಿಂದ ಇಂತಹ ಖೋಟಾ ನೋಟುಗಳು ಬರುತ್ತಿವೆ ಎಂದು ಒಪ್ಪಿಕೊಳ್ಳುವ ವ್ಯಾಪಾರಸ್ಥರು ಪೊಲೀಸರಿಗೆ ತಿಳಿಸಿದರೆ ಅವರೆಲ್ಲಿ ನಮ್ಮನ್ನೇ ಫಿಟ್ ಮಾಡ್ತಾರೋ ಅಂತ ಅವನ್ನು ಸುಟ್ಟು ಹಾಕುತ್ತಿದ್ದಾರೆ! ರಂಗೋಲಿ ಕೆಳಗೆ ತೂರಿಕೊಳ್ಳುವ ಖೋಟಾನೋಟಿನ ಖದೀಮರು ಈಗ ಬಾರು, ಬಂಕ್, ಬ್ಯಾಂಕುಗಳಲ್ಲಿ ಖೋಟಾ ಪತ್ತೆ ಹಚ್ಚುವ ಯಂತ್ರಗಳು ಬಂದಾಗಿನಿಂದ ಉತ್ತರ ಕರ್ನಾಟಕದ ಪ್ರಮುಖ ದನದ ಸಂತೆ, ದೇವರ ಜಾತ್ರೆಗಳನ್ನು ಗುರಿಯಾಗಿಸಿಕೊಂಡಿರುವ ಸಂಶಯವಿದೆ.

ಜಾತ್ರೆಯಲ್ಲಿ 50 ರೂಪಾಯಿ ಸಾಮಾನು ಖರೀದಿಸಿ, 500 ರೂ. ಖೋಟಾ ನೋಟು ದಾಟಿಸುವುದು ಇವರ ಉದ್ದೇಶ. ಈಗ ಕೊಪ್ಪಳದಲ್ಲಿ ಕಾಣುತ್ತಿರುವ ಈ ಹಾವಳಿಗೂ, ಈಗ ನಡೆಯುತ್ತಿರುವ ಕೊಪ್ಪಳ ಜಾತ್ರೆಯಲ್ಲಿ ಆದ ಚಲಾವಣೆಯೇ ಕಾರಣವೆಂದು ಹೇಳುವ ವ್ಯಾಪಾರಸ್ಥರು ಸದ್ದಿಲ್ಲದೇ ಅಂತಹವುಗಳನ್ನು ಸುಡುತ್ತಿದ್ದಾರೆ. ಏಕಾಏಕಿ ಎದ್ದಿರುವ ಈ ಹಾವಳಿಯಿಂದ ಬಡವರು, ಕೂಲಿಕಾರರು, ಮಧ್ಯಮ ವ್ಯಾಪಾರಸ್ಥರು ಭಯ ಭೀತರಾಗಿದ್ದಾರೆ. ಇದೀಗ ಹಾವೇರಿಯಿಂದ ಬಂದಿರುವ ಎಸ್.ಪಿ. ಸಿದ್ದಪ್ಪ ಇನ್ನು ರೆಡಿಯಾಗಲೇಬೇಕು. ಇಲ್ಲದಿದ್ದರೆ ಈ [illegible] ಮೀರುವುದು ಖಚಿತ



ವಿ.ಬಿ. [illegible]

-ವರದಿಗಾರ

ಹೆಂಡತಿಯನ್ನು ಪರರಿಗೊಡ್ಡುವ ಶೈಲೂಷ

ಡಾ.ಪ್ರೋಲಂಕಿ ರಾಮಮೂರ್ತಿಯವರ

6 ಸೀತಾಯಣ

ರಾಮನ 'ನಿರ್ದಯತೆ', 'ನಿಷ್ಕಾರುಣ್ಯ'ದ ಏಕತೆ ರಾಮಾಯಣದುದ್ದಕ್ಕೂ ಕಂಡುಬರುವ ಒಂದು ಗಮನಾರ್ಹ ಗುಣವಿಶೇಷ. ರಾಮನು ವಾಲಿಯನ್ನು ಮರೆಯಲ್ಲಿ ನಿಂತು ಕೊಂದ ನಂತರ ತಾರೆಯ ಆಕ್ರಂದನ, ವಿಲಾಪ ರಾಮನಲ್ಲಿ ಒಡನೆಯೇ ಯಾವ ರೀತಿಯ ಅನುಕಂಪ ಪರಿತಾಪಗಳನ್ನು ಹುಟ್ಟಿಸುವುದಿಲ್ಲ.



ಇದೀಗ ರಾಮನ ಡೆಮಾಕ್ರಸಿ! ಭರತನಿಗೆ ಹಿಂದೆ ಮಂತ್ರಾಲೋಚಿಸದೆ ಯಾವ ಕಾರ್ಯವನ್ನೂ ಮಾಡಬೇಡವೆಂದು ಚಿತ್ರ ಕೂಟದಲ್ಲಿ ರಾಜನೀತಿ ಬೋಧಿಸಿದ- 'ನೀನೊಬ್ಬನೆ ಮಂತ್ರಾಲೋಚನೆ ಮಾಡಿ ನಿರ್ಣಯಕ್ಕೆ ಬರುವುದಿಲ್ಲವಷ್ಟೇ? (ಅ.ಉ. 100-18) ರಾಮ ಈಗ ತಮ್ಮಂದಿರ ಬಾಯಿ ಕಟ್ಟುವುದಲ್ಲದೆ, ಸಮಸ್ತ ಭಕ್ತ ಸಂದೋಹದ ವಿಮರ್ಶಕರ ಬಾಯಿಯನ್ನೂ ಮುಚ್ಚಿಸಿಬಿಟ್ಟಿದ್ದಾನೆ. ಈ ತಬ್ಬಿಬ್ಬನ್ನು ಕಂಡೇ ಮಾಸ್ತಿಯವರು ಉತ್ತರ ರಾಮಾಯಣ ಪ್ರಕ್ಷಿಪ್ತ ಅನ್ನುತ್ತಾ ಎಚ್ಚರ ತೋರಿದ್ದಾಗ್ಲೂ, ಕುವೆಂಪು ಅವರ ಶೂದ್ರ ತಪಸ್ವಿಗೆ ಪ್ರತಿಕ್ರಿಯಿಸದೆ ಇರಲಾರದೆ ಹೋಗಿ ರಾಮನ ಶಂಭೂಕ ನೆಂಬ ಶೂದ್ರನ ವಧೆಯನ್ನು ಈ ಮಾತುಗಳಲ್ಲಿ ಸಮರ್ಥಿಸಿದ್ದಾರೆ:

'ಉತ್ತರ ಕಾಂಡದ ಕತೆಯಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣ ವ್ಯವಸ್ಥೆಯನ್ನು ಕುರಿತ ಒಂದು ತೀವ್ರವಾದ ಶ್ರದ್ಧೆ. ಈ ಕಾವ್ಯದಲ್ಲಿ (ಶೂದ್ರತಪಸ್ವಿಯಲ್ಲಿ) ಅದನ್ನು ಜಾತಿ ಗರ್ವಾಂಧತೆ ಎಂದು ವರ್ಣಿಸಿರುವುದು ಕಾಣುತ್ತದೆ... ಸುವ್ಯವಸ್ಥಿತವಾದ ಸಮಾಜದಲ್ಲಿ ಒಂದೊಂದು ವಿಭಾಗಕ್ಕೆ ಒಂದೊಂದು ಕೆಲಸ ಇರುತ್ತದೆ. ಆಯಾ ವಿಭಾಗದವರು ಆಯಾ ಕೆಲಸವನ್ನು ಮಾಡತಕ್ಕದ್ದು ಎಂದು ಅಂತಹ ಸಮಾಜ ನಿರ್ಣಯಿಸಿಕೊಳ್ಳಬಹುದು. ಆ ಸಮಾಜದ ಒಬ್ಬ ವ್ಯಕ್ತಿ ಆ ನಿರ್ಣಯವನ್ನು ಮೀರಿದರೆ ವ್ಯವಸ್ಥೆಯ ದೃಷ್ಟಿಯಿಂದ ಅಪರಾಧಿಯಾಗುತ್ತಾನೆ.'

(ಪ್ರಸಂಗ: 92-3)

ಡಿ.ವಿ. ಗುಂಡಪ್ಪನವರಂತೂ ಇದನ್ನೂ, ಇದರಂತೆಯೇ ಸೀತೆಯನ್ನು ಕಾಡಿಗಟ್ಟಿದುದನ್ನೂ, ಈಗ ಭಗವಾನರೂ ಹೇಳುವಂತೆ, 'ಡೆಮಾಕ್ರಸಿ' ಎಂದು ಸಮರ್ಥಿಸಿದ್ದಾರೆ. ಆದರೆ ಕೆ.ವಿ. ಪುಟ್ಟಪ್ಪನವರು ಈ ಶಂಭೂಕ ಪ್ರಸಂಗಕ್ಕೆ ಭವಭೂತಿಯ ಉತ್ತರರಾಮಚರಿತದ ಪ್ರತಿಕ್ರಿಯೆಯನ್ನು ಉದ್ಧರಿಸುತ್ತಾ ಈ ಮಾತುಗಳನ್ನು ಹೇಳುತ್ತಾರೆ:

ರೇಹಸ್ತದಕ್ಷಿಮೃತಸ್ಯ ಶಿಶೋರ್ದ್ವಿಜಸ್ಯ ವಿಸೃಜಶೂದ್ರಮು
ಸೌಕೃಪಾಣಮ ರಾಮಸ್ಯ ಗಾತ್ರಮಸಿ ನಿರ್ಭರಗರ್ಭಖಿನ್ನ
ಸೀತಾ ವಿವಾಸನಪಟೋಃ ಕರುಣಾಕುತಸ್ತೇ

ಎಲೈ ಬಲಗೈಯೆ, ಮೃತನಾದ ದ್ವಿಜಶಿಶುವಿನ ಪ್ರಾಣಯೋಗಕ್ಕಾಗಿ ಶೂದ್ರಮುನಿಯ ಮೇಲೆ ಕೃಪಾಣ ಪ್ರಯೋಗ ಮಾಡು. ರಾಮನ ಅಂಗವಲ್ಲವೇ ನೀನು? ತುಂಬು ಬಸಿರಿಯಾಗಿದ್ದ ಸೀತಾದೇವಿಯನ್ನು ಕಾಡಿಗಟ್ಟುವುದರಲ್ಲಿ ತನ್ನ ಪಟುತ್ವವನ್ನು ಸ್ಥಾಪಿಸಿದ ರಾಮನ ಗಾತ್ರದ ಒಂದು ಭಾಗವಲ್ಲವೇ ನೀನು? ನಿನಗೆಲ್ಲಿ ಬಂತು ಕರುಣೆ?-ಎಂದು ಮನಸ್ಸಿಲ್ಲದ ಮನಸ್ಸಿನಿಂದ (ಕಥಂ ಚಿತಪ್ರಹೃತ) ಕತ್ತರಿಸುತ್ತಾನೆ. 'ಕೃತಂ ರಾಮಸದೃಶಂ ಕರ್ಮ' ಎಂದು ತನ್ನನ್ನು ತಾನೇ ಮೂದಲಿಸಿಕೊಳ್ಳುವಂತೆ ಉದ್ಗಾರ ತೆಗೆಯುತ್ತಾನೆ.

ಇಲ್ಲಿ ಭವಭೂತಿ ಇಹಲೋಕದ ಕಾರ್ಪಣ್ಯವನ್ನು ಪರಲೋಕದ ಔದಾರ್ಯದಿಂದ ತಿದ್ದಲು ಪ್ರಯತ್ನಿಸಿರುವುದನ್ನು ಕಾಣುತ್ತೇವೆ.

(ಶೂದ್ರ ತಪಸ್ವಿ 6)

ಎಂಟನೆಯ ಶತಮಾನದಲ್ಲಿ, ಅಂದರೆ ಇಂದಿಗೆ ಹನ್ನೆರಡು ಶತಮಾನಗಳ ಹಿಂದೆಯೇ ವಾಲ್ಮೀಕಿಯ ಈ ಶಂಭೂಕನ ಪ್ರಸಂಗಕ್ಕೆ ಇಷ್ಟು ಪ್ರಾಮಾಣಿಕವಾಗಿ ಸಂವೇದಿಸಿದ ಭವಭೂತಿಯ ಮಾನವೀಯತೆ ಈಗಿನ ಸಮಕಾಲದಲ್ಲಿ, ಮಾನವೀಯತೆಯ, ಪ್ರಜಾಪ್ರಭುತ್ವದ ಮತ್ತು ವ್ಯಕ್ತಿಯ ಮೌಲ್ಯಗಳ ವಿಶೇಷ ಪ್ರಜ್ಞೆಯ ಆಧುನಿಕತೆಯಲ್ಲಿರುವ ನಮ್ಮ ವಿಮರ್ಶಕ ಸನಾತನಿಗಳಲ್ಲಿಲ್ಲದಿರುವುದು ತುಂಬಾ ದಾರುಣವಾದ ವಿಷಯವಾಗಿದೆ. ಇಂದಿನ ಸನಾತನಿ ಮಾಸ್ತಿಯವರಿಗೆ ರಾಮನ ಈ ಶಂಭೂಕವಧೆ 'ಶ್ರದ್ಧೆ'

ವಧೆಗೀಡಾದ ತಪಸ್ವಿ 'ಅಪರಾಧಿ.' ಆದರೆ ಅಂದಿನ ಮಾನವೀಯ ಭವಭೂತಿಗೆ, ಅವನ ಸರ್ವಕಾಲಕ್ಕೂ ಸಲ್ಲುವ ಸಹೃದಯೀ ಸಂವೇದನೆಗೆ, ಮಾನವೀಯತೆಯ ಜೀವಂತತೆಯಲ್ಲಿ, ಯಾವ ಆಗುಂತುಕ ಸಾಮಾಜಿಕ ಕಟ್ಟಳೆಗಳಿಗೂ ಬಾಗದ ಪ್ರಾಮಾಣಿಕತೆಗೆ, ಶೂದ್ರ ತಪಸ್ವಿಯ ಕೊಲೆ ಅಮಾನುಷವಾದದ್ದು-ತುಂಬು ಗರ್ಭಿಣಿ ಸೀತೆಯನ್ನು ಕಾಡಿಗಟ್ಟಿದ 'ನಿಷ್ಕರುಣೆ'ಯದು. ವಾಲ್ಮೀಕಿಯಲ್ಲಿ ಈ ಸಂದರ್ಭ ಎಷ್ಟು ಘೋರವಾಗಿವೆ ನೋಡಿ:

ಭಾಷತಸ್ತಸ್ಯಶೂದ್ರಸ್ಯ ಖಡ್ಗಂಸುರುಚಿರಪ್ರಭಮ್ I
ನಿಷ್ಕೃಷ್ಯಕೋಶಾದ್ವಿಮಲಂ ಶಿರಚ್ಚಿಚ್ಛೇದರಾಘವಃ II

ಆತನು ಹಾಗೆ ಹೇಳುತ್ತಿರುವಾಗಲೇ ರಾಘವನು ಒರೆಯಿಂದ ಹೊಳೆಯುವ ಖಡ್ಗವನ್ನು ಹಿರಿದು ಶಂಭೂಕನ ಶಿರಸ್ಸನ್ನು ಕತ್ತರಿಸಿಬಿಟ್ಟನು (ಉ. 76, 4)


'ನಾನು ಶೂದ್ರ ಯೋನಿಯಲ್ಲಿ ಜನಿಸಿದವನು, ನನ್ನ ಹೆಸರು ಶಂಭೂಕ, ರಾಮ, ಈ ಶರೀರಸಹಿತವಾಗಿ ಜೀವತ್ವವನ್ನು ಬಯಸುತ್ತಿದ್ದೇನೆ. ನಾನು ಸುಳ್ಳು ಹೇಳುತ್ತಿಲ್ಲ, ದೇವಲೋಕವನ್ನು ಬಯಸಿ ಉಗ್ರ ತಪಸ್ಸನ್ನಾಚರಿಸುತ್ತಿರುವ ನನ್ನನ್ನು ಶೂದ್ರನೆಂದು ತಿಳಿ' (ಅದೇ 3-4) ಎಂದು ತಲೆಕೆಳಗಾಗಿಯೇ ಇದ್ದ ಶೂದ್ರ ತಪಸ್ವಿಯ 'ಭಾಷತಸ್ಯ', ಅಂದರೆ 'ಹಾಗೆ ಹೇಳುತ್ತಿರುವಂತೆಯೆ', ವಾಲ್ಮೀಕಿಯ ರಾಮನು ಯಾವ ಒಂದು ಮಾನವೀಯವಾದ ಅಳುಕು, ಆತಂಕ, ಅನುಕಂಪದ ಲವಲೇಶವೂ ಇಲ್ಲದಂತೆ, ಕರ್ತವ್ಯದ ಕೀಲುಗೊಂಬೆಯಂತೆ, ಯಾಂತ್ರಿಕವಾಗಿ ಶಂಭೂಕನ 'ಶಿರಚ್ಛೇದ' ಮಾಡುತ್ತಾನೆ. ಅದೇ ಸಂದರ್ಭದಲ್ಲಿ ಭವಭೂತಿಯ ಮಾನವೀಯನಾದ ರಾಮ ಮಾನವೀಯತೆಯ ಚಲುಮೆಯಲ್ಲಿ ಚಿಮ್ಮಿ, 'ಕೊಲ್ಲಬೇಕೆಂದಿದ್ದ ಬಲಗೈ ವಿಳದವನಾಗುತ್ತಾನೆ! ಆ 'ನಿರ್ಭರಗರ್ಭ ಖಿನ್ನಸೀತಾ' ಎನ್ನುವ ಪದಗಳ ಅತ್ಯಂತ ಮಾರ್ದವತೆಯ ಶಬ್ದ ಸಂಯೋಗ, ಶಬ್ದದಲ್ಲೇ (sound) ಅಭಿನಯಿಸುವ ಆರ್ತತೆ, ನೋವು, ಆಕ್ರಂದನ. 'ಖಿನ್ನ' ಎಂಬ ಶಬ್ದದಲ್ಲಿ ಶೂಲದಂತೆ ಚುಚ್ಚುತ್ತಾ ಅಂತಃಕರಣವನ್ನು ಕದಡಿ, 'ಸೀತಾ' ಎನ್ನುವ ಶಬ್ದದಲ್ಲಿ ಹತಾಶೆಯ ಸುಯ್ಯನ್ನು ಸುಯ್ಯುತ್ತದೆ. ಅಂತಹ 'ನಿರ್ಭರ ಗರ್ಭ' ಸೀತಾಳನ್ನು ಕಾಡಿಗಟ್ಟಿದ ಕೈಗೆ-'ವಿವಾಸನಪಟೋಃ' ಎನ್ನುವಲ್ಲಿ ಪಟೋಃ ಶಬ್ದದ ಶಬ್ದ ಕಾಠಿಣ್ಯವನ್ನು ನೋಡಿ-ವಿವಾಸನಗೊಳಿಸಿ, ವಾಸದಿಂದ ಹೊರಗಟ್ಟಿ, ಗಡೀಪಾರು ಮಾಡಿ ಪಟುತ್ವ ('ಮೊನಚು', 'ಕ್ರೌರ್ಯ')ವನ್ನು ಸ್ಥಾಪಿಸಿದ ಕೈಗೆ ಇನ್ನು ಕರಣೆ ಎಲ್ಲಿ? ಭವಭೂತಿಯ ಕಾವ್ಯ ಶಬ್ದದಲ್ಲೂ ಅರ್ಥದಲ್ಲೂ ಈ ದಾರುಣತೆಯ ಸಂದರ್ಭವನ್ನು ಅತ್ಯಂತ ಮಾನವೀಯವಾಗಿ ಚಿತ್ರಿಸುವುದಲ್ಲದೆ ರಾಮನನ್ನು ನಿಜಕ್ಕೂ ಮಹಾನುಭಾವನನ್ನಾಗಿ ಮಾಡುತ್ತದೆ. ಈ ಭವಭೂತಿಯ ಮಾನವೀಯ, ಸಂಪನ್ನ, ಮಾರ್ದವ ರಾಮನೆದುರು ವಾಲ್ಮೀಕಿಯ ರಾಮ ಒಬ್ಬ ಯಾಂತ್ರಿಕ ಕೊಲೆಗಡುಕನಾಗಿ ನಿಲ್ಲುತ್ತಾನೆ. ಕೊಲ್ಲುವ ಪೂರ್ವದಲ್ಲಾಗಲಿ, ಕೊಂದ ಮೇಲೆಗಾಗಲಿ ಅವನು ಯಾವ ಸಂವೇದನೆಯನ್ನೂ ತೋರದೆ ಕೊರಡಾಗಿ ನಿಂತು ಪುಷ್ಪವೃಷ್ಟಿ ಮಾಡಿಸಿಕೊಳ್ಳುತ್ತಾನೆ. ಆಮೇಲೆ ಅಗಸ್ತ್ಯದಿಂದ ಆಭರಣದ ಪಾರಿತೋಷಕವನ್ನು ಗಳಿಸಿ ಹಿಂತಿರುಗುತ್ತಾನೆ. ಈ ಸಂದರ್ಭವನ್ನು ಕುರಿತು ಗುಂಡಪ್ಪನವರ ವ್ಯಾಖ್ಯಾನವನ್ನು ನೋಡಿ:

'ಹೀಗೆ ಶ್ರೀಸೀತಾವಿವಾಸನ ವಿಷಯದಲ್ಲಿಯೂ, ಶಂಭೂಕ ವಧೆಯ ವಿಷಯದಲ್ಲಿಯೂ ಶ್ರೀರಾಮನು ಅನುಸರಿಸಿದ್ದು ಪ್ರಜಾಭಿಪ್ರಾಯವನ್ನು, ಅದು ಡೆಮಾಕ್ರಸಿ (Democracy) ಪ್ರಜಾಪ್ರಭುತ್ವ. ಇದನ್ನು ನಾವು ಗಮನಿಸಬೇಕು. ಗ್ರೀಸ್ ದೇಶದಲ್ಲಿ ಪ್ರಜಾಪ್ರಭುತ್ವವು ಸಾಕ್ರಟೀಸ್ (Socrates) ಎಂಬ ತತ್ವಜ್ಞನನ್ನು ನುಂಗಿತು. ಅದಕ್ಕಿಂತ ಎಷ್ಟೋ ಸಹಸ್ರ ವರ್ಷಗಳ ಹಿಂದೆ ಅಯೋಧ್ಯೆಯಲ್ಲಿ ಪ್ರಜಾರಾಜ್ಯವು ಶ್ರೀ ಸೀತಾದೇವಿಯನ್ನು ಗಡೀಪಾರು ಮಾಡಿಸಿತು. ಶಂಭೂಕನಿಗೆ ಮೃತ್ಯುವನ್ನು ತಂದಿತು.

ಅಲ್ಲಿಂದೀಚೆಗೆ ನಮ್ಮ ದೇಶದಲ್ಲಿ ಡೆಮಾಕ್ರಸಿ ಪುನಃ ಪ್ರಬಲಿಸುತ್ತಿದೆ. ಆದ್ದರಿಂದ ಸತ್ವಾಭಿಮಾನಿಗಳು ಜಾಗ್ರತೆಯಿಂದಿರಬೇಕಾದ್ದು'

(ಉತ್ತರಕಾಂಡ: ಅನು: ವಿದ್ವಾನ್ ಎನ್. ರಂಗನಾಥಶರ್ಮ 11)

ಅಡಿಗರ 'ಸುಟ್ಟಲ್ಲದೆ ಮುಟ್ಟನೆಂಬ ಉಡಾಫೆ' ಸೂಚಿಸುವ ರಾಮನ ಸೀತಾ ಪ್ರೇಮ ಸಂಪೂರ್ಣವಾಗಿ ವಾಲ್ಮೀಕಿಯ ಕಾವ್ಯಸಂದರ್ಭದಿಂದ ಹೊರತಾಗಿ, ಮಾಸ್ತಿ ಸೀತಾರಾಮಯ್ಯ, ಗುಂಡಪ್ಪನವರಲ್ಲಿರುವಂತೆ, ಕೇವಲ ರಾಮಭಕ್ತಿಯಿಂದಲೇ ಆಮದು ಮಾಡಿಕೊಂಡಂಥಾದ್ದು. ಅಡಿಗರು ನಂಬಿದಂತೆ ರಾಮನ ವರ್ತನೆ 'ಉಡಾಫೆ' ಯಾಗಿದ್ದಲ್ಲಿ, ರಾಮನು ಮುಂದೆ ಸೀತೆಯನ್ನು ಕಾಡಿಗಟ್ಟುವ ಪ್ರಸಂಗ, ಆಮೇಲೆ ವಾಲ್ಮೀಕಿ ಆಶ್ರಮದಲ್ಲಿ ಲವಕುಶರೊಡನಿದ್ದ ಸೀತೆಗೆ ಮತ್ತೊಮ್ಮೆ 'ಶಪಥ ಮಾಡಿ ನಿನ್ನ ಪರಿಶುದ್ಧತೆಯನ್ನು ರುಜುವಾತುಪಡಿಸು' ಎನ್ನುವ ಪ್ರಸಂಗ ಅರ್ಥವಿಲ್ಲದವುಗಳಾಗುತ್ತವೆ. ಒಂದು ವೇಳೆ ಪ್ರಸಂಗಗಳನ್ನು ಪ್ರಕ್ಷಿಪ್ತವೆಂದು ಬಿಟ್ಟರೂ ಅಡಿಗ, ಅನಂತಮೂರ್ತಿಯವರ ವಿಮರ್ಶಕ ಜವಾಬ್ದಾರಿ ರಾಮನ



'ಉಡಾಫೆ'ಯನ್ನು ಕಾವ್ಯದ ಸಾಕ್ಷ್ಯದಲ್ಲಿ ನಿಲ್ಲಿಸಬೇಕಾಗುತ್ತದೆ. ರಾಮನು 'ಎಲ್ಲಾ ಸ್ತರಗಳಲ್ಲೂ ನೈತಿಕವಾಗಿ ಫಲಿಸಬೇಕಾದ ಮನುಷ್ಯನಾಗಿರುವುದರಿಂದ, ಸಾಮಾಜಿಕವಾಗಿ ತನ್ನನ್ನು ಒಪ್ಪಿಸಿಕೊಳ್ಳುವುದಕ್ಕಾಗಿ ಈ 'ಉಡಾಫೆ' ಅನಂತಮೂರ್ತಿಯವರಿಗೆ, ರಾಮನು 'ಎಲ್ಲಾ ಸ್ತರ'ಗಳಲ್ಲಿರಲಿ, ಕೇವಲ 'ಮನುಷ್ಯ... ಸ್ತರ'ದಲ್ಲಾದರೂ ಕಾವ್ಯದಲ್ಲಿ 'ಫಲಿಸಿ'ದ್ದಾನೆಯೇ ಎಂಬುದನ್ನು ರುಜುವಾತು ಪಡಿಸಬೇಕಾಗುತ್ತದೆ. ಮೆಕ್‌ಬೆತ್ ನಾಟಕದೊಂದು ಸಂದರ್ಭದಲ್ಲಿ ಮ್ಯಾಕ್‌ಡಫನು ತನ್ನ ಹೆಂಡತಿ ಮಕ್ಕಳು ಕೊಲೆಯಾದ್ದಕ್ಕೆ, ದುಃಖಿಸುತ್ತಿರಲು ಮ್ಯಾಲ್ಕಮನು 'ಪುರುಷನಂತೆ ಅದನ್ನು ಎದುರಿಸು' `Dispute it like a man' ಎಂದಾಗ, ಮ್ಯಾಲ್ಕಮ್ ಎನ್ನುತ್ತಾನೆ: 'ಸರಿ, ಆದರೆ ನಾನದನ್ನು ಮಾನವನಾಗಿ ನೋಯಬೇಕಲ್ಲ' `I shall do so, But I must als[o] as a man' ಎನ್ನುತ್ತಾನೆ. ರಾಮನು, ಅನಂ... ಯವರು ವಾದಿಸುವಂತೆ, 'ಎಲ್ಲಾ ಸ್ತರದಲ್ಲೂ ... ಫಲಿಸಬೇಕಾದ ಮನುಷ್ಯ' (ಒತ್ತು ನನ್ನದು) ... ದ್ದಾನೆಯೇ, ಅವನು ಸೀತೆಯ ಸಮಕ್ಷಮದಲ್ಲಿ ... ಬದ್ಧನಾದ 'ರಾಜ'ನೆಂದು ಒಪ್ಪಿಕೊಂಡರೂ ಈ ಕಾವ್ಯ ಸಂದರ್ಭದಲ್ಲಿ ಕೇವಲ ರಾಜತ್ವದ ಮುಖವಾಣಿಯಾಗಲ್ಲದೆ, ಒಂದೇ ಒಂದು ಶ... ಸಂಚಿಕೆಯಲ್ಲಾದರೂ 'ಮನುಷ್ಯ'ನಾಗಿ ... ದ್ದಾನೆಯೇ- feel it as a man? ಅ... ಭೂತಿಯ ರಾಮನಲ್ಲಿನ ಮಾನವೀಯ ... ಭೂತಿಯ, ಕರುಣೆಯ ಕಿಂಚಿತ್ತಾದರೂ, ಎಲ್ಲ... ಯಾವ ರೀತಿಯಲ್ಲಾದರೂ ನುಸುಳಿದೆಯೇ ... ರುಜುವಾತುಪಡಿಸುವ ಮೂಲಭೂತ ... ಜವಾಬ್ದಾರಿ ಅನಂತಮೂರ್ತಿಯವರದ್ದಾಗಿದ... 'ನೋಡಿ, ರಾಮನಿಗೆ ಗೊತ್ತಿದೆ, ಸೀತೆ ಪವಿತ್ರ... ಎನ್ನುವ ಆಪ್ತರಹಸ್ಯದ ಆತ್ಮೀಯತೆ, ಕೇವಲ ಭ... ಮುಗ್ಧತೆ (naivete)ಯಾಗುತ್ತದೆ. ಭಕ್ತಿ ಪುರು... 'ಸೇವೆ'ಯಾಗುತ್ತದೆಯಾಗಲಿ, ವಿಮರ್ಶಾ ಪ್ರಜ್ಞೆ... ಸಹೃದಯಂದನು, ರಾಮನ ಅಮಾನ... ಬರ್ಬರತೆಯನ್ನು ಹಂತ ಹಂತವಾಗಿ ಕಾಣುತ್ತಾ... ಸೀತೆ ಅವನನ್ನು 'ಪ್ರಾಕೃತ', ಅಸಂಸ್ಕೃತ.... ನೆ... ಪ್ರತಿಕ್ರಿಯಿಸುವ ವಸ್ತುನಿಷ್ಠತೆಯಲ್ಲ; ಏಕೆಂದರೆ, ... ಕಾಣಿಸಿದಂತೆ, ರಾವಣವಧೆಯ ನಂತರ 'ಗ... ಹೋಗಲಿ ಅನಂತಮೂರ್ತಿಯವರು ... 'ಮನುಷ್ಯ'ನಾಗಿ ಸೀತೆಯತ್ತ ಧಾವಿಸುವುದಿರಲಿ, ... 'ಯೋಚನೆ'ಯನ್ನಾಗಲಿ ಮಾಡದೆ ರಾವಣನ ... ಮಾಡಿಸಿ ವಿಭೀಷಣನ ಪಟ್ಟಾಭಿಷೇಕವಾದ... ಅವಳನ್ನು 'ಸ್ನಾನ' ಶುದ್ಧಿಗೊಳಿಸುವ 'ಮ... ತೋರಿಸುವ, 'ಸಾರ್ವಜನಿಕರ ಪ್ರದರ್ಶನ'ಕ... ಅವಳನ್ನು 'ನಿಂದಿಸುವು'ದೊಂದನ್ನು ಬಿಟ್ಟು ... ಒಂದು ಕರುಣೆಯ ಸಹಾನುಭೂತಿಯ ಮಾ... 'ಈ ಕಾರ್ಯ'ವನ್ನು ಪದೇಪದೇ 'ನಿನಗಾಗಿ ಮಾ... ನನ್ನ ಕೀರ್ತಿಗಾಗಿ ಮಾಡಿದ್ದೇನೆ' ಎನ್ನುವ ... ಲಕ್ಷ್ಮಣ ಭರತರನ್ನು ಕೂಡು, ಸುಗ್ರೀವ ವಿಭೀ... 'ಸೇರು' ಎನ್ನುವ ನಿರಾಕರಣೆಯ ಬಬ... ಉಪೇಕ್ಷೆಯ, ಈ 'ಪುರುಷ ವಿಗ್ರಹ' 'ಹೆಂಡ... ಪರರಿಗೊಡ್ಡುವ ಶೈಲೂಷ'-ಇದು ಸೀತೆಯ ... 'ವಿಗ್ರಹ'ವಲ್ಲದೆ, ಅನಂತಮೂರ್ತಿ ಸ್ಥಾಪಿಸಲು ... ರುವ 'ಮನುಷ್ಯ', 'ಪುರುಷ'ನೆಲ್ಲಿ?

ರಾಮನ 'ನಿರ್ದಯತೆ', 'ನಿಷ್ಕಾರುಣ್ಯ'ದ... ರಾಮಾಯಣದುದ್ದಕ್ಕೂ ಕಂಡುಬರುವ ... ಗಮನಾರ್ಹ ಗುಣವಿಶೇಷ. ರಾಮನು ವಾ... ಮರೆಯಲ್ಲಿ ನಿಂತು ಕೊಂದ ನಂತರ ತಾರೆಯ ... ವಿಲಾಪ ರಾಮನಲ್ಲಿ ಒಡನೆಯೇ ಯಾವ ... ಅನುಕಂಪ ಪರಿತಾಪಗಳನ್ನು ಹುಟ್ಟಿಸುವುದಿಲ್ಲ. ... ಅಳಲನ್ನು ಕಂಡು ಹನುಮಂತ ಮರುಗುತ್ತಾ... ವಾಲಿಯ ಸಾವಿನ ದುಃಖದಿಂದ ರಾಮನನ್ನು ... ಕೊಂದುಬಿಡು ಎಂದು ಬೇಡುತ್ತಾಳೆ, ಪ್ರಾಯೋ... ಮಾಡಿ ಸಾಯುವುದಾಗಿ ಹಲುಬುತ್ತಾಳೆ. ಸು... ಅಣ್ಣನ ಸಾವಿನಿಂದ ವಿಹ್ವಲನಾಗಿ ತನ್ನನ್ನು ... ಶಪಿಸಿಕೊಂಡು ಸಾಯಲು ಇಚ್ಛಿಸುತ್ತಾನೆ. ... ತಾರೆ, ಸುಗ್ರೀವ, ಹನುಮಂತ ಎಲ್ಲರೂ ದುಃಖಿ... ಆದರೆ ರಾಮ 'ಕೋದಂಡವನ್ನೂರಿ ನೊ... ನಿಲ್ಲುತ್ತಾನೆ'- (ಅವಷ್ಟಭ ಚತಿಷ್ಟಂತಂ ದದ... ರುತ್ತಮಮ್ ರಾಮಂರಾಮಾನುಜಂಚ-ಕಿ.19, ... ಆಮೇಲೆ 'ಹೀಗೆ ಸುಗ್ರೀವನೂ ತಾರೆಯೂ ಅ... ದುಃಖಿಸುವುದನ್ನು ಕಂಡು ಶ್ರೀರಾಮ ಲ... ಅವರಂತೆ ದುಃಖಿತ' (ಕಿ. 25, 1)ರಾ... ಆಮೇಲೆಯೂ, ರಾಮನನ್ನು ಕೊಂದ ಮೇಲೆ ... ರಾವಣನ ಪತ್ನಿಯರ ರೋದನವನ್ನೂ ಅವರು... ಪಕ್ಷಿ'ಯಂತೆ ಆಕ್ರಂದನ ಮಾಡುತ್ತಿರುವ... ಮಂಡೋದರಿಯ ಗೋಳಾಟವನ್ನೂ, ಸಮಸ್ತ ... ವಿಧವೆಯರ-ಮಕ್ಕಳನ್ನು, ಸಹೋದರರನ್ನು ... ಕೊಂಡ ಇವರುಗಳ ಶೋಕದ ಚಿತ್ರಣ ವಿ... ಕಾವ್ಯದಲ್ಲಿದೆ-ಹೆಂಗಸರ ಪ್ರಲಾಪವನ್ನು ರಾಮ ... ನಾಗಿ ನೋಡುತ್ತಾನೆ:

'ಹೀಗೆ ಅವರೆಲ್ಲರೂ ಆಕ್ರಂದಿಸುತ್ತಿರಲು, ಶ್ರೀ... ವಿಭೀಷಣನನ್ನು ಕರೆದು 'ವಿಭೀಷಣ, ಇನ್ನು ನಿ... ಉತ್ತರಕ್ರಿಯೆಯನ್ನು ನಡೆಸು.

ಈ ಸ್ತ್ರೀಯರನ್ನು ಸಮಾಧಾನಪಡಿಸಿ ಮನೆಗ... ಎಂದು.' (ಯು.ಉ.114, 92)

ಹೆಂಗಸರ ಈ ಆಕ್ರಂದನ ರಾಮನಿಗೆ ರ... ಕಂಡಿರಬೇಕು-'ಸ್ತ್ರೀಯಸ್ಸೈ ತಾನಿವರ್ತಯ' ಎಂದು... ತೊಲಗಿಸಲು!

(ಮುಂದುವರೆ...

ಅಿಂಗ್ಯೆ ಹುಣ್ಣಿಗೆ ಕನ್ನಡಿಬೇಕೆ?

ಪ್ರಿಯರೆ,

ಪತ್ರಿಕೆಯ ಕಳೆದವಾರದ ಸಂಚಿಕೆಯಲ್ಲಿ ನಿಮ್ಮ ವರದಿಗಾರರು ಅಷ್ಟೆಲ್ಲ ಸಾಕ್ಷ್ಯಾಧಾರಗಳನ್ನು ಕೊಟ್ಟು ಮೂಲ್ಕಿ ರಫೀಕನ ಎನ್‌ಕೌಂಟರ್ ನಕಲಿ ಎಂದು ಸಾಬೀತುಪಡಿಸುವ ಅಗತ್ಯವೇ ಇರಲಿಲ್ಲ. ರಫೀಕನನ್ನು ಮುಗಿಸಿಬಿಡಲು ಪೊಲೀಸರು ಬಹಳ ಹಿಂದೆಯೇ ತೀರ್ಮಾನಿಸಿದ್ದರು. ಪತ್ರಿಕೆಯೂ ಇದನ್ನು ಹೇಳಿತ್ತು. ಈಗ ಈ ಭವಿಷ್ಯವಾಣಿ ನಿಜವಾಗಿದೆ. ರಫೀಕನ ಸಾವಿನ ಕುರಿತು ಪೊಲೀಸರು ಕೊಟ್ಟ ವಿವರವೇ ಒಂದು ಕಟ್ಟುಕತೆ ಎನ್ನುವುದು ಅದರ ವಿರೋಧಾಭಾಸಗಳಿಂದಲೇ ಜಗಜ್ಜಾಹೀರಾಗಿದೆ. ನಕ್ಸಲೀಯರ ಎನ್‌ಕೌಂಟರುಗಳಂತೆ ಈ ಪ್ರಕರಣದಲ್ಲಿ ಕೂಡ ಜನ ನಂಬುವಂತಹ ಒಂದು ಕತೆ ಕಟ್ಟಬೇಕು ಎಂದು ಪೊಲೀಸರಿಗೆ ಅನ್ನಿಸಿಲ್ಲ. ಈ ನಕಲಿ ಎನ್‌ಕೌಂಟರ್ ನಿಂದ ತಮಗೆ ಏನೂ ಆಗುವುದಿಲ್ಲ ಮತ್ತು ಯಾರೂ ತಮ್ಮನ್ನು ಪ್ರಶ್ನಿಸುವುದಿಲ್ಲ ಎಂದು ಗೊತ್ತಿದ್ದೇ ಪೋಲಿಸರು ರಫೀಕನನ್ನು ಕೊಂದು ಈಗ ಆ ಬಗ್ಗೆ ಮೂರನೆ ದರ್ಜೆಯ ಪತ್ತೇದಾರಿ ಕತೆಯೊಂದನ್ನು ಹೊಸೆದಿದ್ದಾರೆ. ಪ್ರಜಾಪ್ರಭುತ್ವದ ಮೂಲಾಧಾರಗಳಾಗಿರುವ ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಕ್ರಮಗಳ ಪರಿಕಲ್ಪನೆಯನ್ನು ಸರಕಾರ ಪೂರ್ತ ಕೈಬಿಟ್ಟಿರುವುದು ಈ ಪ್ರಕರಣದಿಂದ ಸ್ಪಷ್ಟವಾಗಿದೆ. ಇದುವರೆಗೆ ಸರಕಾರ ಕಾನೂನಿನ ಆಳ್ವಿಕೆಯನ್ನು ಸೋಗಲಾಡಿತನದ ಮಟ್ಟದಲ್ಲಾದರೂ ಎತ್ತಿಹಿಡಿಯುತ್ತಿತ್ತು, ಈಗ ಅದಕ್ಕೆ ಈ ನಾಟಕದ ಅಗತ್ಯವೂ ಕಾಣುತ್ತಿಲ್ಲವಾದ್ದರಿಂದ ನಿರ್ಲಜ್ಜವಾಗಿ ತನ್ನ ದಬ್ಬಾಳಿಕೆಯನ್ನು ನಡೆಸುತ್ತಿದೆ.



ಮೂಲ್ಕಿ ರಫೀಕ್

ಇತ್ತೀಚೆಗೆ ನಿಠಾರಿ ಶಿಶು ಹಂತಕರ ಕೇಸಿನಲ್ಲಿ ಯಾವ ವಕೀಲನೂ ನ್ಯಾಯಾಲಯದಲ್ಲಿ ಆರೋಪಿಗಳ ಪರ ವಾದಿಸಕೂಡದು ಎಂಬ ನೋಯಿಡಾದ ವಕೀಲರ ಸಂಘದ ತೀರ್ಮಾನ ಕುರಿತು ಸುಪ್ರೀಮ್ ಕೋರ್ಟಿನ ನಿವೃತ್ತ ನ್ಯಾಯಧೀಶ ವೈ.ಕೆ.ಸಭರವಾಲ್ "ಅದೊಂದು ದುರದೃಷ್ಟಕರ ತೀರ್ಮಾನ. ಆರೋಪಿಗಳಿಗೆ ಕಾನೂನಿನ ನೆರವು ಪಡೆದುಕೊಂಡು ನ್ಯಾಯಾಲಯದ ಮುಂದೆ ತಮ್ಮನ್ನು ಸಮರ್ಥಿಸಿಕೊಳ್ಳಲು ಸಂಪೂರ್ಣ ಹಕ್ಕಿದೆ. ಅವರ ಮೇಲೆ ಇರುವ ಆರೋಪಗಳು ಅತ್ಯಂತ ಹೇಯವಾದವು ಎಂಬುದು ನಿಜವಾದರೂ ಕಾನೂನಿನ ನೆರವು ನಿರಾಕರಿಸಲು ಅದು ಯುಕ್ತ ಕಾರಣವಲ್ಲ. ನಿಠಾರಿ ಪ್ರಕರಣವೇ ಆಗಿರಲಿ, ಜಮ್ಮು ಕಾಶ್ಮೀರದ ಲೈಂಗಿಕ ಹಗರಣವೇ ಆಗಿರಲಿ ಅಥವಾ ಇನ್ನಾವುದೇ ಕೇಸಿರಲಿ ಒಬ್ಬ ನ್ಯಾಯವಾದಿಯಾಗಿ ನಾನು ಆರೋಪಿ ಕಾನೂನಿನ ನೆರವು ಪಡೆಯಲು ಸಾಧ್ಯವಾಗದಂತಹ ಸ್ಥಿತಿಯ ಕುರಿತು ಯೋಚಿಸಲಾರೆ. ಆರೋಪಿಯ ಅಪರಾಧ ನ್ಯಾಯಾಲಯದ ಮುಂದೆ ಸಾಬೀತಾಗುವತನಕ ಆರೋಪಿಯನ್ನು ನಿರಪರಾಧಿ ಎಂದೇ ಪರಿಗಣಿಸಬೇಕು" ಎಂದು ಹೇಳಿದರು.

ಸಭರವಾಲ್ ಅವರ ಈ ಮಾತು ರಫೀಕ್ ಪ್ರಕರಣಕ್ಕೂ ಅನ್ವಯವಾಗುತ್ತದೆ. ರಫೀಕನ ಮೇಲೆ ಇರುವ ಆರೋಪಗಳ ವಿಚಾರಣೆ ಆಗಿಲ್ಲ; ನ್ಯಾಯಾಲಯ ಆತನನ್ನು ಸುಖಾನಂದ ಶೆಟ್ಟಿ ಕೊಲೆ ಪ್ರಕರಣದಲ್ಲಿ ಅಪರಾಧಿ ಎಂದು ತೀರ್ಪು ಕೊಟ್ಟಿಲ್ಲ. ಆದಾಗ್ಯೂ ಪೊಲೀಸರು ರಫೀಕನ ಮೇಲೆ ಗರಿಷ್ಠ ಶಿಕ್ಷೆಯನ್ನೇ ಜಾರಿಗೊಳಿಸಿಬಿಟ್ಟಿದ್ದಾರೆ. ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ನಾಗರಿಕ ವಿಧಾನವೇ ಇದು?

ರಫೀಕ್ ಕೊಲೆ ಪ್ರಕರಣದಲ್ಲಿ ಕರಾವಳಿಯ ವಿಜಯ ಕರ್ನಾಟಕ, ಉದಯವಾಣಿ ಮತ್ತು ಪ್ರಜಾವಾಣಿ ಪತ್ರಿಕೆಗಳಂತೂ ಪೊಲೀಸರ ಮುಖವಾಣಿಗಳೇ ಆಗಿಬಿಟ್ಟಿವೆ. 'ಎನ್‌ಕೌಂಟರ್ ಸಾಚಾ ಆಗಿದ್ದರೆ ರಫೀಕನಿಗೆ ತಕ್ಕ ಶಾಸ್ತಿಯಾಯಿತು; ಅದು ನಕಲಿಯಾಗಿದ್ದರೂ ಪೊಲೀಸರು ಮಾಡಿದ್ದರಲ್ಲಿ ತಪ್ಪಿಲ್ಲ; ಯಾಕೆಂದರೆ ರಫೀಕ್ ಅಪರಾಧಿ. ಎನ್‌ಕೌಂಟರ್ ಓಕೆ ಕಾನೂನು ಯಾಕೆ?' ಈ ಪತ್ರಿಕೆಗಳ ನಿಲುವು.

More loyal than the king ಎಂದು ಹೇಳುವ ಹಾಗೆ ಪತ್ರಿಕೆಗಳು ಎನ್‌ಕೌಂಟರ್ ಕುರಿತು ಪೊಲೀಸರ ಕಟ್ಟುಕತೆಯ ಬಗ್ಗೆ ಇದು– ಓದುಗರ ಮನಸ್ಸಿನಲ್ಲಿ ಮೂಡಬಹುದಾದ ಸಂದೇಹಗಳನ್ನೂ ತಾವೇ ಮುಂದಾಗಿ ಊಹಿಸಿ ಅದಕ್ಕೆ ಸಮಜಾಯಿಷಿಗಳನ್ನೂ ಕೊಟ್ಟುಬಿಟ್ಟಿವೆ. ಸುಖಾನಂದ ಶೆಟ್ಟಿ ಕೊಲೆ ಪ್ರಕರಣದ ಇನ್ನೊಬ್ಬ ಆರೋಪಿ ಸುಧೀರನನ್ನು ಇಷ್ಟೇ ಸಂದೇಹಾಸ್ಪದವಾದ ಒಂದು ಎನ್‌ಕೌಂಟರ್‌ನಲ್ಲಿ ಈ ಹಿಂದೆಯೇ ಮುಗಿಸಿಬಿಡಲಾಗಿದೆ. ಈಗ ಮುಖ್ಯ ಆರೋಪಿ ರಫೀಕ್‌ನ ಸರದಿ.

ಸುಖಾನಂದ ಶೆಟ್ಟಿ ಕೊಲೆಯ ನೈಜ ಹಿನ್ನೆಲೆ ಏನು? ಆತನ ಪೂರ್ವಾಪರಗಳೇನು? ರಫೀಕ್ ಆತನನ್ನು ಕೊಲೆ ಮಾಡಿರುವುದು ಹೌದೆ? ಹೌದಾದರೆ ಯಾಕೆ?– ಈಗ ಯಾರು ಈ ಪ್ರಶ್ನೆಗಳಿಗೆ ಉತ್ತರ ಹೇಳಬೇಕು? ಅಥವಾ ಈ ಪ್ರಶ್ನೆಗಳನ್ನೇ ಕರಾವಳಿಯ ಪಶ್ಚಿಮವಲಯ ಪೊಲೀಸು ಇಲಾಖೆ ಮತ್ತು ಇಲ್ಲಿನ ಪತ್ರಿಕೆಗಳು ರದ್ದುಪಡಿಸಿವೆಯೆ? ಅಮೆರಿಕದಲ್ಲಿ 19ನೆಯ ಶತಮಾನದಲ್ಲಿ ನೀಗ್ರೋ ಪ್ರಜೆಗಳಿಗೆ ಕೋರ್ಟ್ ಕಾನೂನು ಮುಂತಾದವುಗಳ ರಕ್ಷಣೆ ಇರಲಿಲ್ಲ. ನೀಗ್ರೋ ಆರೋಪಿಗಳಿಗೆ ಬಿಳಿಯರ ಗುಂಪುಗಳು ಏಕಪಕ್ಷೀಯವಾಗಿ ಶಿಕ್ಷೆ ವಿಧಿಸುತ್ತಿದ್ದವು. ಈ ಶಿಕ್ಷೆಯ ವಿಧಾನಗಳು ಅತ್ಯಂತ ಅಮಾನುಷವಾಗಿಯೂ ಇದ್ದವು. ನೀಗ್ರೋಗಳಿಗೆ ತಮ್ಮ ಅಹವಾಲು ಹೇಳಿಕೊಳ್ಳುವ ಅವಕಾಶವೇ ಇರಲಿಲ್ಲ. ಲಿಂಚಿಂಗ್ ಎಂದು ಕರೆಯಲಾಗುತ್ತಿದ್ದ ಈ 'ನ್ಯಾಯವ್ಯವಸ್ಥೆ'ಯ ಆಧುನಿಕ ಹಾಗೂ ಪರಿಷ್ಕೃತ ರೂಪವೊಂದನ್ನು ಕರಾವಳಿಯಲ್ಲಿ ಈಗ ಸಂಘಪರಿವಾರ, ಪೊಲೀಸರು ಮತ್ತು ಪತ್ರಿಕೆಗಳು ಒಟ್ಟಾಗಿ ಜಾರಿಗೆ ತರುತ್ತಿವೆ. ಕರಾವಳಿಯ ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಯಥಾಪ್ರಕಾರ ಗಾಢ ನಿದ್ರೆಯಲ್ಲಿದೆ.

-ಜಿ. ರಾಜಶೇಖರ

ಈ ಅಪಹರಣಕಾರರಿಗೆ ಶಿಕ್ಷೆಯಿಲ್ಲವೇ?

ಒಂದು ಪತ್ರ

ಮಾನ್ಯರೆ,

ಇದನ್ನೊಂದು ಘೋರ ದುರಂತವೆನ್ನದೇ ಬೇರೆ ವಿಧಿಯಿಲ್ಲ. ಜಾತೀಯತೆ, ದ್ವೇಷ, ಅಸೂಯೆ, ತಾರತಮ್ಯ, ಡಂಬಾಚಾರದ ಆಚರಣೆಗಳನ್ನು ಕಟುವಾಗಿ ಟೀಕಿಸುತ್ತಿದ್ದ ಮಾನವ ಪ್ರೇಮಿ ಸ್ವಾಮಿವಿವೇಕಾನಂದರ ತತ್ವಗಳಿಗೆ ವಿರುದ್ಧದ ದಿಕ್ಕಿನಲ್ಲಿ ಸಾಗುತ್ತಿರುವ ಸಂಘ ಪರಿವಾರದವರು ತಮ್ಮ ರೋಲ್‌ಮಾಡೆಲ್ ಆಗಿ ಬಿಂಬಿಸುತ್ತಿರುವುದು ದುರಂತವೇ ಸರಿ. ಅಷ್ಟೇ ಅಲ್ಲ, ಅಂಬೇಡ್ಕರ್, ಬುದ್ಧ, ಬಸವಣ್ಣ, ನಾರಾಯಣ ಗುರುಗಳಂತಹವರನ್ನು ಇವರುಗಳು ಅಪಹರಿಸಿ ತಮ್ಮ ಗೋಲ್ವಾಲ್ಕರನ ಐಡಿಯೋಲೋಸ್‌ಗಳೆಂಬಂತೆ ಬಿಂಬಿಸುತ್ತಿರುವುದು ಸಮಾನತೆ, ಸಹಬಾಳ್ವೆ ಸಾರಿದಂತ ಈ ಮಹಾತ್ಮರುಗಳಿಗೆ ಮಾಡುತ್ತಿರುವ ಹೀನಾಯ ಅವಮಾನ ಎಂಬುದರಲ್ಲಿ ಎರಡು ಮಾತಿಲ್ಲ.

ಸಂವಿಧಾನ ಶಿಲ್ಪಿ ಅಂಬೇಡ್ಕರರನ್ನು ಅವಮಾನಿಸಿ ಹಿಂದೂ ಧರ್ಮದ ಗೊಡ್ಡು ತತ್ವಗಳನ್ನೇ ಸಾರುವ ಮನುಸ್ಮೃತಿಯನ್ನೇ ಸಂವಿಧಾನವನ್ನಾಗಿಸಬೇಕೆಂದ ಗೋಲ್ವಾಲ್ಕರನ ಅನುಯಾಯಿಗಳಿಗೆ ಅಂಬೇಡ್ಕರ್ ಅಂತಹವರು ಪಥ್ಯವಾದುದಾದರೂ ಹೇಗೆ/ಏಕೆ? ಶತಮಾನಗಳಿಂದ ಇಲ್ಲೇ ಬಾಳಿ ಬದುಕಿದ ಮುಸ್ಲಿಂ-ಕ್ರೈಸ್ತರಂತ ಅನ್ಯಧರ್ಮೀಯರ ವಿರುದ್ಧ ದ್ವೇಷಕಾರಲಷ್ಟೇ ವೇದಿಕೆ ಎನಿಸಿದ ಹಿಂದೂ ಸಮಾಜೋತ್ಸವದಲ್ಲಿ ಈ ವಿವೇಕಾನಂದ, ಬುದ್ಧ, ಬಸವಣ್ಣ, ನಾರಾಯಣಗುರುಗಳಿಗೇನು ಕೆಲಸವೆಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಕರ್ಮ ಸಿದ್ಧಾಂತದ ಬುನಾದಿಯಲ್ಲಿ ಅಸ್ಪೃಶ್ಯತೆ, ತಾರತಮ್ಯಗಳಿಗೆ ಮನ್ನಣೆ ಇರುವಂತಹ ಹಿಂದೂ ಧರ್ಮದಲ್ಲಿ ಪುಣ್ಯವಂತರೆಲ್ಲ ಬ್ರಾಹ್ಮಣರಾಗಿ ಹುಟ್ಟಿರುವ ಕಾರಣ, ಮೇಲ್ವರ್ಗದವರ ಈ ಧರ್ಮ ಪೂರ್ವಜನ್ಮದ ಪಾಪಿಗಳಾಗಿರುವ ಶೂದ್ರಪರ ಎನ್ನಿಸಿಕೊಳ್ಳಲೇ ಇಲ್ಲ, ಹೀಗಾಗಿ ಈ ಶೂದ್ರವರ್ಗ ಹಿಂದೂ ಧರ್ಮಕ್ಕೆ ವಿಮುಖ ತೋರಿಸುತ್ತಿರುವ ಹಿನ್ನೆಲೆಯಲ್ಲಿ ಭಯಗ್ರಸ್ಥರಾದ ಮೂಲಭೂತವಾದಿಗಳು ಅವರನ್ನು ಆಕರ್ಷಿಸಿ ಬುಟ್ಟಿಗೆ ಕೆಡವುವ ಉದ್ದೇಶವಾಗಿ ಅಂಬೇಡ್ಕರ್, ನಾರಾಯಣಗುರುಗಳ ಮೇಲೆ ತಮ್ಮ ಹುಸಿ ಪ್ರೀತಿಯನ್ನು ತೋರಿಸುವ ನಾಟಕ ಮಾಡುತ್ತಿರುವುದೇ ಹೊರತು ಬೇರೇನಲ್ಲ.


ಈ ಸಂಗತಿಯನ್ನು ಮನಗಂಡು ಹಿಂದುಳಿದ ವರ್ಗದವರೇ ಆಗಿರುವ ಬಿಲ್ಲವ ಕುಲದ ಸುದಿಯ ಶ್ರೀ ಜನಾರ್ಧನ ಪೂಜಾರಿಯವರು ಇತ್ತೀಚೆಗೆ ಮಂಗಳೂರಿನ ಸಮಾರಂಭವೊಂದರಲ್ಲಿ ತಮ್ಮವರಿಗೆ ಕೆಲವು ಹಿತ ನುಡಿಗಳನ್ನು ಹೇಳಿದ್ದರು–"'ಕೊಂಕಣಿಗರು, ಬ್ರಾಹ್ಮಣರು ಇಂದು ಓದಿ ವಿದ್ಯಾವಂತರಾಗಿ ಮುಂದುವರೆಯುತ್ತಿದ್ದಾರೆ' ಆದರೆ ನಿಮಗೇಕೆ ಹುಟ್ಟುಹಾಕಿರುವ ಕೆಲಧರ್ಮ ಪ್ರೇರಿತ ಸಿದ್ಧಾಂತ? ಗೆ ಬಲಿ ಬಿದ್ದು ನೀವೆಲ್ಲ ಅಧೋಗತಿಗಿಳಿಯಬೇಡಿ" ಅಂದು ಅವರು ಅಂಕಿ ಅಂಶಗಳ ಸಮೇತ ತಮ್ಮ ನಿಲುವನ್ನು ಪ್ರತಿಪಾದಿಸಿ ಎಚ್ಚರಿಸಿದ್ದರು. ಹೌದು ಅವರ ಜನಾಂಗ 7-8 ದಶಕಗಳ ಹಿಂದೆ ಅಸ್ಪೃಶ್ಯರಲ್ಲೇ ಕೀಳು ಸ್ತರದಲ್ಲಿ ಪರಿಗಣಿತವಾಗಿತ್ತು. ಅವರು ಭಕ್ತಿಯಿಂದ ಪೂಜಿಸುವ ನಾರಾಯಣ ಗುರುಗಳು ಮೇಲ್ವರ್ಗದವರಿಂದ ಅನುಭವಿಸಿದ ಪೀಡನೆ, ಮಾನಸಿಕ ಹಿಂಸೆಗಳು, ಅವರ ಚರಿತ್ರೆಯನ್ನು ಓದಿದವರಿಗೆ ತಿಳಿದಂತಹ ಸಂಗತಿಯಾಗಿದೆ. ಇಂತಹ ಅವಮಾನಗಳೇ ಅವರನ್ನು ಸಾಧನೆಗೆ ಪ್ರೇರೆಪಿಸಿದ್ದು ಇತಿಹಾಸ. ಆಗ ಕೀಳಾಗಿ ಕಂಡ ನಾರಾಯಣ ಗುರುಗಳು ಇಂದು ಮೇಲ್ವರ್ಗದವರ ಸಮಾಜೋತ್ಸವದಲ್ಲಿ ಹಿಂದೂ ನಾಯಕರುಗಳ ಗಾಳದ ಹುಳುವಿನಂತೆ ಅವರ ಅನುಯಾಯಿಗಳನ್ನು ಆಕರ್ಷಿಸಲು ಬಳಕೆ ಯಾಗುತ್ತಿರುವುದು ದುರಂತವಲ್ಲದೇ ಇನ್ನೇನು?

ಸ್ವಭಾವತಃ ಕೆಳವರ್ಗದವರು ಪುಕ್ಕಲರಲ್ಲ. ದೈಹಿಕವಾಗಿ ಬಲಿಷ್ಠರಾಗಿರುವಂತೆ ಇದೀಗ ಆರ್ಥಿಕವಾಗಿಯೂ ಸಬಲರಾಗುತ್ತಿರುವುದರಿಂದ ಮುಸ್ಲಿಂ-ಕ್ರೈಸ್ತರ ಮೇಲೆ ಛೂ ಬಿಡಲು ಹಾಗೂ ಹಣ ಬಾಚಲು ಸಲೀಸಾಗಿರುವ ಕಾರಣದಿಂದಾಗಿ ಮೇಲ್ವರ್ಗದವರ ಹಿಂದೂ ಸಮಾಜೋತ್ಸವದಲ್ಲಿ ಕೆಳವರ್ಗದ ನಾಯಕರ ಚಿತ್ರವನ್ನು ಬಿಂಬಿಸಿ ಅವರನ್ನು ಆಕರ್ಷಿಸುತ್ತಿದ್ದಾರೆ. ಅಷ್ಟಕ್ಕೂ ಏಕಾಏಕಿ ಹಿಂದುಳಿದ ವರ್ಗದವರ ಮೇಲೆ ಈ ಗೋಲ್ವಾಲ್ಕರನ ಅನುಯಾಯಿಗಳಲ್ಲಿ ಉಕ್ಕಿ ಹರಿಯುತ್ತಿರುವ ಪ್ರೀತಿ, ಕಾಳಜಿಗಳೆಲ್ಲ ಎಷ್ಟು ದಿನ? ಎಂದು ಎಲ್ಲರೂ ಯೋಚಿಸಬೇಕಿದೆ.

'ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಮಾತ್ರ ಸಾಯಲಾರೆ' ಎಂದು ಹಿಂದೂ ಧರ್ಮವನ್ನು ತಿರಸ್ಕರಿಸಿದ್ದ ಅಂಬೇಡ್ಕರರನ್ನು ಹಿಂದೂ ಸಮಾಜೋತ್ಸವದಲ್ಲಿ ಗೋಲ್ವಾಲ್ಕರನನ್ನು ಸಮರ್ಥಿಸಲು ಬಳಸಿಕೊಂಡಿದ್ದಕ್ಕೆ ವ್ಯಕ್ತವಾದ ಪ್ರತಿರೋಧಕ್ಕೆ ಈ ಹಿಂದೂ ನಾಯಕರುಗಳೇ ಹೊಣೆಗಾರರೇ ಹೊರತು ಪ್ರತಿಭಟನಾಕಾರರಲ್ಲ. "ಚಪ್ಪಲಿ ಪ್ರಕರಣ (ಇದು ಗೋಲ್ವಾಲ್ಕರ್‌ನಿಗೆ ಮಾಡಿದ್ದಾದರೂ ಜನರ ಸಿಂಪಥಿ, ಬೆಂಬಲ ಪಡೆಯಲು ಭಾರತಮಾತೆಗೆ ಎಂದು ಎಲ್ಲೆಡೆ ಬಿಂಬಿಸಲಾಯಿತು) ಕುರಿತಂತೆ ಸುಳ್ಯದಲ್ಲಿ ಪ್ರತಿಭಟನೆ ನಡೆಯಿತು. ಆದರೆ ಅಲ್ಲಿ ಸಮಾಜೋತ್ಸವ ಮುಗಿದ ಮೇಲೆ ಬ್ಯಾನರ್ ತೆಗೆದರು ಎಂದು ಅದೇ ದಲಿತರ ವಿರುದ್ಧ ಪೊಲೀಸರಿಗೆ ದೂರು ನೀಡಿ ದಲಿತ ಯುವಕರ ಮೇಲೆ ಹಲ್ಲೆ ನಡೆಸಿದರು. ಅಂದರೆ ಸಮಾಜೋತ್ಸವಕ್ಕೆ ಅಂಬೇಡ್ಕರ್ ಚಿತ್ರ ಬೇಕು ಅಂಬೇಡ್ಕರ್‌ರ ಜನರು ಮಾತ್ರ ಇವರುಗಳಿಗೆ ಬೇಡ ಎಂದಾಯಿತಲ್ಲವೇ?

-ರವಿ ಪುತ್ತೂರ್, ದಕ್ಷಿಣ ಕನ್ನಡ

ಹೈಕು



ಹೂಗಳ ರಾಶಿಯಡಿ
ಈ ಕನಸು
ಕಾಣುತ್ತ
ಈ ಕ್ಷಣ
ನಾನು ಸಾಯಬಾರದೇಕೆ
* * * * *
ನಗ್ನ ಕುದುರೆಯ
ಮೇಲೆ
ನಗ್ನಳಾಗಿರುವ
ನಾನು
ಈ ಮಳೆಯಲ್ಲಿ
ಸವಾರಿ ಮಾಡುತ್ತಿದ್ದೇನೆ
* * * * *
ನಾನು ಆ
ಇರುವೆಯನ್ನು
ಕೊಂದದ್ದನ್ನು
ನನ್ನ ಇಬ್ಬರು
ಮಕ್ಕಳು ನೋಡಿ
ಬೆರಗಣ್ಣಾದರು
* * * * *
ಈ ಬೆಳದಿಂಗಳ
ರಾತ್ರಿಯಲ್ಲಿ
ಪಕ್ಕದ ಮನೆಯವನು ನುಡಿಸುತ್ತಿರುವ
ಕೊಳಲು ಬರೀ ಗದ್ದಲ
* * * * *
ಎರಡು ನೀರು
ಬುಗ್ಗೆಗಳು
ಜೊತೆಗೂಡಿ
ಸಾವನ್ನಪ್ಪಿದವು
* * * * *
ಭತ್ತದ ಹೊಲದಲ್ಲಿರುವ
ಹುಡುಗಿಯರೆ,
ನಿಮ್ಮ ಹಾಡಿಗೆ
ಕೆಸರಂಟಿಲ್ಲ ಹೇಗೆ

-ಸಾವಂತ್ರಿ

ಕೋಳಿಮೊಟ್ಟೆ ಬಾಳೆಹಣ್ಣು ಯುದ್ಧ ಪ್ರಸಂಗವು

'ನೀವು ಮೊಟ್ಟೆ ತಿಂತೀರಾ ಸಾರ್' ಅಂತ ಯಾರೋ ಕೇಳಿದ್ದಕ್ಕೆ 'ಮೊಟ್ಟೆ ಏನು ಮೊಟ್ಟೆಯ ಅಮ್ಮನ್ನೂ ತಿಂತೀನಿ' ಅಂದಿದ್ದರಂತೆ ಜೆ.ಎಚ್. ಪಟೇಲರು. ನಾವು ಸಣ್ಣ ಹುಡುಗರಾಗಿದ್ದಾಗ ಯಾರಾದರೂ, ಯಾವ ವಿಷಯ ದಲ್ಲಾದರೂ ಸೊನ್ನೆ ಅಂಕಗಳಿಸಿದ್ದರೆ 'ಕೋಳಿಮೊಟ್ಟೆ' ಅಂತ ಕಿಚಾಯಿಸುತ್ತಿದ್ದೆವು. ಅಪ್ಪ ಅಮ್ಮ ಅದ್ಯಾವುದೋ ದೇವರಿಗೆ ಹೊತ್ತ ಹರಕೆಗೆ ಪಾಪಿ ಮಕ್ಕಳ ಜುಟ್ಟು ಬಲಿಯಾದಾಗ ಅಂತಹವರನ್ನ 'ಮೊಟ್ಟೆ ತಲೆ' ಅಂತ ರೇಗಿಸುತ್ತಿದ್ದೆವು. ಇಂಗ್ಲಿಷಿನಲ್ಲಿ **Egg head** ಅಂದರೆ 'ಮೊಟ್ಟೆ ತಲೆ'- ಅಂದರೆ ಬೆಪ್ಪ ದಡ್ಡ ಅಂತ ಅರ್ಥವಂತೆ. ನಮ್ಮ 'ಮೊಟ್ಟೆ ತಲೆ' ಹೊತ್ತವನ ಬುದ್ಧಿ ಚುರುಕಾಗೇ ಇರುತ್ತಿದ್ದರೂ ಆಕಾರ ನೋಡಿ ಹಾಗೆ ಆಡಿಕೊಳ್ಳುತ್ತಿದ್ದೆವು. ಫ್ರಾನ್ಸಿನಲ್ಲಿ ಒಂದು ಪದ್ಧತಿ ಇದೆಯಂತೆ. ನಮ್ಮಲ್ಲಿ ಹೆಣ್ಣುಮಗಳು ಮೊದಲ ಸಲ ಅತ್ತೆ ಮನೆಗೆ ಬಂದಾಗ ಹೊಸಿಲಲ್ಲಿ ಸೇರಿನಲ್ಲಿಟ್ಟಿದ್ದ ಅಕ್ಕಿಯನ್ನು ಬಲಗಾಲಿನಿಂದ ಒದೆದು, ಈ ಮನೆ ತುಂಬ ಹೀಗೇನೆ ದವಸ ಧಾನ್ಯ ತುಂಬಿರಲಿ, ಎಲ್ಲರೂ ಸುಭಿಕ್ಷವಾಗಿರಲಿ, ಅಂತ ಅಕ್ಕಿಯನ್ನು ಮನೆಯ ಅಂಗಳದಲ್ಲಿ ಚೆಲ್ಲಲ್ಲವೆ ಅದೇ ರೀತಿ ಅಲ್ಲೂ ಮಾಡ್ತಾರಂತೆ. ಅಂದರೆ ಇಲ್ಲಿ ಹಾಗೇನೆ ಸೇರಿನಲ್ಲಿಟ್ಟಿದ್ದ ಅಕ್ಕಿಯನ್ನು ಒದೆದು ಹರಡ್ತಾರೆ ಅಂತ ಅಲ್ಲ, ಹೊಸದಾಗಿ ಅತ್ತೆ ಮನೆಗೆ ಕಾಲಿಡಬೇಕಾದ ವಧು ಮನೆಯ ಹೊಸಲಿನ ಮೇಲೆ ಕೋಳಿಮೊಟ್ಟೆ ಒಡೆದು ಒಳಗೆ ಹೋಗ್ತಾಳಂತೆ. ಹೀಗೆ ಮಾಡುವುದರಿಂದ ಆ ಮನೆಯ ಐಶ್ವರ್ಯ ವೃದ್ಧಿಸುತ್ತೆ, ಮಕ್ಕಳು ಮರಿ ನೂರು ಕಾಲ ನೆಮ್ಮದಿಯಿಂದ ಬಾಳ್ತಾರೆ ಅನ್ನೋ ನಂಬಿಕೆಯಂತೆ.

ಈಗ ಈ ಮೊಟ್ಟೆ ವಿಚಾರ ಯಾಕೆ ಅಂದರೆ ಕೋ-ಜಾ ಸರ್ಕಾರದ ಹನಿಮೂನ್‌ನ ಸುಂದರ ಕಾಂಡ ಮುಗಿದು ಮೊಟ್ಟೆ ವಿಚಾರದಲ್ಲಿ ಕೋಳಿ ಜಗಳದ ಯುದ್ಧಕಾಂಡ ಪ್ರಾರಂಭವಾಗಿದೆ. ಹೊರಟ್ಟಿ ಸಾಹೇಬರು ಮೊಟ್ಟೆ ಕೊಡುವ ವಿಚಾರದಲ್ಲಿ ವಿರೋಧದ ದನಿ ಬಂದಾಗ 'ಇದು ಕೇಂದ್ರ ಸರ್ಕಾರದ ಯೋಜನೆ. ನಮಗೂ ಇದಕ್ಕೂ ಸಂಬಂಧ ಇಲ್ಲ' ಅಂತ ನುಣುಚಿಕೊಂಡಿದ್ದರು. ಈಗ ನೋಡಿದರೆ 'ಸರ್ಕಾರ ಮಕ್ಕಳ ಅಭಿಪ್ರಾಯ ಸಂಗ್ರಹಿಸಿತು. ಶೇ. 95 ಭಾಗ ಶಾಲಾಮಕ್ಕಳು ಮೊಟ್ಟೆ ಪರವಾಗಿದ್ದಾರೆ' ಅನ್ನುವ ಅಭಿಪ್ರಾಯದ ಮಾತುಗಳನ್ನು ಕೇಳಿ ಬೆಳಗಾಂ ಜಿಲ್ಲೆಯಲ್ಲಿ ಇದನ್ನು ಜಾರಿಗೂ ತಂದುಬಿಟ್ಟಿದ್ದಾರೆ. ಇದರಲ್ಲೇನೂ ಆಶ್ಚರ್ಯ ಇಲ್ಲ ಬಿಡಿ. ಮಂತ್ರಿ ಮಹೋದಯರುಗಳ ಮಾತನ್ನೆ ಸತ್ಯಸ್ಯ ಸತ್ಯ ಅಂತ ತಿಳಿದರೆ ಅದಕ್ಕಿಂತ ಮೂರ್ಖತನ ಇನ್ನಿಲ್ಲ, ಹಿಂದೆ ಹೊರಟ್ಟಿ ಸಾಹೇಬರು ಹಾಗಂದಿದ್ದರು. ಈಗ ಯಾರು ಹಿನ್ನೆಲೆಯಲ್ಲಿ ನಿಂತು ಹೀಗೆ ಹೇಳು, ಹಿಂಗೆ ಮಾಡು ಅಂತಿದಾರೋ ಏನು ಕಥೆಯೋ. ಅವರ ರಾಜಕೀಯದ ಒತ್ತಡಗಳು ನಮಗೆ ಹೇಗೆ ತಿಳಿಯಬೇಕು ಹೇಳಿ. ಈಗ ಹೀಗೆ ಹೇಳ್ತಿದಾರೆ. 'ಜಾ'ಸರ್ಕಾರ ಈ ನಿರ್ಧಾರ ತಾಳಿದರೆ 'ಕೋ' ಸರ್ಕಾರ ಸುಮ್ಮನಿರಲು ಸಾಧ್ಯವೆ? ಅದೂ ಪರಮಪೂಜ್ಯ ಮಠಾಧೀಶರು, ಅಡ್ವಾಣಿ ಸಾಹೇಬರು ಅಪ್ಪಣೆ ಕೊಡಿಸಿರುವಾಗ! 'ಮೊಟ್ಟೆ ಕೊಡದು' ಎಂದು ಕೂಗು ಹಾಕುತ್ತಿದ್ದಾರೆ ಸದಾನಂದ ಗೌಡರು, ಯಡಿಯೂರಪ್ಪನವರು! ಮೊಟ್ಟೆ ನೀಡಲು ಪ್ರಾರಂಭ ಆಗಿದೆಯಲ್ಲ? ಏನು ಮಾಡುತ್ತೀರಿ? ಉಪಮುಖ್ಯಮಂತ್ರಿ ಗಳಿಗೇ ಇಂತಹ ಪ್ರಶ್ನೆ? 'ಆಜ್ಞೆಯನ್ನು ಹಿಂತೆಗೆದುಕೊಳ್ಳುತ್ತೇವೆ' ಎನ್ನುತ್ತಾರೆ ಯಡಿಯೂರಪ್ಪ ಪಾಪ ಇಲ್ಲಿರುವ ಯಾವನಿಗೂ ಅಧಿಕಾರ ನಡೆಸಿ ಅನುಭವ ಇಲ್ಲ; ಸರ್ಕಾರ ಆಜ್ಞೆ ಎಂದರೆ ಸಾಮೂಹಿಕ ಜವಾಬ್ದಾರಿ ಎಂಬ ತಿಳಿವಳಿಕೆಯನ್ನು ಅವರಿಂದ ನಿರೀಕ್ಷಿಸುವುದು ಅಪರಾಧ!

ಅಲ್ಲ ಮೊಟ್ಟೆ ಮೇಲೆ ಏಕೆ ಇವರಗಿಷ್ಟೊಂದು ಸಿಟ್ಟು?

ಇತ್ತೀಚೆಗೆ ಮೈಸೂರಿನಲ್ಲಿ ಮಾರ್ವಾಡಿ ಜನಾಂಗದ ಮಹಿಳೆಯರು ಮೊಟ್ಟೆ ನೀಡುವುದರ ವಿರುದ್ಧ ಪ್ರತಿಭಟಿಸಿ ದರು. ಯಾವುದೇ ಪ್ರತಿಭಟನೆಗೆ ಇದುವರೆವಿಗೆ ಮುಂದಾ ಗದ ಇವರು ಹೀಗೆ ಬೀದಿಗಿಳಿಯಬೇಕಾದರೆ ತಮ್ಮವರೇ ಅಧಿಕಾರದಲ್ಲಿದ್ದಾರೆ ಎನ್ನುವ ಧಿಮಾಕು ಬಂದಿರಬಹುದು. ಅದು ಹಾಗಿರಲಿ. ಮೊಟ್ಟೆ ನೀಡುತ್ತಿರುವುದು ಸರ್ಕಾರಿ ಶಾಲೆಯ ಬಡಮಕ್ಕಳಿಗೆ. ಇವರ ಮಕ್ಕಳು ಯಾರೂ ಆ ಶಾಲೆಗಳ ಬಳಿಯೂ ಸುಳಿಯುವುದಿಲ್ಲ. ಅವರೆಲ್ಲರ ವಿದ್ಯಾಭ್ಯಾಸ ಐಶಾರಾಮಿ ಖಾಸಗಿ ಶಾಲೆಗಳಲ್ಲಿ, ಆದರೂ ಪ್ರತಿಭಟಿಸುತ್ತಿದ್ದಾರೆ ಯಾಕೆ ಅಂದರೆ ಮೊಟ್ಟೆ ನೀಡುವು ದರಿಂದ ಅನ್ಯಧರ್ಮೀಯರ ಮನಸ್ಸಿಗೆ ನೋವಾಗುವುದಂತೆ!



ಶೇ. 40 ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿದ್ದರೆ ಇವರಿಗೆ ನೋವೇ ಆಗುವುದಿಲ್ಲ! ಈ ತಾಯಂದಿರಲ್ಲಿ ಒಂದು ಪ್ರಶ್ನೆ: ಐಷಾರಾಮಿ ಬಾರ್‌ಗಳಲ್ಲಿ, ಹೋಟೆಲುಗಳಲ್ಲಿ, ಕ್ಲಬ್ಬುಗಳಲ್ಲಿ ನಿಮ್ಮ ಜನಾಂಗದ ಹಲವು ಪುರುಷರು ಹೆಂಡ ಕುಡಿದು, ಕಂಡ ಕತ್ತರಿಸುತ್ತಾರಲ್ಲ ಅದು ಏನು ಅನ್ನಿಸುತ್ತೆ ತಾಯಂದಿರಾ?

ಇನ್ನು ನಮ್ಮ ಮಠಾಧೀಶರು ಸರಿಯೇ ಸರಿ. ಈ ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಯಾವುದು ಧರ್ಮ, ಯಾವುದು ರಾಜಕೀಯ ಎಂದು ಗುರುತು ಹಚ್ಚುವುದೇ ಕಷ್ಟ. ಮಠಾಧೀಶರು ಧಾರ್ಮಿಕ ಕ್ರಿಯೆಗಳನ್ನು ಮರೆತು ರಾಜಕೀಯ ಮಾಡುತ್ತಾ ಇದ್ದಾರೆ. ರಾಜಕಾರಣಿಗಳು ಆಡಳಿತ ನಡೆಸುವುದು ಬಿಟ್ಟು ಮಠಗಳಲ್ಲಿ ಆಶೀರ್ವಚನ ಬೇಡಲು ಕಾಯುತ್ತಾ ಇರುತ್ತಾರೆ. ಮಾತೆ ಮಹಾದೇವಿ ಯಿಂದ ಹಿಡಿದು ವಿಶ್ವೇಶತೀರ್ಥರವರೆಗೆ ಖಾವಿ ಧರಿಸಿ ರೋರೆಲ್ಲ ಶಾಲೆಗಳಲ್ಲಿ ಮೊಟ್ಟೆ ನೀಡುವುದನ್ನು ನಿಷೇಧಿಸ ಬೇಕು ಅಂತ ಫರ್ಮಾನು ಹೊರಡಿಸಿದ್ದಾರೆ! ಮೊಟ್ಟೆ ತಿಂದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಕ್ಷೀಣಿಸುತ್ತದೆಯಂತೆ! ತಾಮಸಗುಣ ಹೆಚ್ಚುವುದಂತೆ! ಆಹಾ! ಬಡಶೂದ್ರ ಮಕ್ಕಳ ಮೇಲೆ ಎಷ್ಟೊಂದು ಕಾಳಜಿ! ಅಲ್ಲ ತಾಯಿಯ ಎದೆಯ ಹಾಲನ್ನು ಹೊರತು ಪಡಿಸಿ ಇನ್ನು ಯಾವುದರಲ್ಲೂ ಮೊಟ್ಟೆ ಯಲ್ಲಿರುವಷ್ಟು ಪೌಷ್ಟಿಕಾಂಶ ಇಲ್ಲ ಎಂದು ವಿಜ್ಞಾನ ಹೇಳುತ್ತದಲ್ಲ ಅಂದರೆ ವಿಜ್ಞಾನವೇ ಸುಳ್ಳು 'ನಾವು ಹೇಳುವುದೆ' ಸತ್ಯ ಎನ್ನಬಹುದು ಈ ಖಾವಿಧಾರಿ ಗಳು!

ಅನಿಕ

ಹಾಗೆಯೇ ಆಗಲಿ. ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿರುವವರಿಗೆ ಏನು ಪರ್ಯಾಯ ವ್ಯವಸ್ಥೆ?

ಹಾಲು, ಹಣ್ಣು ಕೊಡಿ!

ಸಾತ್ವಿಕ ಆಹಾರ! ಸಾತ್ವಿಕರ ನುಡಿ!

ಅಲ್ಲ, ಹಸು ಹಾಲು ಕೊಡುವುದು ಮನುಷ್ಯರಿಗಾಗಿ ಅಲ್ಲ, ತನ್ನ ಕರುವಿಗಾಗಿ. ಕರುವಿನ ಆಹಾರದ ಭಾಗವನ್ನು ಬಲವಂತವಾಗಿ ಕಿತ್ತುಕೊಳ್ಳುವುದು ಧಾರ್ಮಿಕ ಕ್ರಿಯೆ ಇವರ ದೃಷ್ಟಿಯಲ್ಲಿ!

ಮೊಟ್ಟೆಯಲ್ಲಿ ಯಾವುದೇ ರೀತಿಯ ಜೀವ ಜಂತು ಇಲ್ಲ ಎನ್ನುತ್ತದೆ ವಿಜ್ಞಾನ. ಇದೆ ಎನ್ನುತ್ತಾರೆ ಖಾವಿಧಾರಿಗಳು! ಬಟ್ಟೆಯ ವ್ಯಾಮೋಹವೇ ಇಲ್ಲದ ಜೈನ ಮುನಿ ತರುಣಸಾಗರ್ ಹೇಳುತ್ತಾರೆ: 'ಮೊಟ್ಟೆ ನೀಡುವುದು ಬೇಡ. ಭಾರತ ಪ್ರಾಚೀನ ಕಾಲದಿಂದಲೂ ಶಾಖಾಹಾರಿ ಗಳ ದೇಶ!' ಪ್ರಖರ ವೈಚಾರಿಕತೆಯನ್ನು ಮೈಗೂಡಿಸಿಕೊಂಡ ಇಂತಹ ಮುನಿ ವರ್ಯರನ್ನೂ ಧರ್ಮದ ಅಂಧಕಾರದ ಮಾಯೆ ಮುಸುಗು ಹಾಕಿ ಇತಿಹಾಸ ವನ್ನೇ ಮರೆಸುತ್ತಿದೆ. ಬೌದ್ಧ ಧರ್ಮ ಸ್ಥಾಪಿತವಾಗುವ ಮುನ್ನ ಬ್ರಾಹ್ಮಣರೂ ಗೋಮಾಂಸ ಭಕ್ಷಕರಾಗಿದ್ದರು ಎನ್ನುತ್ತಾರೆ ಇತಿಹಾಸಕಾರರು. ಇಲ್ಲ ಅನ್ನುತ್ತಾರೆ ಇವರು! ಇದು ಇತಿಹಾಸದ ಮರೆಯುವಿಕೆಯೊ? ತಿರುಚುವಿಕೆಯೊ?

ಇತಿಹಾಸ ತಿರುಚಲೆಂದೇ ಸಂಘ ಪರಿವಾರದಲ್ಲಿ ತಜ್ಞರ ತಂಡ ಇದೆ. ಅವರು 'ತಿರುಚು ಇತಿಹಾಸ ತಜ್ಞರು!' ಅವರ ಸಾಲಿಗೆ ಈಗ ಜೈನಮುನಿ ತರುಣಸಾಗರ್ ಸೇರಿದ ಹಾಗಾಯಿತು ಅಷ್ಟೆ!

ಕೇವಲ ದೇಸೀ ಚಿಂತನೆಗೆ ತಮ್ಮನ್ನು ಮಿತಿಗೊಳಿಸಿ ಕೊಂಡರೆ ತಮ್ಮ ವಾದಕ್ಕೆ ಪುಷ್ಟಿ ದೊರೆಯುವುದು ಹೇಗೆ? ಪರದೇಸಿಗಳನ್ನು ಎಳೆದು ತರುತ್ತಿದ್ದಾರೆ. ಮಾಂಸಾಹಾರ ಸೇವನೆಯಿಂದ ಬೆಳೆದ ಕೊಬ್ಬನ್ನು ಕರಗಿಸಲು ಈಗ ಪಾಶ್ಚಿಮಾತ್ಯ ಬೊಜ್ಜಿಗರು ಸಸ್ಯಹಾರಿಗಳಾಗುತ್ತಿದ್ದಾರಂತೆ! ಅವರು ಉದಹರಿಸುವ ಜನ ತಿನ್ನುವುದಕ್ಕಾಗಿಯೇ ಬದುಕಿರುವವರು. ಇಲ್ಲಿ ಬದುಕುವುದಕ್ಕಾಗಿ ತಿನ್ನುವವರ ಸಮಸ್ಯೆ ಇದು. ಬಹುಪಾಲು ಮಕ್ಕಳಿಗೆ ಮೊಟ್ಟೆ ತಿನ್ನುವುದೇ ಹಬ್ಬ! ಇಂತಹ ಆನಂದವನ್ನು ಆ ಮಕ್ಕಳಿಂದ ಕಸಿದುಕೊಳ್ಳುವಿರೇಕೆ?

ಮೊಟ್ಟೆ ತಿನ್ನದವರನ್ನ ಯಾರೂ ಬಲವಂತ ಪ ವುದಿಲ್ಲ, ಮಾಂಸಾಹಾರಿ ಜನಾಂಗಗಳಲ್ಲೂ ಕೆ ಮೊಟ್ಟೆ ಮಾಂಸ ತಿನ್ನುವುದಿಲ್ಲ, ಅದು ಅ ಸೇರುವುದಿಲ್ಲ. ಮೊಟ್ಟೆ ತಿನ್ನದವರಿಗೆ ಕೊಡಲಾಗುತ್ತದಲ್ಲ ಎಂದರೆ ಯಾವುದೋ ಗ ತಕರಾರು ಎತ್ತುತ್ತಾರೆ. ಮಕ್ಕಳಲ್ಲಿ ತಾ ತೋರಬಾರದು ಎಂದು ಸಮವಸ್ತ್ರ ಬಳಸ ತ್ತದೆ. ಅಂತಹದ್ದರಲ್ಲಿ ಇದು ತಾರತಮ್ಯ ದಂತಲ್ಲವೆ ಎಂಬುದೇ ಈ ತಕರಾರು. ಸ ಧರಿಸಿದಾಕ್ಷಣ ಎಲ್ಲರೂ ಸಮಾನ ಚಿಂತನೆ, ಸ ಪದ್ಧತಿ ಹೊಂದಿರಬೇಕೆಂದೇ ಇದರ ಅರ್ಥ? ಇದ ಹಿಂದಿನ ಹುನ್ನಾರ ಸ್ಪಷ್ಟ:

ವೈವಿಧ್ಯಮಯ ಆಹಾರ ಪದ್ಧತಿ ಜ

ಏಕರೀತಿ ಆಹಾರ ಪದ್ಧತಿಗೆ ಆಗಿ ರೆಡಿ!
ಅಯ್ಯಂಗಾರ್ ಮೊಟ್ಟೆ!
ಅಯ್ಯಂಗಾರ್ ಬೇಕರಿ ಮುಂದೆ ನಿಂತಿದ್ದೊ
ಕೇಕು ತುಂಬ ರುಚಿ ಆಗಿತ್ತು,
'ಹೈಕ್ಲಾಸಾಗಿದೆ' ಅಂದ ಮೊಟ್ಟೆ ವಿರೋಧಿ.
'ಮೊಟ್ಟೆ ಹಾಕಿರ್ತಾರೆ ಕಣೊ' ಅಂದೆ.
'ಅದು ಅಯ್ಯಂಗಾರ್ ಮೊಟ್ಟೆ' ಅಂದ ಅವ!!

ದೇವರೇ ಕ್ಷಮಿಸು!

ಪೇಜಾವರ ವಿಶ್ವೇಶತೀರ್ಥ.

ಸಮಸ್ಯೆ ಯಾವುದೇ ಇರಲಿ. ಇವರ ಮಾತೇ ಅಂತಿ

ಇವರನ್ನು ನಂಬಿ ಹಲವರಿಂದ ಪಾದಪೂಜೆ. ಹಣಕ್ಕೆ ಲೆಕ್ಕ ಇಲ್ಲ ಪುಕ್ಕ ಇಲ್ಲ. ಇದರದ್ದೇ ಒ ವಿವಾದ. 12 ಲಕ್ಷ ರೂಪಾಯಿ ಪಡೆದುಕೊಂಡ ಯಾ ಅದನ್ನು ಹಿಂತಿರುಗಿಸಲಿಲ್ಲವಂತೆ. ಆತನಿಗೆ ಇವರ ಕಡೆ ರಿಂದ ಪ್ರಾಣ ಬೆದರಿಕೆಯಂತೆ. ಇದೆಲ್ಲ ಅಂತೆ ಕಂತೆ ವಿಷಯ ಬಿಡಿ. ಸ್ವಾಮೀಜಿಯೇ ಬಹಿರಂಗ ಪಡಿಸಿರು ಯಾರೋ ಬ್ಯಾಂಕಿನಿಂದ ಸಹಾಯ ಪಡೆಯಲು ಬೇಕೆಂದು ಕೋರಿದ್ದರಂತೆ. ಬ್ಯಾಂಕಿನಲ್ಲಿ ಹಾಗೆ ಹೀಗೆ ತೆಗೆದುಕೊಳ್ಳುವುದಂತೆ! ಅದನ್ನ ಹಿಂತಿರುಗಿಸಲಿಲ್ಲವಂತೆ.

ಕಾಗಕ್ಕ ಗುಬ್ಬಕ್ಕನ ಕತೆಯಂತೆ ತೋರಬಹುದು.

ಇರಲಿ. ತಮಗೆ ನೀಡಿದ ಪಾದ ಕಾಣಿಕೆಯ ದುಬ ಇದು. ಇದು ಮೊದಲನೆಯ ಅಪರಾಧ. ಬ್ಯಾಂಕಿನಲ್ಲಿಟ್ಟು ಹಾಗೆ ತೆಗೆದುಕೊಳ್ಳುವುದು ಎಂದರೆ ನೀಡಿದಂತೆ ಮಾಡಿ ಸಾರ್ವಜನಿಕ ಬ್ಯಾಂಕಿಗೇ ಯಾಮಾ ವುದು. ಇದು ಎರಡನೆ ಅಪರಾಧ.

ಇವಕ್ಕೇನು ಶಿಕ್ಷೆ?

ಹಾಲಿ ಡಿಸಿಎಂ, ಭಾವಿ ಸಿಎಂ ಯಡಿಯೂರಪ್ಪನ 'ಇಂತಹ ಸದ್ಗುಣಸಂಪನ್ನರ ಬಗ್ಗೆ ಯಾರು ಆರೋ ಮಾಡಿದ್ದಾರೆಯೋ, ಅವರ ಮೇಲೆ ಶಿಕ್ಷೆ ವಿಧಿಸುವ ಪೊಲೀಸರಿಗೆ ತಿಳಿಸುತ್ತೇನೆ' ಎಂಬ ಅರ್ಥದ ಮಾತುಗ ಛೇ! ಎಂತಹ ಪ್ರಬುದ್ಧತೆ!

ಪೇಜಾವರ ಶ್ರೀಗಳು ಏನನ್ನುತ್ತಾರೆ?

'ಓ! ದೇವರೇ ನನ್ನನ್ನು ಕ್ಷಮಿಸು!'

ಎಲ್ಲರೂ ಇದೇ ಮಾರ್ಗ ಹಿಡಿದರೆ....

-ಎಚ್.ಎಲ್. ಕೇಶವಮೂರ್ತಿ

'ಒದಿರಿ, ಇಕ್ಕರಿ ಆದರೆ ಅಧಿಕಾರ ಕೊಡಿ'!

ದೇಶದ ವಿವಿಧ ಭಾಗಗಳಲ್ಲಿ ದಲಿತರ ಮೇಲೆ ನಡೆಯುವ ಅತ್ಯಾಚಾರ, ಕೊಲೆ, ದೌರ್ಜನ್ಯಗಳ ಬಗ್ಗೆ ತಮ್ಮ ಸಂಪಾದಕೀಯದಲ್ಲಿ ಓದುಗರಿಗೆ ಮಾಹಿತಿ ನೀಡುತ್ತಿರುವುದಕ್ಕೆ ತುಂಬಾ ಧನ್ಯವಾದಗಳು.

ಒಂದು ಕಾಲದಲ್ಲಿ ಜಡ್ಡುಗಟ್ಟಿದ್ದ ದಲಿತರ ಬದುಕಿನಲ್ಲಿ ಜಾಗೃತಿ ಮೂಡಿಸುವ ಮಹತ್ತರ ಪಾತ್ರ ವಹಿಸಿದ್ದವರಲ್ಲಿ ಡಾ. ಸಿದ್ಧಲಿಂಗಯ್ಯನವರೂ ಒಬ್ಬರು ಎಂಬುದರಲ್ಲಿ ಯಾವ ಅನುಮಾನವಿಲ್ಲ, ಮೇಲ್ಜಾತಿಯವರ ಜಾತಿ ನಿಂದನೆ, ಹೊಲೆ, ಮಾದಿಗರ ಮಾನಸಿಕ ಹಿಂಸೆಯನ್ನು ಸ್ವತಃ ಅನುಭವಿಸಿ ಆಕ್ರೋಶದ ಭಾಷಣ, ಬರಹಗಳಿಂದ ಅನೇಕ ದಲಿತ ಯುವಕರಲ್ಲಿ ಸ್ವಾಭಿಮಾನದ ಕಿಚ್ಚು ಹೆಚ್ಚಿಸಿದ್ದಂತೂ ಸತ್ಯ ಆದರೀಗ ಇವರು ಸ್ವಾಭಿಮಾನ, ಸಿದ್ಧಾಂತಗಳನ್ನು ತೊರೆದು ಅಧಿಕಾರಕ್ಕಾಗಿ ಕೋಮುವಾದಿ ಪಕ್ಷದೊಂದಿಗೆ ಸರ್ಕಾರ ನಡೆಸುತ್ತಿರುವ ಜಾತಿವಾದಿ ಎಚ್.ಡಿ. ಕುಮಾರಸ್ವಾಮಿಗೆ ರತ್ನಗಂಬಳಿ ಹಾಸಿ, ಜಯಕಾರ ಹೇಳುತ್ತಿರುವುದು ದುರಾದೃಷ್ಟಕರ.

ಕಳೆದ ಸಂಚಿಕೆಯಲ್ಲಿ ಸಿದ್ಧಲಿಂಗಯ್ಯನವರು ತಮ್ಮ 'ಊರು ಕೇರಿ' ಎರಡನೇ ಆವೃತ್ತಿಯನ್ನು ಕುಮಾರಸ್ವಾಮಿಗೆ ಅರ್ಪಿಸಿದ್ದು ಓದಿ ಹೇಸಿಗೆ ಎನಿಸಿತು. ಸಿದ್ಧಲಿಂಗಯ್ಯ ನವರು ಆಗ ದಲಿತರಿಗೆ 'ಒದಿರ್ರಾ, ಇಕ್ಕರ್ರಾ' ಎಂದಿದ್ದರು. ಆದರೆ ಈಗ ಮೇಲ್ಜಾತಿಯವರಿಗೆ 'ಒದಿರಿ, ಇಕ್ಕರಿ ಆದರೆ ಯಾವುದಾದರೂ ಅಧಿಕಾರ ಕೊಡಿ' ಎಂದು ಹೇಳುತ್ತಿರುವುದು ದಲಿತ ಸಮುದಾಯಕ್ಕೆ ಬಗೆದ ದ್ರೋಹ.

-ದೇವೇಂದ್ರ ಶರ್ಮಾ.
ಶಹಾಪೂರ

ತಾವು ಹಿಂದಿನ ಸಂಚಿಕೆಯಲ್ಲಿ ಚಂದ್ರ ಮಂಡಲ ಮತ್ತು ಚಿಕ್ಕಲ್ಲೂರಿನ ಸಿದ್ಧಪ್ಪಾಜೀ ಬಗ್ಗೆ ಬರೆದಿದ್ದು ಬಹಳ ಸಂತೋಷ ವಾಯಿತು. ತಾವು ಇನ್ನೊಮ್ಮೆ ಕೊಳ್ಳೇ ಗಾಲಕ್ಕೆ ಬಂದರೆ, ಕೊಳ್ಳೇಗಾಲ- ಬೆಂಗ ಳೂರು ಹೆದ್ದಾರಿಯಲ್ಲಿ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಎನ್ನುವ ಗ್ರಾಮ ಸಿಗುತ್ತದೆ. (ಬೆಂಗಳೂರಿನಿಂದ 125 ಕಿ.ಮೀ). ಈ ಸ್ಥಳದಿಂದ 20 ಕಿ.ಮೀ. ವ್ಯಾಪ್ತಿಯಲ್ಲಿ ಐತಿ ಹಾಸಿಕ, ಚಾರಿತ್ರಿಕ, ಧಾರ್ಮಿಕ ಸ್ಥಳಗಳು ಬೇಕಾದಷ್ಟು ಇವೆ. ಇಲ್ಲಿ ಬಂದು ನೋಡಿ ಇದರ ಬಗ್ಗೆ ಬರೆದು ಕನ್ನಡದ ಜಾಣ-ಜಾಣೆಯರಿಗೆ ಪರಿಚಯಿಸಿ.



ಸತ್ತೇಗಾಲ ಹ್ಯಾಂಡ್ ಪೋಸ್ಟಿನಿಂದ 20 ಕಿ.ಮೀಟರ್ ದೂರದಲ್ಲಿ ಮುಸ್ಲಿಮರ ಶ್ರದ್ಧಾ ಕೇಂದ್ರ ಹಜ್ರತ್-ಸೈಯದ್- ಯೂಸೋಫ್-ಷಾ-ಖಾದ್ರಿ ದರ್ಗವಿದೆ. ಅಲ್ಲಿಂದ 3 ಕಿ.ಮೀ. ದೂರದಲ್ಲಿ ಪ್ರಸಿದ್ಧ ಮಧ್ಯರಂಗ ದೇವಸ್ಥಾನವಿದೆ. ಇಲ್ಲಿಂದ 1 ಕಿ.ಮೀ. ದೂರದಲ್ಲಿ ಅಪಾರ ಭಕ್ತರನ್ನೊಳಗೊಂಡ ಆದಿಶಕ್ತಿ ಮಾರಮ್ಮನ ದೇವಸ್ಥಾನವಿದೆ. ಇದಷ್ಟೇ ಅಲ್ಲದೆ, 2 ಕಿ.ಮೀ. ಹತ್ತಿರಕ್ಕೆ ಪ್ರಸಿದ್ಧ ಗಗನಚುಕ್ಕಿ ಜಲಪಾತ ಮತ್ತು ಸೂಫಿ ಸಂತರ 'ಮರ್ದಾನೆ ಗೈಬ್' ದರ್ಗಾವಿದೆ. ಇದರ ಹತ್ತಿರವೇ ಭರಚುಕ್ಕಿ ಜಲಪಾತ ಮತ್ತು ಏಷ್ಯಾ ಖಂಡದ ಪ್ರಥಮ ಜಲವಿದ್ಯುತ್ ಕೇಂದ್ರ ಹಾಗೂ ತಲಕಾಡು ಇದೆ.

ನನ್ನ ಹೆಸರು ಎಂ. ಮುಕ್ರಂಪಾಷ. ಸುಮಾರು 18 ವರ್ಷದಿಂದ ಪತ್ರಿಕೆ ಜೊತೆಯಲ್ಲಿ ಬೆಳೆದವನು.

-ಎಂ. ಮುಕ್ರಂಪಾಷ,
ಕೊಳ್ಳೆಗಾಲ

ಹೊಸ ತೀರ್ಪು

ಜನವರಿ 10, 2007 ರ 'ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರಕಟವಾದ 'ಯಾವನು ಈ ಗೋಲ್ವಾಲ್ಕರ್' ತುಂಬಾ ಚೆನ್ನಾಗಿತ್ತು. ದುಷ್ಟ, ಅಮಾನವೀಯ, ಜಾತಿವಾದಿ, ಮನುಸ್ಮೃತಿಯೇ ದೇಶದ ಸಂವಿಧಾನವಾಗಿರಬೇಕು, ದಲಿತರಿಗೆ, ಆದಿವಾಸಿಗಳಿಗೆ ಸಮಾ ನತೆಯ ಅಗತ್ಯವಿಲ್ಲ ಎಂದು ಹೇಳಿದ್ದ ಗೋಲ್ವಾಲ್ಕರನ ಚಿತ್ರಣ ತುಂಬಾ ಅದ್ಭುತವಾಗಿತ್ತು.

ಕೆಲವು ಪತ್ರಿಕೆಗಳು ಕೋಮುವಾದಿ, ಜಾತಿಯತೆ, ಸಂಘ ಪರಿವಾರ ಮುಂತಾದ ಮನುವಾದಿ ಸಂಘಟನೆಗಳ ಪರವಾಗಿ ನಿಂತಿವೆ. ಆದರೆ ನಮ್ಮ 'ಲಂಕೇಶ್' ವಾ ಪತ್ರಿಕೆ ನ್ಯಾಯವನ್ನು ತಿಳಿದು ಸಮಾಜ ಪರಿವರ್ತನೆಗಾಗಿ ಕೋಮುವಾದಿ-ಮನುವಾದಿಯ ವಿರುದ್ಧ ಬಂಡಾಯ ಹೂಡಲು ಕರೆ ಕೊಡುತ್ತಿರುವುದು ಶ್ಲಾಘನೀಯ. ನಿಮ್ಮ ಹೋರಾಟ ಮುಂದುವರೆಯಲಿ ಎಂದು ಆಶಿಸುವೆ.

-ಸೋಮ

ಬಿಜೆಪಿ ಪಾಲಿಗೆ 'ಮೋಹಿನಿ ಶೋಭಾ ಯಡ್ಡಿಯೇ ಭಸ್ಮಾಸುರ' ಎಂಬ **headline** ಸೂಕ್ತವಾಗಿತ್ತು, ಯಡ್ಡಿ ಯಡವಟ್ಟು ಮಾಡ್ಕೊಳ್ತಾ ಅದಾನ. ಪಾಪ ನೀವ್ಯಾಕ ಎಚ್ಚರ ಮಾಡ್ತಿರಿ? ಒಂದಿಷ್ಟು ಅಂಡು ಸುಟ್ಟರೆ ಬುದ್ಧಿ ಬರ್ತಾತಿ. ಪಾಪಿ ಯಡ್ಡಿ ಶೋಭಾಳ ಸೆರಗು ಹಿಡಕೊಂಡು ಸಣ್ಣ ಹುಡುಗ್ರು ರಚ್ಚೆ ಹಿಡದಂಗ ಲಾಲಿಪಾಪು ಕೊಡಿಸೇ ಕೊಡಿಸಬೇಕು ಅನ್ನಾಂಗೆ, ಶೋಭಳ್ನಾ ಮಿನಿಸ್ಟ್ರ ಮಾಡೋಕೆಹೊಂಟಿರದನ್ನನೋಡಿದ್ರ ಅನಂತು ಮೈಯಲ್ಲಿ ಪರಿಚಿಕೊಂಡರು, ಯಾರು ಅಯ್ಯೋ ಅನಂಗಿಲ್ಲ ಅಂಗಾಗ್ಯದೆ. ಶೋಭ ಮಾರವ್ವನ ತರಾ ಹಲ್ಲು ಬಿಟ್ಟುಕೊಂಡು ಅನಂತುಗೆ ಅಪಹಾಸ್ಯ ಮಾಡ್ತಾಳ. ಪಾಪ ದೇವೇಗೌಡ ತನ್ನ ಕುಮಾರನ್ನ ಅವಧಿ ಇನ್ನು ಇರುವಾಗ್ಲೆ ಚಡ್ಡಿಗಳ ಸಹವಾಸ ಮಾಡಿ ಕೆಟ್ಟೋದೆ ಅಂತ ಸ್ಟೇಟ್‌ಮೆಂಟ್ ಕೊಟ್ಟು ಮೊಸಳೆ ಕಣ್ಣೀರು ಹಾಕಲಿಲ್ಲ. ಯಡ್ಡಿ ಯಾವ ಕಾರಣಕ್ಕೂ ಕೋಟು ಹೊಲಿಸ್ಗಬ್ಯಾಡ ಮರಿ.

-ಮುತ್ತಣ್ಣ ಪೂಜಾರ್, ಕದಲಬಾಳು

ಾವಿದರ ಸಂಸಾರದಲ್ಲಿ
ವನವೇ ಒಂದು ಚಕ್ರ ಇದ್ದಂತೆ.
ನು ಚಿಕ್ಕವನಾಗಿದ್ದಾಗ
ಪ್ಪಾಜಿಯ ಶೂಟಿಂಗ್
ೋಡಲು ಹೋಗುತ್ತಿದ್ದೆ. ಆಗ
ವರು ಫೈಟ್ ಮಾಡುವುದನ್ನು,
್ಯಾನ್ಸ್ ಮಾಡುವುದನ್ನು ನೋಡಿ
ಗುತ್ತಿದ್ದೆ. ಈಗ ನನ್ನನು ನೋಡಿ
್ನ ಮಗಳು ನಗುತ್ತಿದ್ದಳು.
ನು ನೋಡು ನೋಡುತ್ತಿದ್ದಂತೆ
ಗುವಾಗಿದ್ದ ಆಕೆ
ುಡುಗಿಯಾಗಿ ಬೆಳೆದಳು.

ರಾಜಶೇಖರ್ ನಿರ್ದೇಶನದ ನನ್ನ ನಾಲ್ಕೂ ಚಿತ್ರಗಳು ಸೂಪರ್‌ಹಿಟ್ ಆದವು. ನನ್ನ ಮತ್ತು ಸುಧಾರಾಣಿ ಜೋಡಿ ಅಪ್ಪಾಜಿ ಮತ್ತು ಭಾರತಿ ಜೋಡಿಯಂತೆ ಪಾಪ್ಯುಲರ್ ಆಯಿತು.

ಆರಂಭದಲ್ಲಿ ನನ್ನನ್ನು ಹ್ಯಾಟ್ರಿಕ್ ಹೀರೋ ಎಂದು ಕರೆದಿದ್ದ ಜನ ಈ ಹಂತದಲ್ಲಿ ನನ್ನನ್ನು ಸೂಪರ್ ಸ್ಟಾರ್ ಎಂದು ಕರೆಯಲು ಶುರುಮಾಡಿದರು. ಅಲ್ಲಿಯವರೆಗೂ ನನ್ನ ಯಾವ ಚಿತ್ರಗಳೂ ಬಾಕ್ಸಾಫೀಸಿನಲ್ಲಿ ದಯನೀಯವಾಗಿ ಸೋಲನ್ನು ಕಂಡಿರಲಿಲ್ಲವಾದ್ದರಿಂದ ಎಲ್ಲರು ನನ್ನನ್ನು ಹೊಗಳಲು ಶುರುಮಾಡಿದರು. ಆದರೆ ಈ ಹೊಗಳಿಕೆಗಳು ನನ್ನ ವ್ಯಕ್ತಿತ್ವವನ್ನು ಬದಲಾಯಿಸಲಿಲ್ಲ. ಯಾಕೆಂದರೆ ಅಪ್ಪಾಜಿಯ ನೆರಳನ್ನೇ ಹಿಂಬಾಲಿಸುತ್ತಿದ್ದ ನಾನು ಇಡೀ ಕರ್ನಾಟಕ ಅವರನ್ನು ಹಾಡಿ ಹೊಗಳಿದರೂ ಅವರೆಂದೂ ಹೊಗಳಿಕೆಗೆ ಬಲಿಯಾಗದಿದ್ದನ್ನು, ಎಂತಹ ಸಂದರ್ಭದಲ್ಲೂ ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ನಡೆದುಕೊಂಡಿದ್ದನ್ನು ನಾನು ನೋಡಿದ್ದೆ. ಜೀವನದಲ್ಲಿ ಹೀಗೇ ದೂರವಿಡಲು ನನ್ನಿಂದ ಸಾಧ್ಯವಿಲ್ಲ.


ದೊಡ್ಡ ಮಗಳು ನಿಷ್ಪಲಾ

ಇದೆಲ್ಲಾ ವಿಷಯ ಹೇಳುವುದಕ್ಕೆ ಕಾರಣವೂ ಇದೆ. ನಾವು ಎಷ್ಟೇ ದೊಡ್ಡ ಸೂಪರ್ ಸ್ಟಾರ್ ಆದರೂ ನಮಗೂ ಒಂದು ಖಾಸಗಿ ಜೀವನ ಇದ್ದೇ ಇರುತ್ತದೆ. ನಮ್ಮ ಹೆಂಡತಿ, ನಮ್ಮ ಮಕ್ಕಳು, ನಮ್ಮ ಸಂಸಾರ, ಇತ್ಯಾದಿ.... ನಮ್ಮಲ್ಲಿ ಹಣ ಮತ್ತು ಖ್ಯಾತಿ ಇದೆ ಎಂಬ ಮಾತ್ರಕ್ಕೆ ನಾವು ಇವೆಲ್ಲವನ್ನು ಮರೆಯಲು ಸಾಧ್ಯವಿಲ್ಲ.

ಉದಾಹರಣೆಗೆ 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರೀಕರಣ ಸಂದರ್ಭದಲ್ಲಿ ಒಂದೆಡೆ ಅಪ್ಪಾಜಿಯವರೊಂದಿಗೆ ನಟಿಸುವ ಟೆನ್ಷನ್, ಇನ್ನೊಂದೆಡೆ ಸೆಟ್‌ಗೆ ಬಂದಿದ್ದ ನನ್ನ ಐದು ತಿಂಗಳ ಮಗಳು ನಿಷ್ಪಲಳೊಂದಿಗೆ ಇರಬೇಕೆಂಬ ಆಸೆ. ಅಳುತ್ತಾ ನನ್ನನ್ನೇ ನೋಡುತ್ತಿದ್ದಳು. ಇನ್ನೊಂದೆಡೆ ನಿರ್ದೇಶಕ ವಿಜಯ್‌ರಂತಹ ಶಿಸ್ತಿನ ನಿರ್ದೇಶಕರ ಆದೇಶಗಳನ್ನು ಪಾಲಿಸಬೇಕಿದ್ದ ಕರ್ತವ್ಯ. ಒಂದು ಸತ್ಯದ ಮಾತನ್ನು ಹೇಳುತ್ತೇನೆ..... ಕಲಾವಿದರಾದವರಿಗೆ ಖಾಸಗಿ ಜೀವನ ಎಂಬುದೇ ಇರಲ್ಲ. ನಮ್ಮ ಚಿತ್ರೀಕರಣದ ಸ್ಥಳವೇ ಹಲವೊಮ್ಮೆ ನಮ್ಮ ಕುಟುಂಬ ಇರುವ ಸ್ಥಳವೂ ಆಗಿರುತ್ತೆ. ಅಂತಹ ಸಂದರ್ಭಗಳಲ್ಲಿ 'ಸೂಪರ್ ಸ್ಟಾರ್' ತರಹ ವರ್ತಿಸಲಾಗುವುದಿಲ್ಲ. ಇಂತಹ ಸಾವಿರಾರು ಘಟನೆಗಳು ನನ್ನ ಜೀವನದಲ್ಲಿ ನಡೆದುಹೋಗಿವೆ.

ಅಂತಹ ಸಂದರ್ಭದಲ್ಲೆಲ್ಲಾ ನಾನು ನನ್ನ ಮಗುವನ್ನು ಮತ್ತು ನನ್ನ ಪತ್ನಿಯನ್ನು ಚೆನ್ನಾಗಿ ನೋಡಿಕೊಂಡಿದ್ದೇನೋ ಇಲ್ಲವೋ ಎಂಬ ಚಿಂತೆ ನನ್ನನ್ನು ಕಾಡಲು ಶುರುಮಾಡುತ್ತೆ. ಆಗ ಅಪ್ಪಾಜಿಯವರ ಅಪ್ಪ- ಅಂದರೆ ನನ್ನ ತಾತ ಪುಟ್ಟಸ್ವಾಮಯ್ಯನವರು — ರಂಗಭೂಮಿಯಲ್ಲಿ ಪಟ್ಟ ಕಷ್ಟಗಳನ್ನು ಕುರಿತು ಅಪ್ಪಾಜಿ ಹೇಳುತ್ತಿದ್ದ ಕತೆಗಳು ನೆನಪಾಗುತ್ತದೆ. ಆಗ ಕಲಾವಿದನಿಗೆ ಇದೆಲ್ಲ ಅನಿವಾರ್ಯ ಎಂದು ನನಗೆ ನಾನೇ ಸಮಾಧಾನ ತಂದುಕೊಳ್ಳುತ್ತೇನೆ.

ನಾನೆಷ್ಟೇ ದೊಡ್ಡ ಸ್ಟಾರ್ ಆದರೂ ನನ್ನ ಮಗಳಿಗೆ ಬೇಕಾಗಿರುವುದು ನನ್ನ ಪ್ರೀತಿಯ ಅಪ್ಪುಗೆ. ಅದೇ ಅಪ್ಪುಗೆಯನ್ನು ಹಿಂದೆ ನಾನು ಶೂಟಿಂಗ್‌ಗೆ ಹೋದಾಗ ನನ್ನ ಅಪ್ಪಾಜಿಯಿಂದ ಬಯಸುತ್ತಿದ್ದೆ. ಆ ಸೂಕ್ಷ್ಮತೆ ಇದ್ದರೆ ಸಾಕು, ವೃತ್ತಿ ಮತ್ತು ಖಾಸಗಿ ಬದುಕನ್ನು ನಿಭಾಯಿಸಬಹುದು ಅನ್ನಿಸುತ್ತೆ. ನಟನಾದವನು ಹೀಗೆ ತನ್ನ ಸಂಸಾರದ ಜೀವನವನ್ನು ಜೊತೆಜೊತೆಯಾಗಿ ನಡೆಸಿಕೊಂಡು ಹೋಗುವುದರಲ್ಲೇ ಒಂದು ರೀತಿಯ ಸುಖವಿದೆ.

ನನ್ನ ಮಗಳು ನಿಷ್ಪಲ 'ಅದೇ ರಾಗ ಅದೇ ಹಾಡು' ಚಿತ್ರೀಕರಣಕ್ಕೂ ಬಂದಿದ್ದು ಆ ನಂತರ 'ಆಸೆಗೊಬ್ಬ ಮೀಸೆಗೊಬ್ಬ' ಹಾಡಿನ ಚಿತ್ರೀಕರಣದ ಸಂದರ್ಭದಲ್ಲಿ ನನ್ನನ್ನು ನೋಡಿ ಆಕೆ ನಗುತ್ತಿದ್ದದ್ದು ಇನ್ನೂ ನೆನಪಿದೆ. ಕಲಾವಿದರ ಸಂಸಾರದಲ್ಲಿ ಜೀವನವೇ ಒಂದು ಚಕ್ರ ಇದ್ದಂತೆ. ನಾನು ಚಿಕ್ಕವನಾಗಿದ್ದಾಗ ಅಪ್ಪಾಜಿಯ ಶೂಟಿಂಗ್ ನೋಡಲು ಹೋಗುತ್ತಿದ್ದೆ. ಆಗ ಅವರು ಫೈಟ್ ಮಾಡುವುದನ್ನು, ಡ್ಯಾನ್ಸ್ ಮಾಡುವುದನ್ನು ನೋಡಿ ನಗುತ್ತಿದ್ದೆ. ಈಗ ನನ್ನನು ನೋಡಿ ನನ್ನ ಮಗಳು ನಗುತ್ತಿದ್ದಳು. ನಾನು ನೋಡು ನೋಡುತ್ತಿದ್ದಂತೆ ಮಗುವಾಗಿದ್ದ ಆಕೆ ಹುಡುಗಿಯಾಗಿ ಬೆಳೆದಳು.

ಹತ್ತು ಚಿತ್ರಗಳಲ್ಲಿ ನಟಿಸಿದ ನಂತರ ನಾನು ಮತ್ತೊಮ್ಮೆ ರಿಮೇಕ್ ಚಿತ್ರಕ್ಕೆ ಕಾಲಿರಿಸಿದೆ. ಮಲೆಯಾಳಂನ 'ಕಿರೀಟಂ' ಚಿತ್ರವನ್ನು ಕನ್ನಡದಲ್ಲಿ 'ಮೋಡದ ಮರೆಯಲ್ಲಿ' ಎಂದು ರೀಮೇಕ್ ಮಾಡಲು ನಿರ್ಧರಿಸಲಾಗಿತ್ತು. ಮೋಹನ್ ಲಾಲ್‌ರವರು ನಟಿಸಿದ್ದ ಈ ಪಾತ್ರದಲ್ಲಿ ನಾನು ನಟಿಸಬೇಕೆಂದು ನಮ್ಮ ಮನೆಯವರೆಲ್ಲ ಒತ್ತಾಯಿಸಿದರು. ಸಾಧಾರಣವಾಗಿ ಮಲೆಯಾಳಂನ ರೀಮೇಕ್ ಕನ್ನಡದಲ್ಲಿ ಯಶಸ್ವಿ ಆಗಿರಲಿಲ್ಲವಾದ್ದರಿಂದ ನಾನು ಭಯದಿಂದಲೇ ಒಪ್ಪಿಕೊಂಡೆ. ಆದರೆ ನನ್ನ ನಿರೀಕ್ಷೆ ಮೀರಿ ಈ ಚಿತ್ರ ಹಿಟ್ ಆಯಿತು. ಇದಾದ ನಂತರ ನಾನು ನಟಿಸಿದ್ದು ಕಾದಂಬರಿ ಆಧಾರಿತ 'ಮಿಡಿದ ಶೃತಿ' ಚಿತ್ರದಲ್ಲಿ. ಆಗ ನನ್ನ ಮನಸ್ಥಿತಿ ಮತ್ತು ನನ್ನ ಹೃದಯದ ಮಿಡಿತ ಹೇಗಿತ್ತು ಗೊತ್ತಾ.......

(ಮುಂದುವರೆಯುತ್ತದೆ)




ಕಲಾವಿದರ ವಿಚಿತ್ರ ಬದುಕು

ನನ್ನ ವೃತ್ತಿ ಜೀವನದ ಮೊದಲ ಹತ್ತು ...ಗಳ ಟ್ರ್ಯಾಕ್‌ಅನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಹತ್ತು ಸಿನಿಮಾಗಳಲ್ಲಿ ಒಂದೇ ಒಂದು ರಿಮೇಕ್, ...ದು ಕಾದಂಬರಿ ಆಧಾರಿತ, ಒಂದು ಪೌರಾಣಿಕ, ...ದು ಆ್ಯಂಗ್ರಿ ಯಂಗ್‌ಮ್ಯಾನ್ ಮತ್ತೊಂದು ಹಾಸ್ಯ... ಹೀಗೆ ವಿವಿಧ ಪಾತ್ರಗಳಲ್ಲಿ ನಟಿಸುವ ಅದೃಷ್ಟ ...ಗೆ ಸಿಕ್ಕಿತು. ಇದರೊಂದಿಗೆ, ಆರಂಭದಲ್ಲೇ ...ಳ್ಳೆಯ ಕತೆಗಳು ಮತ್ತು ಪ್ರತಿಭಾವಂತ ...ದೇಶಕರೂ ನನಗೆ ಸಿಕ್ಕಿದ್ದರಿಂದ ಕಲಾವಿದನಾಗಿ ...ು ಚಿತ್ರರಂಗದಲ್ಲಿ ಭದ್ರವಾಗಿ ಕಾಲೂರಲು ...ಾಯಿತು.

...ಅದರಲ್ಲೂ ನನ್ನ ಅಪ್ಪಾಜಿಯವರೊಂದಿಗೆ ನಟಿ...ಸುವ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ. ಸಿಂಗೀತಂ ...ನಿವಾಸ್, ಎಂ.ಎಸ್. ರಾಜಶೇಖರ್, ವಿಜಯ, ...ಮಶೇಖರ್, ದಿನೇಶ್‌ಬಾಬು, ದತ್ತು, ಚಂದ್ರ...ನ ಇವರೆಲ್ಲರ ಶ್ರಮದೊಂದಿಗೆ ಎಂ.ಎಸ್. ...

ಬಾಳಬೇಕು ಎಂದು ಅವರೆಂದೂ ನಮಗೆ ಭಾಷಣ ಬಿಗಿದವರಲ್ಲ. ಆದರೆ ಅವರ ವರ್ತನೆ, ಅವರ ನಡವಳಿಕೆ ಮತ್ತು ಅವರ ಮಾತುಗಳೇ ನಮಗೆ ಪಾಠವಾಗಿದ್ದವು.

"ನೀವೊಬ್ಬ ದೊಡ್ಡ ಸ್ಟಾರ್. ಹೀಗಾಗಿ ನೀವು ಒಬ್ಬ ದೊಡ್ಡ ಸ್ಟಾರ್ ತರಹ ವರ್ತಿಸಬೇಕು, ಜನಸಾಮಾನ್ಯರ ಜೊತೆ ಅಷ್ಟು ಸುಲಭವಾಗಿ ಬೆರೆಯಬಾರದು" ಎಂದು ಒಂದಿಬ್ಬರು ನನಗೆ ಉಚಿತ ಸಲಹೆ ನೀಡಿದ್ದರು. ಆದರೆ ಆ ಸಲಹೆಗಳಿಗೆ ಸೊಪ್ಪು ಹಾಕದ ನಾನು "ದಯವಿಟ್ಟು ನಿಮ್ಮ ಕೆಲಸ ನೀವು ನೋಡಿಕೊಳ್ಳಿ, ನಾನು ನನ್ನ ಪಾಡಿಗೆ ಇರುತ್ತೇನೆ" ಎಂದು ಹೇಳಿದ್ದೆ. ಕಲಾವಿದರಾದ ನಾವು ಜನರಿಂದಲೇ ಈ ಎತ್ತರಕ್ಕೆ ಏರಿದವರು. ಅವರಿಂದಲೇ ಮುಂದೆ ಬಂದಿರುವುದು. ಆದರೆ ಈ ಹಂತಕ್ಕೆ ಬೆಳೆದ ನಂತರ ಜನರಿಂದಲೇ ದೂರವಿರುವುದು ನ್ಯಾಯಾನಾ? ಅದಕ್ಕೇ ಅಪ್ಪಾಜಿ ಅಭಿಮಾನಿಗಳನ್ನು 'ದೇವರು' ಎಂದು ಕರೆದದ್ದು. ಅವರಂತೆಯೇ ಜನರನ್ನು




ನಿರೂಪಣೆ: ಸದಾಶಿವ ಶೆಣೈ


ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಪ್ರೇಮಿಗಳು ಸೈಕೋಗಳೇ

...ಕೋ' ಎಂಬ ವಿಲಕ್ಷಣ ಹೆಸರಿನ ಚಿತ್ರ ಬರುವ 'ಪ್ರೇಮಿಗಳ ...ವು ಸೆಟ್ಟೇರಲಿದೆ. ಪ್ರೇಮಿಗಳಿಗೂ, ಸೈಕೋಗಳಿಗೂ ...ಸಂಬಂಧ ಎಂದು ಇದರ ನಿರ್ದೇಶಕ ದೇವದತ್ತರವರೇ ...ು. ಆದರೆ ರವಿಚಂದ್ರನ್‌ರವರ ಶಿಷ್ಯರಾದ ದೇವದತ್ತರವರು ...ಬಂಧವನ್ನು ವಿವರಿಸುವುದಿರಲಿ, ತಮ್ಮ ಚಿತ್ರದ ನಾಯಕ ಮತ್ತು ನಾಯಕಿ ಯಾರು ಎಂದು ಯಾರಿಗೂ ಹೇಳುವುದಿಲ್ಲವಂತೆ, ಚಿತ್ರೀಕರಣ ನಡೆಯುವ ಜಾಗಕ್ಕೆ ಪತ್ರಕರ್ತರಿಗೆ ಮತ್ತು ಟಿವಿ ಚಾನೆಲ್‌ಗಳಿಗೆ ಪ್ರವೇಶವಿಲ್ಲವಂತೆ, ಸಿನಿಮಾದ ಸ್ಟಿಲ್‌ಗಳನ್ನೂ ಅವರು ಬಿಡುಗಡೆ ಮಾಡುವುದಿಲ್ಲವಂತೆ.....



ಇದನ್ನೆಲ್ಲ ಕೇಳಿ ಬರೀ ಸಿನಿಮಾದ ...ಕೋ'ನೋ ಅಥವಾ ಅದರ ನಿರ್ದೇಶಕನೇ ಸೈಕೋನೋ ...ಎಲ್ಲ ನಿಮ್ಮನ್ನು ಕಾಡಿದರೆ ಅದಕ್ಕೆ ನಾವು ಜವಾಬ್ದಾರರಲ್ಲ!



ಪುನೀತ್ ಈಗ ಸಂಪಾದಕ

ಡಾ. ರಾಜ್‌ಕುಮಾರ್‌ರವರನ್ನು ಕುರಿತ 'Person behind the personality' ಎಂಬ ಪುಸ್ತಕ ಸದ್ಯದಲ್ಲೇ ಬಿಡುಗಡೆಯಾಗಲಿದೆ. ಪ್ರತಿಷ್ಠಿತ ಪೆಂಗ್ವಿನ್ ಪ್ರಕಾಶನದವರು ತರುತ್ತಿರುವ ಈ ಪುಸ್ತಕವನ್ನು ಸಂಪಾದಿಸುತ್ತಿರುವವರು ಪುನೀತ್ ರಾಜ್‌ಕುಮಾರ್.

"ಈ ಪುಸ್ತಕದಲ್ಲಿನ ಲೇಖನಗಳನ್ನು ಕುಟುಂಬದ ಸದಸ್ಯರೇ ಬರೆಯುತ್ತಿದ್ದಾರೆ. ಈತನಕ ಪ್ರಕಟವಾಗದ ಅನೇಕ ಅಪರೂಪದ ಫೋಟೋಗಳು ಇದರಲ್ಲಿರುತ್ತವೆ" ಎಂದು ಹೇಳುತ್ತಾರೆ ಪುನೀತ್.

ಬಂತು ಗಣೇಶ್ ಮತ್ತು ಪ್ರೇಮ್ ದರ್ಬಾರು?



'ಮುಂಗಾರಿನ ಮಳೆ' ಚಿತ್ರದ ಹೀರೋ ಗಣೇಶನಿಗೆ ಈಗ ಬೇಡಿಕೆ ಹೆಚ್ಚಾಗಿದ್ದು ಆತ 'ಹುಡುಗಾಟ' ಎಂಬ ಹೊಸ ಚಿತ್ರವನ್ನು ಒಪ್ಪಿಕೊಂಡಿದ್ದಾನೆ. ಇದರೊಂದಿಗೆ ಆತನಿಗೆ ಇನ್ನೂ ಮೂರ್ನಾಲ್ಕು ಆಫರ್‌ಗಳಿವೆ. ಹಾಗೆಯೇ 'ನೆನಪಿರಲಿ' ಖ್ಯಾತಿಯ ಪ್ರೇಮ್ ಕೂಡ ಈಗಾಗಲೇ ನಾಲ್ಕು ಚಿತ್ರಗಳಿಗೆ ಬುಕ್ ಆಗಿದ್ದಾನೆ. ಈ ಮಧ್ಯೆ ದೇವರಾಜ್‌ರವರ ಮಗ ಪ್ರಜ್ವಲ್ ನಟಿಸಿರುವ 'ಸಿಕ್ಸರ್' ಕೂಡ ಬಾಕ್ಸ್ ಆಫೀಸಿನಲ್ಲಿ ನಿಧಾನಕ್ಕೆ ಚೇತರಿಸಿಕೊಳ್ಳುತ್ತಿದೆ.



ಈ ಮೂವರನ್ನು ಜನ ಒಪ್ಪಿಕೊಂಡಿರುವುದರಿಂದ 2007 ಹೊಸಬರ ವರ್ಷವಾಗುವ ಸಾಧ್ಯತೆಗಳು ಕಾಣಿಸುತ್ತಿವೆ. ಇದೇ ಸಂದರ್ಭದಲ್ಲಿ ಕಳೆದವಾರ ಬಿಡುಗಡೆಯಾದ ಶಿವರಾಜ್‌ಕುಮಾರ್ ನಟಿಸಿರುವ 'ತಾಯಿಯ ಮಡಿಲು' ಮತ್ತು ವಿಜಯ್ ರಾಘವೇಂದ್ರ ನಟಿಸಿರುವ 'ರಾಜೀವ್' ಬಾಕ್ಸಾಫೀಸಿನಲ್ಲಿ ಮುಗ್ಗರಿಸಿವೆ.

ಮರುಜನ್ಮ ಯಾರಿಗೆ?

'ಯಜಮಾನ' ಖ್ಯಾತಿಯ ರೆಹಮಾನ್ ಎಂಬ ನಿರ್ಮಾಪಕ ಮತ್ತು 'ಹಲೋ ಯಮ' ಖ್ಯಾತಿಯ ಎ.ಆರ್. ಬಾಬು ಯಾನೆ ಮಹ್ಮದ್ ಗೌಸ್ ಎಂಬ ನಿರ್ದೇಶಕ ಜೊತೆಗೂಡಿ 'ಮರುಜನ್ಮ' ಎಂಬ ಚಿತ್ರವನ್ನು ಮಾಡಲು ಶುರುಮಾಡಿದ್ದಾರೆ.

ಇವರಿಬ್ಬರೂ ಸೂಪರ್ ಹಿಟ್ ಚಿತ್ರಗಳನ್ನು ನೀಡಿದ ನಂತರ ಅಜ್ಞಾತವಾಸಕ್ಕೆ ಜಾರಿದ್ದರು. ಈಗ 'ಮರುಜನ್ಮ' ಇವರಿಬ್ಬರಿಗೇ ಮರುಜನ್ಮ ನೀಡುತ್ತದೆಯೋ? ಅದು ಅವರ ಅದೃಷ್ಟವನ್ನು ಅವಲಂಬಿಸಿದೆ.


ಆಕೆ ಮೂವತ್ತರ ಹೊಸ್ತಿಲನ್ನು ದಾಟಿದ್ದಳು. ಅವಳಲ್ಲಿ ಸೌಂದರ್ಯವಿತ್ತು, ಆದರೆ ಹಿಂದಿಹಿಷ್ಟೆ ಹಾಕಿದರೆ ಒಂದು ಸಾಸಿವೆ ಕಾಳಿನಷ್ಟೂ ಪ್ರತಿಭೆ ಇರಲಿಲ್ಲ. ಎಷ್ಟು ಕಾಲ ಅಂತ ಸತ್ವ ಇಲ್ಲದ ಸೌಂದರ್ಯವನ್ನೇ ಬಂಡವಾಳವಾಗಿಸಿಕೊಂಡು ಚಲಾವಣೆಯಲ್ಲಿರಲು ಸಾಧ್ಯ? ಈ ಮಧ್ಯೆ ಆಕೆ ಇಷ್ಟಪಟ್ಟವರೆಲ್ಲ ಉಂಡಾಡಿ ಗುಂಡಪ್ಪಗಳು. ಒಬ್ಬನಿಗೆ ಗನ್ ಹಿಡಿದು ಜಿಂಕೆಗಳನ್ನು ಸಾಯಿಸುವುದು, ತನ್ನ ಕಾರನ್ನು ಜೋರಾಗಿ ಓಡಿಸಿ ಮನುಷ್ಯರನ್ನೇ ಬಲಿತೆಗೆದುಕೊಳ್ಳುವುದು ಹವ್ಯಾಸದ ಮಟ್ಟಕ್ಕೇರಿತ್ತು. ಇನ್ನೊಬ್ಬನಿಗೆ ಸಿನಿಮಾರಂಗದಲ್ಲಿ ಅವಕಾಶಗಳೇ ಇಲ್ಲದಂತಾಗಿ ಸುನಾಮಿ ನಿರಾಶ್ರಿತರೇ ಆತನಿಗೆ 'ಆಶ್ರಯ' ನೀಡ ಬೇಕಾಯಿತು.

ಇಂತಹ ಮಗಳನ್ನು 'ದಡ' ಸೇರಿಸುವುದಾದರೂ ಹೇಗೆ ಎಂಬ ಚಿಂತೆ ಅವಳ ತಂದೆ-ತಾಯಿಯನ್ನು ಕಾಡಿದರೆ, ಯಾವ ಅಚ್ಚರಿಯೂ ಇಲ್ಲ.

ಅದೇ ಸಮಯಕ್ಕೆ ಒಬ್ಬ 'ಯುವರಾಜ' ಬಂದ. ಆತ ಅವಳಿಗಿಂತ ಎರಡು ವರ್ಷ ಕಿರಿಯ. ಆಕೆ ಅಂತರರಾಷ್ಟ್ರೀಯ ಮಟ್ಟದಲ್ಲೇ ಅಲೆಗಳನ್ನೆಬ್ಬಿಸಿದ್ದರೆ, ಈತ ಇಲ್ಲಿ ಒಂದೇ ಒಂದು ತರಂಗವನ್ನೂ ಸೃಷ್ಟಿಸಿರಲಿಲ್ಲ. ಆದರೆ ಆತ ಭಾರತ ಚಿತ್ರರಂಗದ ಸೂಪರ್‌ಸ್ಟಾರ್‌ನ ಮಗ. ವಿಚಿತ್ರವೆಂಬಂತೆ ಅವಳಿಗೆ ಬೇಡಿಕೆ ಕಡಿಮೆ ಆಗುತ್ತಿರುವಾಗಲೇ ಆತನ ಬೇಡಿಕೆ ಏರುತ್ತಿತ್ತು. ಎಲ್ಲೋ ಒಂದು ಕಡೆ ಎರಡೂ ಸೇರಿಕೊಂಡವು. ಅವರಿಬ್ಬರೂ ಮದುವೆ ಆಗಲು ನಿರ್ಧರಿಸಿದರು.

ಆಕೆ ಭಾರತದ ಸುಂದರಿ ಐಶ್ವರ್ಯ ರೈ. ಆತ ದೇಶದಲ್ಲಿ ಅತಿ ಅರ್ಹನಾದ ವರ ಅಭಿಷೇಕ್ ಬಚ್ಚನ್.

ಇವರಿಬ್ಬರು ಮೊದಲು ಭೇಟಿ ಆಗಿದ್ದು 'ಧಾಯ್ ಅಕ್ಷರ್ ಪ್ರೇಮ್‌ಕೆ' ಎಂಬ ಫ್ಲಾಪ್ ಚಿತ್ರದಲ್ಲಿ ಜೊತೆಯಾಗಿ ನಟಿಸಿದಾಗ. ಆದರೆ ಆಗ ಆಕೆ ಸಲ್ಮಾನ್ ಖಾನ್ ಎಂಬ ಬಟ್ಟೆ ದ್ವೇಷಿಯ ಪ್ರೇಮದ ಉರುಳಿನಲ್ಲಿ ಸಿಲುಕಿಕೊಂಡಿದ್ದಳು. ಆತ ಕರಿಷ್ಮಾ ಕಪೂರ್‌ಳನ್ನು ಮದುವೆ ಆಗುವುದಾಗಿ ನಿರ್ಧರಿಸಿದ್ದ. ಆದರೆ ವಿಧಿ ಇವೆರಡು ಪ್ರೇಮ





ಐಶು-ಅಭಿ ಮದುವೆ!


ಪ್ರಕರಣಗಳಿಗೆ ತಡೆಯೊಡ್ಡಿತು. ತನ್ನನ್ನು ಹೀನಾಯನವಾಗಿ ಥಳಿಸುತ್ತಿದ್ದ ಸಲ್ಮಾನ್ ಖಾನ್‌ನನ್ನು ಐಶ್ವರ್ಯ ತೊರೆದಳು. ಅದೇ ಹೊತ್ತಿಗೆ, ಅಭಿಷೇಕ್‌ನಿಗೆ ಕೈ ಕೊಟ್ಟ ಕರಿಷ್ಮಾ ಇನ್ನೊಬ್ಬನನ್ನು ಮದುವೆಯಾಗಿ ದೆಹಲಿಗೆ ಹಾರಿಹೋದಳು. ಆಮೇಲೆ ಆಕೆ ವಿವೇಕ್ ಓಬರಾಯ್‌ನನ್ನು ವರಿಸಿದರೆ, ಆತ ರಾಣಿ ಮುಖರ್ಜಿಯೊಂದಿಗೆ ಸ್ವಲ್ಪ ಕಾಲ ಸರಸವಾಡಿದ.

ಇದು ಹೀಗೆ ಸಾಗುತ್ತಿದ್ದಾಗ ಅವರಿಬ್ಬರನ್ನು ಜೊತೆಗೂಡಿಸಿದ್ದು 'ಉಮ್ರಾವ್ ಜಾನ್' ಎಂಬ ಚಿತ್ರ. ಆ ಚಿತ್ರವೇನೋ ದೊಡ್ಡ ಫ್ಲಾಪ್ ಆಯಿತು. ಆದರೆ ಅಭಿಷೇಕ್-ಐಶ್ವರ್ಯ ನಡುವೆ ಚಿಗುರಿದ ಪ್ರೇಮ ಹಿಟ್ ಆಯಿತು. ಎಲ್ಲೆಡೆ ಅವರಿಬ್ಬರೂ ಜೊತೆಜೊತೆಯಾಗಿ ಕಾಣಿಸಿಕೊಳ್ಳಲಾರಂಭಿಸಿದರು. ಇವರಿಬ್ಬರ ಮದುವೆ ಖಚಿತ ಎಂದು ಪತ್ರಿಕೆಗಳು ಸಾರಲಾರಂಭಿಸಿದಾಗ ಒಂದು ಸಮಸ್ಯೆ ಎದುರಾ... ಅವರಿಬ್ಬರ ಜಾತಕಗಳು ಹೊಂದುತ್ತಿರಲಿಲ್ಲ. ಅವಳಲ್ಲಿ ಅದೇ... 'ಮಂಗಳ ದೋಷ' ಎಂಬುದಿತ್ತಂತೆ. ಅದನ್ನು ನಿವಾರಿಸುವು... ಹೇಗೆ ಎಂದು ಅಭಿಷೇಕ್‌ನ ತಂದೆ ಅಮಿತಾಭ್ ಬಚ್ಚನ್ ಮ... ತಾಯಿ ಜಯಾ ಸಲಹೆ ಕೇಳಿದ್ದು ಬೆಂಗಳೂರಿನ ಜ್ಯೋ... ಚಂದ್ರಶೇಖರ ಭಟ್ಟನನ್ನು. ಈಗಾಗಲೇ ಇಲ್ಲಿನ ರಾಜ್‌ಕುಮಾ... ಫ್ಯಾಮಿಲಿ, ರಾಕ್‌ಲೈನ್ ವೆಂಕಟೇಶ್, ದೇವೇಗೌಡ ಇತ್ಯಾದಿಗ... ಭವಿಷ್ಯ ನುಡಿಯುವ ಚಂದ್ರಶೇಖರ ಭಟ್ಟ ಅದೇನೇನೋ ಆಚ... ಗಳನ್ನು, ಶುಭ ದಿನಗಳನ್ನು ಸೂಚಿಸಿದನಂತೆ. ಅದನ್ನೆಲ್ಲ ಚಾಚೂ... ಪಾಲಿಸಿದ ಬಚ್ಚನ್ ವಂಶ ವಾರಣಾಸಿಯಿಂದ ಹಿಡಿದು ಹಲವಾ... ದೇವಸ್ಥಾನಗಳಲ್ಲಿ ಪೂಜೆ ಪುರಸ್ಕಾರಗಳನ್ನು ನೆರವೇರಿಸಿತು. ಇದ... ಮುಗಿಯುತ್ತಿದ್ದಂತೆ ಚಂಭಟ್ಟ ಸೂಚಿಸಿದ್ದ ಕೆಟ್ಟ ಕಾಲವೂ ಮುಗಿ... ಶುಭ ಕಾಲ ಪ್ರಾರಂಭವಾಗಿತ್ತು. ಇದಕ್ಕೆ ಸರಿಯಾಗಿ ಅಭಿಷೇ... "ನನ್ನನ್ನು ಮದುವೆ ಆಗುತ್ತೀಯಾ" ಎಂದು ಕೇಳಿದ. ಅ... ಐಶ್ವರ್ಯ "ಹೂ" ಎಂದಿದ್ದಾಳೆ.

ಮದುವೆ ಆದ ಮೇಲೆ ಐಶ್ವರ್ಯ ಏನು ಮಾಡುತ್ತಾ... ಆಕೆ ಚಿತ್ರರಂಗದಲ್ಲಿ ನಟಿಸುವುದನ್ನು ಮುಂದುವರೆಸುತ್ತಾಳೆ... ಅಥವಾ ಜಾಹೀರಾತುಗಳಿಗೆ ಸೀಮಿತಗೊಳ್ಳುತ್ತಾಳೋ? ಹಲ... ಪ್ರಕಾರ ಆಕೆ ತನ್ನ ಕೈಯಲ್ಲಿರುವ ಚಿತ್ರಗಳನ್ನು ಮುಗಿಸಿ ಪ... ಸೊಸೆಯಾಗುತ್ತಾಳೆ. ಏಕೆಂದರೆ ಹಿಂದೆ ಆಕೆಯ ಅತ್ತೆ ಮ... ಮಾವ ಮದುವೆ ಆದಾಗ, ಆಗ ಮಾವನಿಗಿಂತ ಅತ್ತೆಗೇ ಹ... ಬೇಡಿಕೆ ಇದ್ದರೂ ಆಕೆ ಚಿತ್ರರಂಗಕ್ಕೆ ವಿದಾಯ ಹೇಳಿ ಗೃಹಿ... ಯಾಗಿದ್ದರು.

ಇವತ್ತು ಐಶ್ವರ್ಯ ಕೂಡ ಅದೇ ಹಾದಿ ಹಿಡಿಯಬಹು... ಎಂದೇ ಎಲ್ಲರೂ ತರ್ಕಿಸುತ್ತಿದ್ದಾರೆ. ಇದರಿಂದ ಹಿಂದಿ ಚಿತ್ರರ... ನಷ್ಟವಾಗುತ್ತದೆಯೇ? ಎಂಬ ಪ್ರಶ್ನೆಗೆ ಟೀಕಾಕಾರರು ಹೇಳುವು... ಒಂದೇ ಮಾತನ್ನು "ಆಕೆ ಪ್ರತಿಭಾನ್ವಿತ ನಟಿ ಏನಲ್ಲ. ಆದ್ದರ... ಅವಳ ನಿವೃತ್ತಿಯಿಂದ ಚಿತ್ರರಂಗಕ್ಕೆ ಯಾವ ನಷ್ಟವೂ ಇಲ್ಲ!...



ಮತ್ತೆ ಬಾಜು ಕಾಲ

ಮತ್ತೆ ನಿರ್ಮಾಪಕರು ಮತ್ತು ಥಿಯೇಟರ್ ಮಾಲೀಕರ ನಡುವೆ ಜಗಳ ಶುರುವಾಗಲಿದೆಯಾ? ಯಾಕೆ ಈ ಪ್ರಶ್ನೆ ಎಂದರೆ ಮುಂದಿನ ತಿಂಗಳು ಸುಮಾರು ಒಂದು ಡಜನ್ ಚಿತ್ರಗಳು ಬಿಡುಗಡೆಗೆ ತಯಾರಾಗಿದ್ದರೆ ಅವೆಲ್ಲವುಗಳಿಗೆ ಥಿಯೇಟರ್‌ಗಳೇ ಇಲ್ಲದಂತಾಗಿದೆ.


ಉಪೇಂದ್ರ ನಟಿಸಿರುವ 'ಪರೋಡಿ' ಮತ್ತು 'ಮಸ್ತಿ', ದರ್ಶನ್ ನಟಿಸಿರುವ 'ಭೂಪತಿ', ವಿಷ್ಣು-ರಮೇಶ್ ಜೋಡಿಯ 'ಏಕದಂತ', ಪುನೀತ್ ರಾಜ್‌ಕುಮಾರ್ ನಟಿಸಿರುವ 'ಅರಸು', ರಮೇಶ್-ಸಾಕ್ಷಿ ಶಿವಾನಂದ್ ಜೋಡಿಯ 'ಸೌಂದರ್ಯ' ಸೇರಿದಂತೆ 'ದುನಿಯಾ', 'ಪೂಜಾರಿ' ಮುಂತಾದ ಚಿತ್ರಗಳು ಬಿಡುಗಡೆಗಾಗಿ ಸಾಲುಗಟ್ಟಿ ನಿಂತಿವೆ.

ಒಂದೆಡೆ ಎರಡು ಚಿತ್ರಗಳಿಗಿಂತ ಹೆಚ್ಚು ಸಿನಿಮಾಗಳು ಒಂದೇ ವಾರ ಬಿಡುಗಡೆಯಾಗ ಬಾರದೆಂಬ ನಿಯಮ, ಇನ್ನೊಂದೆಡೆ ಈಗಾಗಲೇ ಚಿತ್ರಮಂದಿರವನ್ನು ಗಟ್ಟಿಯಾಗಿ ಆಕ್ರಮಿಸಿಕೊಂಡು ಕೂತಿರುವ 'ಮುಂಗಾರು ಮಳೆ' ಮತ್ತು 'ಸಿಕ್ಸರ್'. ಇಂತಹ ಸಂದರ್ಭದಲ್ಲಿ ಘಟಾನುಘಟಿಗಳ ಚಿತ್ರಗಳಿಗೆ ಥಿಯೇಟರ್‌ಗಳೇ ಇಲ್ಲದಂತಾಗಿದೆ.

ಇದೆಲ್ಲವನ್ನು ನೋಡಿ ಸದ್ಯದಲ್ಲೇ ಅದೆಷ್ಟು ನಿರ್ಮಾಪಕರ ಮನೆ, ಮಠ ಹರಾಜಾಗುತ್ತದೆ ಎಂದು ಗಾಂಧಿಗನಗರದ ಪಂಟರುಗಳು ಆಗಲೇ ಬಾಜು ಕಟ್ಟುತ್ತಿದ್ದಾರೆ.



ಕ್ರೇಜಿ ರವಿಯ ಸಿಲ್ವರ್ ಜ್ಯೂ...



ಕ್ರೇಜಿಸ್ಟಾರ್ ರವಿಚಂದ್ರನ್ ಡಬ್ಬಲ್ ಖುಷಿಯಲ್ಲಿದ್ದಾರೆ. ಇದಕ್ಕೆ ಕಾರಣ 'ನೀಲಕಂಠ' ಹಿಟ್ ಆಗಿದೆ ಎಂದಲ್ಲ ಅಥವಾ ಉದ್ಯಮದ ಸಮಸ್ಯೆಯನ್ನು ತಾನು ಬಗೆಹರಿಸಿದ್ದೇನೆ ಎಂಬುದೂ ಅಲ್ಲ. ಬದಲಾಗಿ ಇದೇ ಫೆಬ್ರವರಿ 8ಕ್ಕೆ ಅವರು ಚಿತ್ರರಂಗಕ್ಕೆ ಕಾಲಿಟ್ಟು ಬರೋಬರಿ 25 ವರ್ಷಗಳಾಗುತ್ತಿವೆ ಎಂಬುದೇ ಅವರ ಸಂತೋಷಕ್ಕೆ ಕಾರಣ. ಈ ಸಿಲ್ವರ್ ಜ್ಯೂಬಿಲಿಯನ್ನು ಅದ್ದೂರಿಯಾಗಿ ಆಚರಿಸ ಬೇಕೆಂಬುದು ರವಿಚಂದ್ರನ್ ಬಯಕೆ. ಅದ ರೊಂದಿಗೆ ಒಂದು ಅದ್ದೂರಿ ಚಿತ್ರವನ್ನು ಅನೌನ್ಸ್ ಮಾಡುವ ಇರಾದೆ.

ಇಲ್ಲಿಯವರೆಗೂ ತಮ್ಮೊಂದಿಗೆ ನಟಿಸಿರುವ ನಾಯಕ-... ನಿರ್ದೇಶಕರುಗಳನ್ನೆಲ್ಲ ಕರೆಸಿ ಒಂದು ದೊಡ್ಡ ಸಮಾರಂಭ ಏ... ಅವರೀಗ ಮುಂಬೈ ಮತ್ತು ಮದ್ರಾಸಿಗೆ ಓಡಾಡುತ್ತಿದ್ದಾರೆ. ರಜ... ಜೂಹಿಚಾವ್ಲಾ, ಶಿಲ್ಪಾಶೆಟ್ಟಿ, ನಾಗಾರ್ಜುನ, ಚಿರಂಜೀವಿ, ಅಮಿತಾಬ... ಮೊದಲಾದವರು ಈ ಸಮಾರಂಭಕ್ಕೆ ಬಂದರೆ ಸುವರ್ಣ ಕರ್ನಾಟಕ ... ಅದೊಂದು ಅದ್ದೂರಿ ಸಮಾರಂಭವಾಗುವುದರಲ್ಲಿ ಅಚ್ಚರಿ ಇಲ್ಲ.

ಆದರೆ ಇಷ್ಟೊಂದು ತಾರೆಯರನ್ನು ಒಂದೇ ಕಡೆ ಸೇರಿಸಲು ... ಅಸಾಧ್ಯಗಳನ್ನು ಸಾಧಿಸುವ ರವಿಚಂದ್ರನ್ ಇಲ್ಲೂ ಗೆಲ್ಲಲಿ ಎಂಬು... ಹಾರೈಕೆ. ಎರಡು ವರ್ಷಗಳ ಹಿಂದೆ ಡಾ. ರಾಜ್‌ಕುಮಾರ್ ... ಕಾಲಿಟ್ಟ 50ನೇ ವರ್ಷವನ್ನು ಆಚರಿಸಲಾಯಿತು. ಇವತ್ತು ರವಿಚಂದ... 25ನೇ ವರ್ಷ. ಅವತಿನದ್ದು ವಜ್ರೇಶ್ವರಿ.... ಇವತ್ತಿನದ್ದು ಈಶ್ವರಿ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone : 2667...
Fax : 26604536, E-mail :lankesh70@rediffmail.com, Printed at Raihans ...